ಸಂಪುಟ: 13 Volume | ಸಂಚಿಕೆ: 306 Issue | ಪುಟಗಳು 08 Pages | ಶನಿವಾರ 24 ಜನವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ · ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ವರ್ಣಾಶ್ರಮ, ಜಾತಿಪದ್ಧತಿ ಮೇಲು ಕೀಳು ಭಾವನೆ ಮುಂತಾದ ಮಧ್ಯಯುಗದ ಕ್ರೂರ ಕರಾಳ ತತ್ವಗಳೆಲ್ಲ ವೈಜ್ಞಾನಿಕ ದೃಷ್ಟಿಯ ಅಗ್ನಿಕುಂಡದಲ್ಲಿ ಭಸ್ಮೀಕೃತವಾಗಬೇಕು.

–ಕುವೆಂಪು

ಬೊಮ್ಮಾನಾಳ್‌ನಿಂದ ಬರುತ್ತಿದ್ದ ಲಾರಿ ಸೀಜ್ 6
ವೇಮನ ಮನುಕುಲದ ಬೆಳಕು 7
ಜೀವನದಲ್ಲಿ ಶುದ್ಧತೆಗೆ ಹೆಚ್ಚಿನ ಆದ್ಯತೆ ಇರಲಿ 8

## ಬೈಕ್, ಟ್ಯಾಕ್ಸಿ ಮೇಲಿನ ನಿಷೇಧ ತೆರವು

**ಬೆಂಗಳೂರು:** ರಾಜ್ಯದಲ್ಲಿ ಬೈಕ್‌ಗಳನ್ನು ಟ್ಯಾಕ್ಸಿಗಳನ್ನಾಗಿ ಬಳಸಲು ಹೈಕೋರ್ಟ್ ಅನುಮತಿ ನೀಡಿದೆ. ಈ ಮೂಲಕ ಬೈಕ್ ಟ್ಯಾಕ್ಸಿಗಳಿಗೆ ನಿಷೇಧ ಹೇರಿದ್ದ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ. ರಾಜ್ಯ ಸರ್ಕಾರ ಬೈಕ್ ಟ್ಯಾಕ್ಸಿ ನಿಷೇಧಿಸಿದ್ದನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಎತ್ತಿಹಿಡಿದಿತ್ತು. ಆದರೆ ಇದೀಗ ವಿಭಾಗೀಯ ಪೀಠ ಆದೇಶ ರದ್ದುಗೊಳಿಸಿ, ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿದೆ. ಊಲಾ, ಊಬರ್ ಮತ್ತಿತರ ಅಗ್ರಿಗೇಟರ್ ಗಳು ಸಲ್ಲಿಸಿದ ಮೇಲ್ಮನವಿಗಳನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಪೀಠ ಮಾನ್ಯ ಮಾಡಿದೆ.

## ಕಾಂತಾರ: ಚಾಪ್ಟರ್ 1 ಶೋ




**ಬೆಂಗಳೂರು:** ಬಹುನಿರೀಕ್ಷಿತ 2025ರ ಬ್ಲಾಕ್ಬಸ್ಟರ್ ಸಿನಿಮಾ 'ಕಾಂತಾರ: ಚಾಪ್ಟರ್ 1' ರ ವಿಶ್ವ ಕಿರುತೆರೆ ಪ್ರೀಮಿಯರ್ ಜ.24 ರಂದು ಸಂಜೆ 7:00 ಗಂಟೆಗೆ ಕೇವಲ ಜೀ ಕನ್ನಡದಲ್ಲಿ ಪ್ರಸಾರವಾಗಲಿದೆ. ವಿಶ್ವದಾದ್ಯಂತ 250 ಕೋಟಿಗೂ ಹೆಚ್ಚು ಹಣವನ್ನು ಸಂಗ್ರಹಿಸಿ, ಕನ್ನಡದ ಅತಿಹೆಚ್ಚು ಗಳಿಕೆಯ ಸಿನಿಮಾ ಎಂಬ ಇತಿಹಾಸ ಬರೆದ ಈ ಚಿತ್ರವು ಈಗ ಕಿರುತೆರೆಗೆ ಪದಾರ್ಪಣೆ ಮಾಡುತ್ತಿದೆ. ರಿಷಬ್ ಶೆಟ್ಟಿ ನಿರ್ದೇಶನದ ಈ ಚಿತ್ರವನ್ನು ಹೊಂಬಾಳೆ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಕಿರಗಂದೂರು ನಿರ್ಮಿಸಿದ್ದಾರೆ.

## ಸಂಚಾರ ದಟ್ಟಣೆ ತಡೆಗೆ ಕ್ರಮ: ಆಯುಕ್ತ

**ಬೆಂಗಳೂರು:** ಜಯನಗರ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತರಾದ ಕೆ.ಎನ್ ರಮೇಶ್ ನೇತೃತ್ವದಲ್ಲಿ ಸಭೆ ನಡೆಯಿತು. ಸಂಚಾರಿ ಪೊಲೀಸ್ ಅಧಿಕಾರಿಗಳು ಹಾಗೂ ಪಾಲಿಕೆಯ ಸಂಚಾರಿ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳೊಂದಿಗೆ ಈ ಕುರಿತು ವಿಸ್ತೃತ ಚರ್ಚೆ ನಡೆಸಲಾಯಿತು. ಅವಶ್ಯಕತೆ ಇರುವ ಕಡೆಗಳಲ್ಲಿ ಹೊಸ ರಸ್ತೆ ಉಬ್ಬುಗಳ ನಿರ್ಮಾಣ, ಎಚ್ಚರಿಕೆ ಫಲಕಗಳನ್ನು ಅಳವಡಿಸಲು ನಿರ್ಧರಿಸಲಾಯಿತು.

## ಸಾರಿಗೆ ಬಸ್ ಡಿಕ್ಕಿ: ಮಗು ಸಾವು




**ರಾಯಚೂರು:** ಸಾರಿಗೆ ಬಸ್ ಹರಿದು ನಾಲ್ಕು ವರ್ಷದ ಹೆಣ್ಣುಮಗು ಮೃತಪಟ್ಟಿದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮದರಕಲ್ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಗಬ್ಬೂರಿನ ವಿದ್ಯಾಶ್ರೀ ಮೃತ ಬಾಲಕಿ. ಸಾರಿಗೆ ಬಸ್ ಗಬ್ಬೂರಿನಿಂದ ದೇವದುರ್ಗಕ್ಕೆ ತೆರಳುತ್ತಿತ್ತು. ಈ ವೇಳೆ ಅಚಾನಕ್ಕಾಗಿ ಅಡ್ಡ ಬಂದ ಕಾರಣ ಮಗುವಿನ ಮೇಲೆ ಬಸ್ ಹರಿದು ದುರ್ಘಟನೆ ಸಂಭವಿಸಿದೆ. ಧಿಡೀರ್ ಆಗಿ ಅಡ್ಡ ಬಂದ ಕಾರಣ ಬಸ್ಸಿನ ಚಕ್ರದಡಿಗೆ ಸಿಲುಕಿ ಮಗು ಮೃತಪಟ್ಟಿದೆ. ಗಬ್ಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಾಗತಿಕ ಕೇಂದ್ರಕ್ಕೆ ನೋಕಿಯ ಒಲವು

**ಬೆಂಗಳೂರು:** ದೂರಸಂಪರ್ಕ ತಂತ್ರಜ್ಞಾನ ಕ್ಷೇತ್ರದ ಜಾಗತಿಕ ದೈತ್ಯ ಸಂಸ್ಥೆಗಳಲ್ಲಿ ಒಂದಾಗಿರುವ ನೋಕಿಯಾ ಕಾರ್ಪೊರೇಷನ್, ರಾಜ್ಯದಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರ (ಜಿಸಿಸಿ) ಮತ್ತು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಒಲವು ವ್ಯಕ್ತಪಡಿಸಿದೆ.

ಕರ್ನಾಟಕದ ಜೊತೆಗೆ 25 ವರ್ಷಗಳ ಸುದೀರ್ಘ ಸಹಯೋಗ ಹೊಂದಿರುವ, ಬೆಂಗಳೂರಿನಲ್ಲಿ ತನ್ನ ಜಾಗತಿಕ ಅತಿದೊಡ್ಡ ಸಂಶೋಧನಾ ಕೇಂದ್ರ ಹೊಂದಿರುವ ನೋಕಿಯಾ, 2ನೆ ಶ್ರೇಣಿಯ ನಗರಗಳೂ ಸೇರಿದಂತೆ ರಾಜ್ಯದಲ್ಲಿ ತನ್ನ ವಹಿವಾಟು ವಿಸ್ತರಣೆ ಸಂಬಂಧ ಮಾತುಕತೆ ನಡೆಸಿದೆ. ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ ಸಮಾವೇಶದಲ್ಲಿ ನೋಕಿಂ–ಯಾದ ಉನ್ನತಾಧಿಕಾರಿಗಳ ಜೊತೆ ನಡೆದ ಸಭೆಯಲ್ಲಿ



ಕಂಪನಿಯ ಭವಿಷ್ಯದ ವಿಸ್ತರಣಾ ಉಪಕ್ರಮಗಳಿಗೆ ರಾಜ್ಯ ಸರ್ಕಾರದ ಸಂಪೂರ್ಣ ಬೆಂಬಲ ನೀಡುವ ಭರವಸೆ ನೀಡಲಾಗಿದೆ? ಎಂದು ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಅವರು ತಿಳಿಸಿದ್ದಾರೆ.

## ಎದುರಾಳಿಗೆ ಪ್ರಧಾನಿ ಮೋದಿ ವಾಗ್ದಾಳಿ

**ತಿರುವನಂತಪುರಂ:** ಕೇರಳ ರಾಜ್ಯದಲ್ಲಿ ವಿಧಾನಸಭೆ ಚುನಾವಣೆಗೂ ಮುನ್ನವೇ ರಾಜಕೀಯ ಕಾವು ಹೆಚ್ಚಾಗಿದೆ. ಕೇರಳದ ರಾಜಧಾನಿ ತಿರುವನಂತಪುರಕ್ಕೆ ಭೇಟಿ ನೀಡಿರುವ ಪ್ರಧಾನಿ ಮೋದಿ ಬೃಹತ್ ರ್ಯಾಲಿ ನಡೆಸಿದ್ದು, ಕೇರಳದಲ್ಲಿನ ರಾಜಕೀಯ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಈ ಬಾರಿ ಕೇರಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಭವಿಷ್ಯ ನುಡಿದಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮಿಳುನಾಡಿನ ಜನರು ಭ್ರಷ್ಟ ಡಿಎಂಕೆ ಸರ್ಕಾರಕ್ಕೆ ವಿದಾಯ ಹೇಳಲು ನಿರ್ಧರಿಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಮಿಳುನಾಡಿನಲ್ಲಿ ಎನ್ಡಿಎ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಲು ಚೆನ್ನೈ ಬಳಿಯ ಮಧುರಾಂತಕಂಗೆ ಭೇಟಿ ನೀಡುವ ಮುನ್ನ ಎಕ್ಸ್



ಖಾತೆಯಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಎನ್ಡಿಎ ಮೈತ್ರಿಕೂಟಗಳ ಆಡಳಿತ ದಾಖಲೆ ಮತ್ತು ಪ್ರಾದೇಶಿಕ ಆಕಾಂಕ್ಷೆಗಳಿಗೆ ಬದ್ಧತೆಯು ರಾಜ್ಯದ ಜನರೊಂದಿಗೆ ಸಾಮರಸ್ಯವನ್ನುಂಟುಮಾಡುತ್ತಿದೆ ಎಂದು ಹೇಳಿದ್ದಾರೆ.

# ಬಿಜೆಪಿ V/S ಕಾಂಗ್ರೆಸ್ ಫೈಟ್

## ಸದನದಲ್ಲಿ ಮಾತಿನ ಕದನ | ಅಶಿಸ್ತಿನ ಪರಾಕಾಷ್ಠೆ ಮೆರೆದ ಜನಪ್ರತಿನಿಧಿಗಳು | ಅಧಿವೇಶನ ಮುಂದೂಡಿಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸರ್ಕಾರದ ಭಾಷಣ ಓದಲು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ನಿರಾಕರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡೂ ರಾಷ್ಟ್ರೀಯ ಪಕ್ಷಗಳ ಕದನಕ್ಕೆ ಸದನ ಸಾಕ್ಷಿಯಾಗಿದೆ. ಒಂದರ್ಥದಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಗಿದ್ದು, ಕಾಂಗ್ರೆಸ್ ನಾಯಕರು ರಾಜ್ಯಪಾಲರಿಗೆ ಧಿಕ್ಕಾರ ಕೂಗಿದ್ದರು. ಪ್ರತಿಯಾಗಿ ಬಿಜೆಪಿ, ಜೆಡಿಎಸ್ ಶಾಸಕರು ವಾಕ್ಸಮರ ನಡೆಸಿ ಸದನದಲ್ಲಿ ಅಶಿಸ್ತಿನ ಪರಾಕಾಷ್ಠೆ ಮೆರೆದಿದ್ದಾರೆ.

**ಹರಿಪ್ರಸಾದ್ ಉಚ್ಚಾಟಿಸಿ:** ಏತನ್ಮಧ್ಯೆ ರಾಜ್ಯಪಾಲರನ್ನು ಅವಮಾನಿಸಿರುವ ಕಾಂಗ್ರೆಸ್ ಸದಸ್ಯ ಬಿ ಕೆ ಹರಿಪ್ರಸಾದ್ ಅವರನ್ನು ಸದನದಿಂದ ಅಮಾನತು ಗೊಳಿಸಬೇಕು ಎಂದು ಒತ್ತಾಯಿಸಿ ಪ್ರತಿಪಕ್ಷ ಬಿಜೆಪಿ ಸದಸ್ಯರು ವಿಧಾನ ಪರಿಷತ್‌ನಲ್ಲಿ ಗದ್ದಲ ಉಂಟುಮಾಡಿದ್ದರಿಂದ ಕಲಾಪವನ್ನು ಕೆಲಕಾಲ ಮುಂದೂಡಲಾಯಿತು. ಗುರುವಾರ ಸರ್ಕಾರ ನೀಡಿದ ಪೂರ್ಣ ಭಾಷಣವನ್ನು ಓದದೆ ಹೋಗುತ್ತಿದ್ದ ರಾಜ್ಯಪಾಲರನ್ನು ತಡೆಯಲು ಬಿಕೆ ಹರಿಪ್ರಸಾದ್ ಪ್ರಯತ್ನಿಸಿದ್ದರು.

**ಗೂಂಡಾಗಿರಿ ಸಹಿಸಲ್ಲ:** ಅಧಿವೇಶನ ಆರಂಭವಾದ ಕೂಡಲೇ ರಾಜ್ಯಪಾಲರೊಂದಿಗೆ ಅಶಿಸ್ತಿನ ವರ್ತನೆ ತೋರಿದ ಹರಿಪ್ರಸಾದ್ ಅವರನ್ನು ಸದನದಿಂದ ವಜಾಗೊಳಿಸುವಂತೆ ಬಿಜೆಪಿ ಶಾಸಕರು ಒತ್ತಾಯಿಸಿದರು. ನಾವು ಗೂಂಡಾಗಿರಿಯನ್ನು ಸಹಿಸುವುದಿಲ್ಲ ಎಂದು ಆಗ್ರಹಿಸಿದ್ದಾರೆ.





### ಸಂವಿಧಾನದ ವಿಧಿ ಉಲ್ಲಂಘನೆ

ಸಚಿವ ಸಂಪುಟ ಸಿದ್ಧಪಡಿಸಿದ ಭಾಷಣವನ್ನು ಓದದೇ, ಸಂವಿಧಾನದ ವಿಧಿಗಳನ್ನು ಉಲ್ಲಂಘಿಸಿದ್ದಾರೆ. ಸಂವಿಧಾನದ ಕಲಂ 176, 163 ರಂತೆ ಸಚಿವ ಸಂಪುಟ ಭಾಷಣ ಓದಲೇಬೇಕು. ಇದು ಸಂವಿಧಾನ ಸ್ಥಾಪನೆಯಾದಾಗಿನಿಂದ ನಡೆದುಕೊಂಡು ಬಂದ ಪದ್ಧತಿ. ರಾಜ್ಯಪಾಲರ ಈ ನಡೆ, ಜನಪ್ರತಿನಿಧಿಗಳ ಸಭೆಗೆ ಮಾಡಿದ ಅವಮಾನ. ಸಂವಿಧಾನಬದ್ಧವಾದ ವಿಚಾರದ ಉಲ್ಲಂಘನೆ ಎಂದಿದ್ದಾರೆ ಸಿಎಂ ಸಿದ್ರಾಮಯ್ಯ.

### ಅವ್ರ ಏಟಿಗೆ, ಎದಿರೇಟು

ರಾಜ್ಯಪಾಲರು ರಾಷ್ಟ್ರಗೀತೆಗೆ ಅವಮಾನ ಮಾಡಿದ್ದಾರೆ ಎಂಬ ಕಾಂಗ್ರೆಸ್ ಆರೋಪವನ್ನು ತಳ್ಳಿಹಾಕಿದ ಬಿಜೆಪಿ ಶಾಸಕರು ಗೆಹ್ಲೋಟ್ ಹೊರನಡೆಯುತ್ತಿದ್ದಂತೆ ರಾಷ್ಟ್ರಗೀತೆಯನ್ನು ನುಡಿಸುತ್ತಿರಲಿಲ್ಲ. ರಾಜ್ಯಪಾಲರಿಗೆ ಮಾಡಿದ ಅವಮಾನ ಸಂವಿಧಾನಕ್ಕೆ ಮಾಡಿದ ಅವಮಾನ ಎಂದಿದ್ದಾರೆ. ಉತ್ತರಿಸಿದ ಹರಿಪ್ರಸಾದ್, ಪೋಕ್ಸೋ ಪ್ರಕರಣದ ನಾಯಕರಿಗೆ ಹಾರ ಹಾಕುವ ಪಕ್ಷದವರು. ಇವರಿಂದ ಪಾಠ ಕಲಿಯಬೇಕಾ ಎಂದು ಪ್ರಶ್ನಿಸಿದ್ದಾರೆ.





### ಅದ್ರಿಗೆ ಹಂಗೆ, ಇದ್ರಿಗೆ ಹಿಂಗೆ

ರಾಜ್ಯಪಾಲರು ಸಂವಿಧಾನದ ಆಶಯದಂತೆ ಕರ್ತವ್ಯ ನಿಭಾಯಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ನೇಮಿತ ಗೌರ್ನರ್ ಈ ಹಿಂದೆ ಇದೇ ರೀತಿಯಲ್ಲೇ ನಡೆದುಕೊಂಡಿದ್ದರು. ಆಗ ಯಾರೂ ಅವರಿಗೆ ಅಗೌರವ ತೋರಲಿಲ್ಲ. ಆದರೆ ಇಂದು ರಾಜ್ಯಪಾಲರ ಮೇಲೆ ಗೂಂಡಾಗಿರಿ ಪ್ರದರ್ಶಿಸಿದ್ದಾರೆ. ಅವರನ್ನು ತಳ್ಳಲು ಯತ್ನಿಸಿ, ಘೇರಾವ್ ಹಾಕಿದ್ದಾರೆ ಎಂದು ಪ್ರತಿಪಕ್ಷದ ನಾಯಕ ಅಶೋಕ ದೂರಿದ್ದಾರೆ.

### ಜನತೆ ಕ್ಷಮೆ ಕೇಳ್ಬೇಕು

ಜಂಟಿ ಅಧಿವೇಶನದಲ್ಲಿ ಸರ್ಕಾರ ಸಿದ್ಧಪಡಿಸಿದ ಭಾಷಣ ಮಾಡದೆ, ರಾಷ್ಟ್ರಗೀತೆಗೂ ಅಪಮಾನಿಸಿ, ನಿರ್ಗಮಿಸಿದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ರಾಜ್ಯದ ಜನತೆ– ಸದನದ ಕ್ಷಮೆ ಕೇಳಬೇಕು. ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆ ಇವೆ. ರಾಜ್ಯಪಾಲರು ರಾಷ್ಟ್ರಗೀತೆಗೆ ಕಾಯದೆ ತೆರಳಿದ್ದಾರೆ. ಸಂವಿಧಾನ ಸೆಕ್ಷನ್ 51 ಉಲ್ಲಂಘನೆ ಆಗಿದೆ ಎಂದು ಕಾನೂನು ಸಚಿವ ಎಚ್ ಕೆ ಪಾಟೀಲ್ ಆಗ್ರಹಿಸಿದ್ದಾರೆ.

## 22 ಮಠಗಳಿಗೆ 40 ಎಕರೆ ಭೂಮಿ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಉತ್ತರ ತಾಲೂಕಿನ ದಾಸನಪುರ ಹೋಬಳಿಯ ರಾವುತ್ತನಹಳ್ಳಿ ಗ್ರಾಮದ ಕ್ರಮ ಸಂಖ್ಯೆ 57 ಮತ್ತು 58 ರಲ್ಲಿ ದಲಿತ ಮತ್ತು ಹಿಂದುಳಿದ ವರ್ಗಗಳ 22 ಮಠಗಳಿಗೆ 40 ಎಕರೆ ಭೂಮಿ ಹಂಚಿಕೆ ಮಾಡಲು ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ.

ಸಂಬಂಧಪಟ್ಟ ಧಾರ್ಮಿಕ ಸಂಸ್ಥೆಗಳು ಕೃಷಿ ಭೂಮಿಯ ಸಬ್–ರಿಜಿಸ್ಟ್ರಾರ್ ಮೌಲ್ಯದ ಶೇಕಡಾ 5ರಿಂದ 10ರಷ್ಟು ನಾಮಮಾತ್ರವನ್ನು ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ. ಡಿ. 31, 2027 ರವರೆಗೆ ಹೊರಡಿಸಲಾದ ಎಲ್ಲಾ ಸಂಬಂಧಿತ ಅಧಿಸೂಚನೆಗಳಲ್ಲಿ ರಾಜ್ಯ ನಾಗರಿಕ ಸೇವೆಗಳಲ್ಲಿನ ಖಾಲಿ ಹುದ್ದೆಗಳಿಗೆ ಎಲ್ಲಾ ವರ್ಗಗಳಿಗೆ 5 ವರ್ಷಗಳ ವಯೋಮಿತಿಯನ್ನು ಸಡಿಲಿಸಲು ಸಂಪುಟವು ಅನುಮೋದನೆ ನೀಡಿದೆ.

## ಅಕ್ಕಿ ಉತ್ಪಾದನೆಯಲ್ಲಿ ಭಾರತ ನಂ.1

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಒಂದು ಕಾಲಕ್ಕೆ ಆಹಾರಕ್ಕಾಗಿ ಶ್ರೀಮಂತ ರಾಷ್ಟ್ರಗಳ ಮೊರೆ ಹೋಗಿದ್ದ ಭಾರತ ಇಂದು ಚೀನಾವನ್ನೂ ಮೀರಿ ಜಗತ್ತಿನಲ್ಲೇ ಅಕ್ಕಿ ಉತ್ಪಾದನೆಯಲ್ಲಿ ನಂ.1 ರಾಷ್ಟ್ರವಾಗಿ ಹೊರಹೊಮ್ಮಿದೆ.

2030ರೊಳಗೆ ಜಗತ್ತಿನ ರಾಷ್ಟ್ರಗಳ ಭಾರತದ ಆಹಾರ, ಹಣ್ಣು, ತರಕಾರಿಯೂ ನಂ.ಒನ್ ಆಗಬೇಕೆನ್ನುವುದು ಕೇಂದ್ರ ಸರಕಾರದ ಗುರಿ. ಆಫ್ರಿಕಾ ಸಹಿತ ಜಗತ್ತಿನ ಏಳು ಖಂಡ ರಾಷ್ಟ್ರಗಳ ಹಸಿವು ತಣಿಸುವಲ್ಲಿ ಭಾರತವೇ ದೊಡ್ಡಣ್ಣ. 1990ರ ನಂತರ ಭಾರತ ಅಕ್ಕಿ ಸಹಿತ ಆಹಾರ ರಫ್ತಿನಲ್ಲಿ ಮೈಲಿಗಲ್ಲು ಸ್ಥಾಪಿಸಿದೆ. ಪ್ರಸ್ತುತ 150ಕ್ಕೂ ಅಧಿಕ ದೇಶಗಳಿಗೆ ಭಾರತ ಆಹಾರ ರಫ್ತಿನಲ್ಲಿ ತೊಡಗಿದೆ. ಭತ್ತದ ಜಾಗತಿಕ ಒಟ್ಟು ಉತ್ಪಾದನೆಯಲ್ಲಿ ಭಾರತದ ಪಾಲು ಶೇ.28ರಷ್ಟಿದೆ. ಸಾವಯವ/ವಿಷಮುಕ್ತ ಆಹಾರದ ಗುರಿಯ ಹಾದಿಯಲ್ಲಿ ರಾಸಾಯನಿಕ ಬಳಕೆ ಕಡಿಮೆ ಮಾಡಿ ಸ್ವಚ್ಛ, ಆರೋಗ್ಯಕರ ಆಹಾರವನ್ನು ಜಗತ್ತಿನ ರಾಷ್ಟ್ರಗಳಿಗೆ ಒದಗಿಸುವುದು ಭಾರತದ ಗುರಿಯಾಗಿದೆ.

## ಶುದ್ಧತೆಗೆ ಹೆಚ್ಚಿನ ಬೇಕು ಆದ್ಯತೆ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ದಿನ ನಿತ್ಯದ ಜೀವನದಲ್ಲಿ ಶುದ್ಧತೆಗೆ ಹೆಚ್ಚು ಮಹತ್ವ ಕೊಡಬೇಕಾಗಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಜನಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಶಿವು ಲೋಖಂಡೆ ತಿಳಿಸಿದ್ದಾರೆ. ಪಟ್ಟಣದ ಸದ್ಗುರು ವಿದ್ಯಾಲಯದಲ್ಲಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಶುದ್ಧಗಂಗಾ ಹಾಗೂ ಕೆರೆ ಅಭಿವೃದ್ಧಿ ವಿಭಾಗದ ವತಿಯಿಂದ ಆಯೋಜಿಸಿದ್ದ ಶುದ್ಧ ಕುಡಿಯುವ ನೀರಿನ ಯೋಜನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು ಮಾತನಾಡಿ, ಲಕ್ಷ ಗಟ್ಟಲೆ ಹಣ ವ್ಯಯಮಾಡಿ ಮೊಬಾಯಿಲ್ ಬಳಸುವ ನಾವು ಮನೆಯಲ್ಲಿ ಒಂದು ಶೌಚಾಲಯ ನಿರ್ಮಿಸಿಕೊಳ್ಳುವುದಿಲ್ಲ. ಹಳ್ಳಿಗಳಲ್ಲಿ ಎಲ್ಲರೂ ಬಹಿರ್ದೆಶೆಯ ದಾಸರಾಗಿದ್ದೇವೆ. ಇದರಿಂದ ನಮ್ಮ ಪರಿಸರದ ಮೇಲಾಗುವ ಪರಿಣಾಮ ಭಯಂಕರವಾಗಿದೆ ಎಂದಿದ್ದಾರೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ಸಂತೋಷ ನಾಯಕ ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಶುದ್ಧಗಂಗಾ ಸೇರಿ ಅನೇಕ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಎಂದು ನುಡಿದಿದ್ದಾರೆ. ಜನಜಾಗೃತಿ ವೇದಿಕೆಯ ಮಾಧ್ಯಮ ಪ್ರತಿನಿಧಿ ಸಂತೋಷ ಬಿಜಿಪಾಟೀಲ ಮಾತನಾಡಿದ್ದಾರೆ. ಸದ್ಗುರು ವಿದ್ಯಾಲಯದ ಅಧ್ಯಕ್ಷ ಅಕ್ಷಯಕುಮಾರ ಮುದ್ದಾ ಅಧ್ಯಕ್ಷತೆ, ವಹಿಸಿದ್ದು, ಶುದ್ಧಗಂಗಾ ವಿಭಾಗದ ಸಂಜುಕುಮಾರ್, ಕಸಾಪ ಅಧ್ಯಕ್ಷ ನಾಗಭೂಷಣ ಮಾಮಡಿ, ಜಯರಾಜ ದಾಬಶೆಟ್ಟಿ, ವೀರಣ್ಣ ಪರಸಣೆ ಇತರರು ಉಪಸ್ಥಿತರಿದ್ದರು.

## ಗೋ ಬ್ಯಾಕ್ ಗವರ್ನರ್ ಕೈ ನಾಟಕ

• ಮಲ್ಲಮ್ಮ ನುಡಿ ವಾರ್ತೆ ಮಂಡ್ಯ

ರಾಜ್ಯಪಾಲರ ವಿರುದ್ಧ ಗೋ ಬ್ಯಾಕ್ ಗೋ ಬ್ಯಾಕ್ ಎನ್ನುತ್ತಿರುವ ರಾಜ್ಯ ಕಾಂಗ್ರೆಸ್ ಏನು ಸಾಧಿಸುವುದಿಲ್ಲ. ಗೋ ಬ್ಯಾಕ್ ಗವರ್ನರ್ ಅನ್ನೋದು ಕೇವಲ ರಾಜಕೀಯ ನಾಟಕ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪ ಮಾಡಿದ್ದಾರೆ.



ಬದಲಿಗೆ ಎರಡೂ ಮುಕ್ಕಾಲು ವರ್ಷಗಳಲ್ಲಿ ನಡೆಸಿರುವ ಅನ್ಯಾಯ, ಅಕ್ರಮಗಳನ್ನು ಮರೆಮಾಚಲು ವಿಬಿ ಜಿ ರಾಮ್ ಜಿ ಯೋಜನೆಯ ಬಗ್ಗೆ ಕಾಂಗ್ರೆಸ್ ಸರ್ಕಾರ ಅಪಪ್ರಚಾರ ಮಾಡುತ್ತಿದೆ ಎಂದು ದೂರಿದ್ದಾರೆ.

ಈ ಹಿಂದೆ ಕಾಂಗ್ರೆಸ್ ರಾಜ್ಯಪಾಲರುಗಳ ವಿಷಯದಲ್ಲಿ ಹೇಗೆ ನಡೆದುಕೊಂಡಿತ್ತು ಎಂಬುದರ ಬಗ್ಗೆ ಒಮ್ಮೆ ನೆನಪು ಮಾಡಿಕೊಂಡರೆ ಅವರ ಬಣ್ಣ ಏನೆಂದು ಗೊತ್ತಾಗುತ್ತದೆ. ವಿಶೇಷ ಅಧಿವೇಶನ ಕರೆದು ಅಲ್ಲಿ ಸಮಯ ಪೋಲು ಮಾಡುತ್ತಿದ್ದಾರೆ. ರಾಜ್ಯಪಾಲರು ಭಾಷಣ ಓದದಿರುವ ಅಥವಾ ಮೊಟಕುಗೊಳಿಸಿರುವ ಘಟನೆ ಇದೇ ಮೊದಲ ಬಾರಿ ನಡೆದಿದ್ದು ಅಲ್ಲ. ಜೆ.ಹೆಚ್. ಪಟೇಲರು ಸಿಎಂ ಆಗಿದ್ದಾಗ ಡಿಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಅಂದಿನ ಸಂದರ್ಭವನ್ನು ನೆನಪು ಮಾಡಿಕೊಳ್ಳಬೇಕು. ಮನರೇಗಾ ವಿಷಯ ಇಟ್ಟಿಕೊಂಡು ಕೇಂದ್ರ ಸರ್ಕಾರವನ್ನು ನಿಂದಿಸುವುದು ಈ ಸರ್ಕಾರದ ಉದ್ದೇಶ. ಅದಕ್ಕಾಗಿಯೇ ವಿಶೇಷ ಅಧಿವೇಶನ ಕರೆದಿದ್ದಾರೆ ಎಂದು ಕಿಡಿಕಾರಿದ್ದಾರೆ.

## ಕಾಡ್ಗಿಚ್ಚು ನಿಯಂತ್ರಣಕ್ಕೆ ಕಟ್ಟೆಚ್ಚರ



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಥಸಪ್ತಮಿಯ ಬಳಿಕ ಬಿಸಿಲು ಹೆಚ್ಚಾಗಿ ಕಾಡ್ಗಿಚ್ಚಿನ ಅಪಾಯವೂ ಹೆಚ್ಚುವ ಕಾರಣ ಎಲ್ಲ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಅರಣ್ಯಾಧಿಕಾರಿಗಳಿಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ. ವಿಡಿಯೋ ಕಾನ್ಫರೆನ್ಸ್ ಮೂಲಕ ಎಲ್ಲ ಅರಣ್ಯ ಮತ್ತು ವನ್ಯಜೀವಿ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಾಡಿನ ಬೆಂಕಿಗೆ ಅರಣ್ಯ ಸಂಪತ್ತು ನಾಶವಾಗದ ರೀತಿಯಲ್ಲಿ ಕಟ್ಟೆಚ್ಚರ ವಹಿಸಬೇಕು, ಡ್ರೋನ್ ಸೌಲಭ್ಯ ಇರುವ ಕಡೆ ಕ್ಯಾಮರಾ ಮೂಲಕ ನಿಗಾ ಇಡಬೇಕು, ಗಸ್ತು ಹೆಚ್ಚಿಸಿ, ಸೂಕ್ಷ್ಮ ಪ್ರದೇಶಗಳಲ್ಲಿ ಸಿಬ್ಬಂದಿ ಎಚ್ಚರದಿಂದ ಇರಬೇಕು ಎಂದು ತಿಳಿಸಿದ್ದಾರೆ. ಬೇಸಿಗೆಯಲ್ಲಿ ವನ್ಯಜೀವಿಗಳಿಗೆ ಕಾಡಿನಲ್ಲಿ ಮೇವು ಮತ್ತು ಕುಡಿಯುವ ನೀರಿನ ಕೊರತೆ ಆಗದಂತೆಯೂ ಎಚ್ಚರ ವಹಿಸಲು, ಜಲಗುಂಡಿಗಳಿಗೆ ಸೌರ ಪಂಪ್ ಗಳ ಮೂಲಕ ಕೊಳವೆ ಬಾವಿಯಿಂದ ನೀರು ಹರಿಸಲೂ ಸೂಚಿಸಿದ್ದಾರೆ.

### ಡ್ರೋನ್ ಕ್ಯಾಮರಾ ನಿಗಾಕ್ಕೆ ಸೂಚನೆ

ಪ್ರತಿ ವರ್ಷ ಶಿವರಾತ್ರಿ, ಯುಗಾದಿ ಮತ್ತು ದೀಪಾವಳಿಯ ಸಂದರ್ಭದಲ್ಲಿ ಮಾದಪ್ಪನ ಭಕ್ತರು ಅರಣ್ಯಮಾರ್ಗವಾಗಿ ಪಾದಯಾತ್ರೆಯಲ್ಲಿ ಮಲೆ ಮಹದೇಶ್ವರ ಬೆಟ್ಟಕ್ಕೆ ಬರುವುದು ಹಿಂದಿನಿಂದ ನಡೆದುಕೊಂಡು ಬಂದಿದೆ, ಭಕ್ತರು ಕಾಲುದಾರಿಯಲ್ಲಿ ಮೆಟ್ಟಿಲೇರಿ ಬರುವ ಮಾರ್ಗದಲ್ಲಿ ಡ್ರೋನ್ ಕ್ಯಾಮರಾ ಅಳವಡಿಸಿ ಸತತ ನಿಗಾ ಇಡುವಂತೆ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

## ರಾಜ್ಯಪಾಲರ ನಡೆ ಪ್ರಜಾಪ್ರಭುತ್ವದ ವಿರೋಧಿಯಾಗಿದೆ. ಒಕ್ಕೂಟದ ವ್ಯವಸ್ಥೆಗೆ ಅದು ಒಗ್ಗಲ್ಲ: ಸಚಿವ ಮಹಾದೇವಪ್ಪ

# ಕುಟುಂಬಸ್ಥರನ್ನು ನೆನೆದು ವಾಹನ ಚಲಾಯಿಸಿ: ನ್ಯಾ. ಬನಸೋಡೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್:**



ರಸ್ತೆಯ ಮೇಲೆ ವಾಹನ ಓಡಿಸುವ ಎಲ್ಲ ಚಾಲಕರುಗಳು ತಮ್ಮ ಕುಟುಂಬವನ್ನು ನೆನೆದು ವಾಹನ ಚಲಾಯಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಗೌರವಾನ್ವಿತ ನ್ಯಾಯಾಧೀಶರಾದ ಪ್ರಕಾಶ ಅರ್ಜುನ ಬನಸೋಡೆ ಕಿವಿ ಮಾತು ಹೇಳಿದರು.

ಬೀದರನಗರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಗುರುವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೊಲೀಸ ಇಲಾಖೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ (ಕೆಎ 38) ಹಾಗೂ ಬೀದರ ಮೋಟಾರು ವಾಹನಗಳ ತರಬೇತಿ ಶಾಲೆ, ಸರಕಾರಿ ಪಾಲಿಟೆಕ್ನಿಕ್ ಕಾಲೇಜು ಬೀದರ, ರಾಷ್ಟ್ರೀಯ ಸೇವಾ ಯೋಜನೆಯವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಹಲವರು ವಾಹನಗಳಿಗೆ ಇನ್ಸುರೆನ್ಸ್ ಮಾಡಿಸುತ್ತಿಲ್ಲ. ಹಾಗೆಯೇ ರಸ್ತೆಯ ಮೇಲೆ ಓಡಿಸುತ್ತಿದ್ದಾರೆ. ಅಪಘಾತಕ್ಕೆ ಒಳಗಾದರೆ ಜೀವದ ಜತೆಗೆ ಆಸ್ತಿಯೂ ಹೋಗುತ್ತದೆ. ಆದ್ದರಿಂದ ಇನ್ನು ಮೇಲೆ ಆದರು ಎಲ್ಲರೂ ವಾಹನ ವಿಮೆ ಮಾಡಿಸಬೇಕು ಎಂದು ನ್ಯಾಯಾಧೀಶರು ಸಲಹೆ ಮಾಡಿದರು. ಬೈಕ್ ಸವಾರರು ಹಾಗೂ ವಾಹನ ಚಾಲಕರು ಕಡ್ಡಾಯವಾಗಿ 18 ವರ್ಷ ಆದ ಮೇಲೆ ಲೈಸೆನ್ಸ್ ಪಡೆದು ವಾಹನ ಚಲಾಯಿಸಬೇಕು. ಲೈಸೆನ್ಸ್ ಇಲ್ಲವಾದರೆ ಅಪಘಾತ ನಡೆದರೆ ಅವರಿಗೆ ವಿಮೆ ಕ್ಲೇಮ್ ಆಗುವುದಿಲ್ಲ. ಅಲ್ಲದೆ ಅವರ ಪಾಲಕರ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ವಾಹನದ ಎಲ್ಲ ದಾಖಲೆಗಳನ್ನು ಸರಿಯಾದ ಸಮಯಕ್ಕೆ ನವೀಕರಿಸಿಕೊಳ್ಳಬೇಕು. ಈ ವಿಷಯದಲ್ಲಿ ಯಾರೂ ನಿರ್ಲಕ್ಷ ಮಾಡಬಾರದು ಎಂದು ನ್ಯಾಯಾಧೀಶರಾದ ಪ್ರಕಾಶ್ ಅರ್ಜುನ ಬನ್ಸೋಡೆ ಹೇಳಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಜಿ.ಕೆ. ಬಿರಾದಾರ ಅವರು ಮಾತನಾಡಿ, ದೇಶದಲ್ಲಿ ಶೇ.80 ರಷ್ಟು ಜನರು ವಾಹನಗಳನ್ನೇ ಅವಲಂಬಿಸಿದ್ದಾರೆ. ಇವರುಗಳು ವಾಹನಗಲ ವೇಗದ ಮಿತಿಯನ್ನು 30 ರಿಂದ 40 ರಲ್ಲಿ ಇರುವಂತೆ ನೋಡಿಕೊಳ್ಳಬೇಕು. ಅಲ್ಲದೆ ರಸ್ತೆ ಸುರಕ್ಷತೆಯ ನಿಯಮಗಳನ್ನು ಪಾಲಿಸಬೇಕು. ಇದರಿಂದ ಜೀವ ಉಳಿಸಬಹುದು ಎಂದು ಸಲಹೆ ನೀಡಿದರು. ರಸ್ತೆ ಸುರಕ್ಷತಾ ನಿಯಮಗಳ ಪಾಲನೆ ಮಾಡದ ಕಾರಣ ನಿತ್ಯ ಹಲವೆಡೆ ಅಪಘಾತಗಳು ಆಗುವುದನ್ನು ನಾವು ನೋಡುತ್ತೇವೆ. ಆದ್ದರಿಂದ ಎಲ್ಲರೂ ರಸ್ತೆ ಸುರಕ್ಷತೆಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಹೆಲ್ಮೇಟ್ ಬಳಕೆ, ಸೀಟ ಬೇಲ್ಟ್ ಬಳಕೆ ಮಾಡುವುದನ್ನು ರೂಢಿ ಮಾಡಿಕೊಳ್ಳಬೇಕು. ಇದರಿಂದ ಕಾನೂನು ಪಾಲನೆ ಮಾಡಿದಂತೆಯೂ ಆಗುತ್ತದೆ. ಅಲ್ಲದೆ ತಮ್ಮ ಅಮೂಲ್ಯವಾದ ಜೀವವೂ ಉಳಿಯುತ್ತದೆ ಎಂದು ಜಿ.ಕೆ. ಬಿರಾದಾರ ನುಡಿದರು. ಸಂಚಾರಿ ಪೊಲೀಸ್ ಠಾಣೆಯ ಪಿಐ ರಮೇಶ್ ಮೈಲೂರಕರ ಮಾತನಾಡಿ. ವರ್ಷಕ್ಕಿಂತ ಕಡಿಮೆ ಬಯಸ್ಸಿನವರು ವಾಹನ ಚಲಾಯಿಸಿದರೆ 25ಸಾವಿರ ರೂ. ದಂಡ ವಿಧಿಸಲಾಗುತ್ತದೆ. ಆದ್ದ–ರಿಂದ ಅರ್ಹರು ಮಾತ್ರ ಬೈಕ್ ಹಾಗೂ ವಾಹನ ಚಲಾಯಿಸಬೇಕು. ಇಲ್ಲವಾದರೆ ಅವರ ಪಾಲಕರಿಗೆ ದಂಡ ಬೀಳುತ್ತದೆ ಎಂದು ಎಚ್ಚರಿಸಿದರು.

ರಸ್ತೆ ಮೇಲೆ ಅಪಘಾತ ನಡೆದ–ರೆ ಗಾಯಾಳುಗಳನ್ನು ಕೂಡಲೇ ಅಲ್ಲಿದ್ದವರು ಸಮೀಪದ ಆಸ್ಪತ್ರೆಗೆ ದಾಖಲಿಸಬೇಕು. ಅಪಘಾತ ನಡೆದ ಒಂದು ಗಂಟೆಯ ಒಳಗಾಗಿ ಗಾಯಾಳುವನ್ನು ಆಸ್ಪತ್ರೆಗೆ ದಾಖಲು ಮಾಡಿ, ಗೋಲ್ಡನ್ ಅವರ್‌ನಲ್ಲಿ ಜೀವ ಉಳಿಸಯುವ ಯತ್ನವನ್ನು ಎಲ್ಲರೂ ಮಾಡಬೇಕು. ಅದು ಬಿಟ್ಟು ಮೊಬೈಲ್‌ನಲ್ಲಿ ಸೆರೆಹಿಡಿಯುವುದನ್ನು ಮಾಡಬೇಕು ಎಂದು ಮನವಿ ಮಾಡಿದರು.

ಕಾಲೇಜಿನ ಪ್ರಾಚಾರ್ಯರಾದ ವಿಜಯಕುಮಾರ ಎಸ್. ಜಾಧವ್ ಮಾತನಾಡಿದರು. ಕಾರ್ಯಕ್ರಮದ ವೇದಿಕೆಯ ಮೇಲೆ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಕುಲಸಚಿವರಾದ ಶೇಖ್ ಸಿರಾಜುದ್ದಿನ್. ಮೋಟಾರು ವಾಹನ ನಿರೀಕ್ಷಕ ಹುಸೇನ ಸಾಬ ನದಾಫ ಇದ್ದರು. ಕರ್ನಾಟಕ ರಾಜ್ಯ ಮೋಟಾರು ವಾಹನ ತರಬೇತಿ ಶಾಲೆಯ ಸಂಘಟ ಸಂಘಟನಾ ರಾಜ್ಯ ಕಾರ್ಯದರ್ಶಿ ಶಿವರಾಜ ಜಮಾದಾ ಖಾಜಾಪುರ ಕಾರ್ಯಕ್ರಮದ ನಿರೂಪಣೆ ಮಾಡಿದರು. ನಾಗರಾಜ ವಂದನೆ ಹೇಳಿದರು. ಕಾರ್ಯಕ್ರಮದಲ್ಲಿ ಅರುಣ ಮೊಕಾಶಿ, ಉಮೇಶ ತೇಗಂಪುರ, ಶೈಲಜಾ ಶಮರಾವ, ತುಕಾರಾಮ ಚವ್ಹಾಣ, ಗೌತಮಕುಮಾರ ಹೊಸಮನಿ, ವಿಕಾಸ ಕಾಂಬಳೆ ಹಾಗೂ ಕಾಲೇಜು ವಿದ್ಯಾರ್ಥಿಗಳು ಇದ್ದರು.

# ಮಹಾಲಕ್ಷ್ಮಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಗ್ರಾಮಸ್ಥರು



• **ಮಲ್ಲಮ್ಮ ನುಡಿ ವಾರ್ತೆ ಬೀದರ್ :**

ಬೀದರ್ ತಾಲುಕಿನ ಬಾವಗಿ ಗ್ರಾಮದಲ್ಲಿ ಶುಕ್ರವಾರ ಗ್ರಾಮಸ್ಥರಿಂದ ಲಕ್ಷ್ಮೀದೇವಿಗೆ ವಿಶೇಷ ಪೂಜೆ ಪ್ರತಿವರ್ಷದಂತೆ ಗ್ರಾಮದ ಮಹಾಲಕ್ಷ್ಮಿಗೆ ಕುಂಕುಮ ಅರಿಸಿನ ಪಂಚಾಮೃತ ಅಭಿಷೇಕ ಗುಂಡಯ್ಯ ಸ್ವಾಮೀಜಿ ಸೈನಾಥ್ ಶಾಸ್ತ್ರಿ ಪೂಜೆ ನಡೆಸಿಕೊಟ್ಟರು ಗ್ರಾಮಸ್ಥರು ಆಗಮಿಸಿ ಪೂಜೆಗೆ ಅರಿಸಿನ ಕುಂಕುಮ ನೆರವೇರಿಸಿ ಲಕ್ಷ್ಮಿ ದೇವಿಗೆ ಉಡಿ ತುಂಬುವುದು ಬಳೆ ಹಾಕಿಸುವುದು ಕುಬಸದ ಕಣದಲ್ಲಿ ಎಲ್ಲೆ ಅಡಿಕೆ ಇಟ್ಟು ದೇವಿಗೆ ನಮಸ್ಕರಿಸುವುದು ವಿಶೇಷವಾಗಿತ್ತು ಭದ್ರೇಶ್ವರ ಮಠದ ಶ್ರೀ ಶಿವಕುಮಾರ್ ಸ್ವಾಮೀಜಿ ಮಾತನಾಡಿ ಪ್ರತಿ ವರ್ಷ ಮಹಾಲಕ್ಷ್ಮಿ ಪೂಜೆಯನ್ನು ನಡೆಸಿಕೊಂಡು ಬರುತ್ತಿದ್ದೇವೆ ಗ್ರಾಮದಲ್ಲಿ ಸುಖ ಸಂಪತ್ತಿ ಪ್ರಾಪ್ತಿ ಆಗುತ್ತೆ ಎಂದುರು ಗ್ರಾಮ ಪಂಚಾಯತಿ ಅಧ್ಯಕ್ಷ ಶಾಂತವೀರ್ ಹಜರಗಿ ಸಂಗಮೇಶ್ ಹಜರಗಿ ರೇವಣಪ್ಪ ಭದ್ರಣ್ಣವರ ಮಾರುತಿ ಹೂಗಾರ್ ರಾಜಕುಮಾರ್ ಪಾಟೀಲ್ ಚಂದ್ರಕಾಂತ್ ಪಾಟೀಲ್ ಗುಂಡಪ್ಪ ಇಡುಗಾರ್ ರಾಜಕುಮಾರ್ ಅವಿನಾಶ ಶಿವಶರಣಪ್ಪ ಗ್ರಾಮಸ್ಥರು ಇದ್ದರು

## ಜ.26 ರಂದು ಸಂವಿಧಾನ ಮೌಲ್ಯಗಳ ಜನಜಾಗೃತಿ ಸಮಾವೇಶ

# ರಾಷ್ಟ್ರೀಯ ಹಬ್ಬದಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳಿ : ಬೆಲ್ದಾರ್



• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಜ.26ರಂದು ಆಚರಿಸುವ ಗಣರಾಜ್ಯೋತ್ಸವ ಇದು ರಾಷ್ಟ್ರೀಯ ಹಬ್ಬವಾಗಿದ್ದು, ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ದಲಿತ ಮುಖಂಡರಾದ ಅನೀಲಕುಮಾರ ಬೆಲ್ದಾರ್ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಜ.26 ರಂದು ನಗರದ ಅಂಬೇಡ್ಕರ್ ವೃತ್ತದಲ್ಲಿ ಸಾ.5ಗಂಟೆಗೆ ಸಂವಿಧಾನ ಮೌಲ್ಯಗಳ ಕುರಿತು ಜನಜಾಗೃತಿ ಸಭೆ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಚಿಂತಕರು, ಬುದ್ಧಿಜೀವಿಗಳು ಆಗಮಿಸಲಿದ್ದಾರೆ. ವಿಶೇಷವಾಗಿ ರಾಜ್ಯದ ಹಲವು ಕಡೆಗಳಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ ಅವರ ವಿಚಾರಧಾರೆಗಳನ್ನು ಪ್ರಚಾರ ಮಾಡುತ್ತಿರುವ ಕನ್ನಡ ಚಿತ್ರರಂಗದ ಖ್ಯಾತ ನಟ ದುನಿಯಾ ವಿಜಯ್ ಆಗಮಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯ ಜನತೆ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಬೆಲ್ಧಾರ್ ಕೋರಿದರು. ಪ್ರಮುಖರಾದ ಬಾಬು ಪಾಸ್ವಾನ್ ಮಾತನಾಡಿ ಡಾ. ವಿಜಯಕುಮಾರ ಸಾಲಿಮನಿ ಮುಖ್ಯಸ್ಥರು, ಇತಿಹಾಸ ಅಧ್ಯಯನ ವಿಭಾಗ ಸರ್ಕಾರಿ ಮಹಾವಿದ್ಯಾಲಯ ಕಲಬುರಗಿ ಇವರು ಉಪನ್ಯಾಸ ನೀಡಲಿದ್ದಾರೆ ಎಂದರು. ಮುಖಂಡ ವಿಷ್ಣುವರ್ಧನ ವಾಲದೊಡ್ಡಿ ಮಾತನಾಡಿ ನಮ್ಮಲ್ಲಿ ಐಕ್ಯತೆ ಇದೆ. ನಾವೆಲ್ಲರೂ ಒಂದೆ. ನಮ್ಮಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ ಎನ್ನುವ ಸಂದೇಶ ಕೂಡಾ ಸಾರಲಿದ್ದೇವೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ಇದೇ ವೇಳೆ ದಲಿತ ಮುಖಂಡರಾದ ಮಹೇಶ ಗೋರನಾಳಕರ್ ಮಾತನಾಡಿದರು. ಶ್ರೀಪತರಾವ ದೀನೆ, ಸಂಜುಕುಮಾರ ಮೇತ್ರೆ, ಶಿವಕುಮಾರ ನೀಲಿಕಟ್ಟಿ, ಶ್ರೀಕಾಂತ ಭವಾನಿ, ಅಂಬಾದಾಸ್ ಗಾಯಕವಾಡ, ಸುನೀಲ ಸಂಗಮ, ಪುಟ್ಟು ನಾವದಗೇರಿ, ರಾಹುಲ್ ಡಾಂಗೆ, ಶಿವಾನಂದ ಉಪ್ಪೆ, ಆಕಾಶ ಜನವಾಡಕರ್, ರಾಜಕುಮಾರ ಡೊಂಗ್ರೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬಾವಗಿ ಮಹಾಲಕ್ಷ್ಮಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಗ್ರಾಮಸ್ಥರು



• **ಮಲ್ಲಮ್ಮ ನುಡಿ ವಾರ್ತೆ ,ಬೀದರ:**

ಬೀದರ್ ತಾಲುಕಿನ ಬಾವಗಿ ಗ್ರಾಮದಲ್ಲಿ ಶುಕ್ರವಾರ ಗ್ರಾಮಸ್ಥರಿಂದ ಲಕ್ಷ್ಮೀದೇವಿಗೆ ವಿಶೇಷ ಪೂಜೆ ಪ್ರತಿವರ್ಷದಂತೆ ಗ್ರಾಮದ ಮಹಾಲಕ್ಷ್ಮಿಗೆ ಕುಂಕುಮ ಅರಿಸಿನ ಪಂಚಾಮೃತ ಅಭಿಷೇಕ ಗುಂಡಯ್ಯ ಸ್ವಾಮೀಜಿ ಸೈನಾಥ್ ಶಾಸ್ತ್ರಿ ಪೂಜೆ ನಡೆಸಿಕೊಟ್ಟರು ಗ್ರಾಮಸ್ಥರು ಆಗಮಿಸಿ ಪೂಜೆಗೆ ಅರಿಸಿನ ಕುಂಕುಮ ನೆರವೇರಿಸಿ ಲಕ್ಷ್ಮಿ ದೇವಿಗೆ ಉಡಿ ತುಂಬುವುದು ಬಳೆ

ಹಾಕಿಸುವುದು ಕುಬಸದ ಕಣದಲ್ಲಿ ಎಲ್ಲೆ ಅಡಿಕೆ ಇಟ್ಟು ದೇವಿಗೆ ನಮಸ್ಕರಿಸುವುದು ವಿಶೇಷವಾಗಿತ್ತು ಭದ್ರೇಶ್ವರ ಮಠದ ಶ್ರೀ ಶಿವಕುಮಾರ್ ಸ್ವಾಮೀಜಿ ಮಾತನಾಡಿ ಪ್ರತಿ ವರ್ಷ ಮಹಾಲಕ್ಷ್ಮಿ ಪೂಜೆಯನ್ನು ನಡೆಸಿಕೊಂಡು ಬರುತ್ತಿದ್ದೇವೆ ಗ್ರಾಮದಲ್ಲಿ ಸುಖ ಸಂಪತ್ತಿ ಪ್ರಾಪ್ತಿ ಆಗುತ್ತೆ ಎಂದುರು ಗ್ರಾಮ ಪಂಚಾಯತಿ ಅಧ್ಯಕ್ಷ ಶಾಂತವೀರ್ ಹಜರಗಿ ಸಂಗಮೇಶ್ ಹಜರಗಿ ರೇವಣಪ್ಪ ಭದ್ರಣ್ಣವರ ಮಾರುತಿ ತಹೂಗಾರ್ ರಾಜಕುಮಾರ್ ಪಾಟೀಲ್ ಚಂದ್ರಕಾಂತ್ ಪಾಟೀಲ್ ಗುಂಡಪ್ಪ ಇಡುಗಾರ್ ರಾಜಕುಮಾರ್ ಅವಿನಾಶ ಶಿವಶರಣಪ್ಪ ಗ್ರಾಮಸ್ಥರು ಇದ್ದರು

# ಜಗದ್ಗುರು ಶ್ರೀ ಮೌನೇಶ್ವರರ 31ನೇ ಜಾತ್ರಾ ಮಹೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ,ಬೀದರ:**

ಬೀದರ್ ನಗರದ ಶ್ರೀ ಮೌನೇಶ್ವರ ಕಾಲೋನಿ ಗುಂಪಾ ಮೈಲೂರ ರಿಂಗ ರೋಡ ಹತ್ತಿರದ ಮೌನೇಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಜಗದ್ಗುರು ಶ್ರೀ ಮೌನೇಶ್ವರರ 31ನೇ ಜಾತ್ರಾ ಮಹೋತ್ಸವ ಅಂಗವಾಗಿ ದಿನಾಂಕ: 24–01–2026 ರಂದು ಶನಿವಾರ ಬೆಳಗ್ಗೆ 10:00 ಗಂಟೆಗೆ ಸಾಮೂಹಿಕ ಉಪನಯನ (ಮುಂಜಿ) ಕಾರ್ಯಕ್ರಮ ಬ್ರಹ್ಮ ಶ್ರೀ ಮಹಾದೇವ ಆಚಾರ್ಯ ಸಿರ್ಸಿ, ಇವರ ನೇತೃತ್ವದಲ್ಲಿ ಜರುಗಲಿದೆ.

ಪೂಜ್ಯ ಶ್ರೀ ಶ್ರೀ ಶ್ರೀ ಶ್ರೀನಿವಾಸ ಮಹಾಸ್ವಾಮಿಗಳು ಆನೆಗುಂದಿ ಸರಸ್ವತಿ ಪೀಠ ವಿಶ್ವಕರ್ಮ ಏಕದಂಡಗಿ ಮಠ ಹುಮನಾಬಾದ, ಬಸವಕಲ್ಯಾಣ ಪರಮ ಪೂಜ್ಯ ಶ್ರೀ ಶ್ರೀ ಕುಮಾರ ಮಹಾಸ್ವಾಮಿಗಳು ಆನೆಗುಂದಿ ಸರಸ್ವತಿ ಪೀಠ ವಿಶ್ವಕರ್ಮ ಏಕದಂಡಗಿ ಮಠ, ಯಾದಗಿರಿ.



ಪರಮ ಪೂಜ್ಯ ಶ್ರೀ ಶ್ರೀ ಶ್ರೀ ದೋಡೆಂದ್ರ ಮಹಾಸ್ವಾಮಿಗಳು ಆನೆಗುಂದಿ ಸರಸ್ವತಿ ಪೀಠ ವಿಶ್ವಕರ್ಮ ಏಕದಂಡಗಿ ಮಠ ಸುಲಿಪೇಟ.ವೇ॥ ಬ್ರಹ್ಮಶ್ರೀ ಶ್ರೀ ಶ್ರೀ ಮಹಾದೇವ ಆವಾರ್ಯರು ಸಿರ್ಸಿ, ಬೀದರ, ಶ್ರೀ ಹಣಮಂತರಾವ ಆಚಾರ್ಯರು ಶ್ರೀ ಕಾಳಿಕಾದೇವಿ ದೇವಸ್ಥಾನ, ಸಮಸ್ತ ಶ್ರೀಗಳ ಸಮ್ಮುಖದಲ್ಲಿ ಕಾರ್ಯಕ್ರಮಗಳನ್ನು ನಡೆಯುವುದು.ದಿ 24, ಶನಿವಾರ ರಂದು ರಾತ್ರಿ 10:00 ಗಂಟೆಯಿಂದ

ಶ್ರೀ ಮೌನೇಶ್ವರ ಭಜನಾ ಮಂಡಳಿ ವತಿಯಿಂದ ಸಂಗೀತ ಕಾರ್ಯಕ್ರಮ ಜರುಗುವುದು. ದಿನಾಂಕ: 25–01–2026 ರ ರಥಸಪ್ತಮಿ ರಂದು ರವಿವಾರ ಬೆಳಗ್ಗೆ 5:00 ಗಂಟೆಗೆ ಸುಪ್ರಭಾತ, ಜಗದ್ಗುರು ಶ್ರೀ ಮೌನೇಶ್ವರರಿಗೆ ವೇದೋಕ್ತ ಪಂಚಾಮೃತ ಅಭಿಷೇಕ ನಂತರ ಷೋಡೊಶೋಪಚಾರ ಪೂಜೆ, ಮಂಗಳಾರತಿ ಹಾಗೂ ಬೆಳಗ್ಗೆ 10:00 ಗಂಟೆಯಿಂದ ಸಂಜೆ 05:00 ಗಂಟೆಯವರೆಗೆ ಬೀದರ ನಗರದ ಶ್ರೀ ಜಗನ್ಮಾತೆ ಕಾಳೀಕಾದೇವಿ ಮಂದಿರದಿಂದ (ದೇವಿ ಕಾಲೋನಿ) ಜಗದ್ಗುರು ಶ್ರೀ ಮೌನೇಶ್ವರರ ಪಲ್ಲಕಿ ಉತ್ಸವ ಹಾಗೂ ಪುರವಂತರ ಸೇವಾ, ಭಜನೆ ಮಂಡಳಿ ಹಾಗೂ ಕಳಸಗಳ ಹೊತ್ತ ಮಹಿಳೆಯರ ಸೇವೆಯೊಂದಿಗೆ ಭವ್ಯ ಮೆರವಣಿಗೆಯೊಂದಿಗೆ ಜಗದ್ಗುರು ಶ್ರೀ ಮೌನೇಶ್ವರರ ದೇಸ್ಥಾನಕ್ಕೆ ಪಲ್ಲಕಿ ತಲುಪುವುದು . ನಂತರ ಮಹಾಮಂಗಳಾರತಿ, ಶ್ರೀಗಳಿಂದ ಆಶೀರ್ವಚನ ಮತ್ತು ಮಹಾಪ್ರಸಾದ ನಂತರ ಪಲ್ಲಕ್ಕಿ ಮೆರವಣಿಗೆ ಮಾರ್ಗ : ದೇವಿ ಕಾಲೋನಿಯಿಂದ ಗುರುನಾನಕ ದ್ವಾರ, ಅಂಬೆಡ್ಕರ್ ವೃತ್ತ, ಮಹಾವೀರ ವೃತ್ತ, ಬಸವೇಶ್ವರ ವೃತ್ತ ಬೊಮ್ಮಗೊಂಡೇಶ್ವರ ವೃತ್ತ, ಶ್ರೀರಾಮ ವೃತ್ತ, ಕಿತ್ತೂರಾಣಿ ಚೆನ್ನಮ್ಮಾ ವೃತ್ತ, ಬಿ.ವಿ.ಬಿ. ಕಾಲೇಜು ಮುಖ್ಯ ರಸ್ತೆ, ಮುಖಾಂತರ ಸಿದ್ಧಾರೂಢ ಮಠದ ಎದುರುಗಡೆ ಇರುವ ಜಗದ್ಗುರು ಶ್ರೀ ಮೌನೇಶ್ವರರ ದೇವಸ್ಥಾನದ ವರೆಗೆ ಭವ್ಯ ಮೇರವಣಿಗೆ ನಡೆಯಲಿದೆ ಈ ಮೇರವಣಿಗೆಯಲ್ಲಿ ಬೀದರಿನ ಎಲ್ಲಾ ಖ್ಯಾತ ಸಂಗೀತ ಕಲಾವಿದರು ಭಾಗವಹಿಸಲಿದ್ದಾರೆ.

ಜಗದ್ಗುರು ಶ್ರೀ ಮೌನೇಶ್ವರ ದೇವಸ್ಥಾನ ಆವರಣದ ಕಂಪೌಂಡ ದೇಣಿಗೆ ನೀಡಿದ ದಾನಿಗಳಿಗೆ ಗುರುಗಳಿಂದ ವಿಶೇಷ ಸನ್ಮಾನ ದಿನಾಂಕ 25–01–2026 ರಂದು ಸಾಯಂಕಾಲ 6:00 ಗಂ. ಸ್ಥಳೀಯರಿಂದ ಸಂಗೀತಗಾರರ ಭಜನೆ ಕಾರ್ಯಕ್ರಮ ನಡೆಯುವುದು.

ವಿಶೇಷ ಖ್ಯಾತ ಸಂಗೀತ ಸಂಗಿತ ದರ್ಬಾರ ರಾತ್ರಿ 10:00 ಗಂಟೆಯಿಂದ ನೇತೃತ್ವ: ಶ್ರೀ ಶಿವಕುಮಾರ ಪಂಚಾಳ ಅವರಿಂದ.31ನೇ ಜಾತ್ರಾ ಮಹೋತ್ಸವಕ್ಕೆ ಸದ್ಭಕ್ತರಲ್ಲಿ ವಿವಿಧ ಸಂಘಟನೆಯ ಅಧ್ಯಕ್ಷರು ಸಮಸ್ತ ಪದಾಧಿಕಾರಿಗಳ ಬೀದರ ಜಿಲ್ಲಾ ವಿಶ್ವಕರ್ಮ ಸಮಾಜ ಸಮಿತಿ (ರಿ) ಬೀದರ ಶ್ರೀ ಕಾಳಿಕಾದೇವಿ ದೇವಸ್ಥಾನ ಸಮಿತಿ (ರಿ) ಬೀದರ.ಶ್ರೀ ವಿಶ್ವಕರ್ಮ ಧರ್ಮ ವರ್ಧಿನಿ ಸಂಘ (ರಿ) ಬೀದರ.ಜೀದರ ಜಿಲ್ಲಾ ವಿಶ್ವಕರ್ಮ ಕಾರ್ಪೆಂಟರ್ ಯುನಿಯನ್ ಅಸೋಸಿಯೇಶನ್ (ರಿ), ಬೀದರ ಶ್ರೀ ಮೌನೇಶ್ವರರ ಸಕಲ ಸದ್ಭಕ್ತಾದಿಗಳು ಮತ್ತು ಸಮಸ್ತ ಬೀದರ ಜಿಲ್ಲಾ ವಿಶ್ವಕರ್ಮ ಸಮಾಜ ಬಾಂಧವರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಬೇಕಾಗಿ ವಿಶ್ವಕರ್ಮ ಸಮಾಜದ ಜಿಲ್ಲಾ ಕಾರ್ಯದರ್ಶಿ ಶಿವಾನಂದ ವಿಶ್ವಕರ್ಮ ತಿಳಿಸಿದ್ದಾರೆ.

# ಮತದಾನ ಶ್ರೇಷ್ಠ ದಾನ ಡಾ. ರಜನೀಶ್ ಎಸ್. ವಾಲಿ

• **ಮಲ್ಲಮ್ಮ ನುಡಿ ವಾರ್ತೆ ಬೀದರ:**




23ನೇ ಜ. 2026, ಗೌರವಾನ್ವಿತ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸದಸ್ಯರು ಹಾಗೂ ಬಿ.ವಿ.ಬಿ. ಶಾಲಾ ಕಾಲೇಜು ಆವರಣದ ಸಂಚಾಲಕರಾದ ಡಾ. ರಜನೀಶ್ ಎಸ್. ವಾಲಿಯವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಮತದಾನದ ಮಹತ್ವದ ಕುರಿತು ವಿವರಿಸುತ್ತಾ; ಮತದಾನ ಪವಿತ್ರವಾದ ಕಾರ್ಯ ಮತದಾನ ನಮ್ಮ ಹಕ್ಕು, 18ವರ್ಷ ತುಂಬಿದ ಎಲ್ಲಾ ವಿದ್ಯಾರ್ಥಿಗಳು ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಿಕೊಂಡು ತಮ್ಮ ಕುಟುಂಬ ಮತ್ತು ಓಣಿಯ ಪರಿಚಿತರ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೊಂದಾಯಿಸಿಕೊಳ್ಳಲು ಪ್ರೇರೆಪಿಸಬೇಕು ಮಹಾವಿದ್ಯಾಲಯದ ಇಐಅ ( ಇಟಜಥಿಣಠಡಿಚಿಟ ಖಣಜಡಿಚಿಛಿಥಿ ಅಟಣಾಭ)ನ ಸದಸ್ಯರುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ನಿರ್ಭೀತಿಯಿಂದ ಮತ್ತು ಯಾವುದೇ ಆಮಿಷಕ್ಕೆ ಒಳಗಾಗದೆ ಮತದಾನ ಮಾಡಬೇಕು. ಮತ್ತು ಮತದಾನ ಹಕ್ಕು ಪಡೆಯಲು ಪ್ರತಿಯೊಬ್ಬ ವ್ಯಕ್ತಿ 18ವರ್ಷಕ್ಕೆ ಮೇಲ್ಪಟ್ಟ ಪ್ರಜೆಗಳಿಗೆ ಸ್ಫೂರ್ತಿ ನೀಡಬೇಕೆಂದು ತಿಳಿಸುತ್ತಾ "ರಾಷ್ಟ್ರೀಯ ಮತದಾರರ ದಿನಾಚರಣೆ–ಯ" ಅಂಗವಾಗಿ ತಿಳಿಸಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆಯವರು ಮಾತನಾಡುತ್ತಾ ಇಂದು ನಮ್ಮ ದೇಶ ಬೃಹತ್ ಗಾತ್ರದ ಹಾಗೂ ಆನೆಗಾತ್ರದ ಸಂವಿಧಾನ ಡಾ. ಬಿ.ಆರ್. ಅಂಬೇಡ್ಕರ ಅವರು ಬರೆದ ಸಂವಿಧಾನ ನಮ್ಮ ದೇಶಕ್ಕೆ ಅಷ್ಟೇ ಅಲ್ಲದೇ ಇಡೀ ವಿಶ್ವದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ ತಾವೆಲ್ಲ ಎನ್.ಸಿ.ಸಿ. ಎನ್.ಎಸ್.ಎಸ್. ವಿದ್ಯಾರ್ಥಿಗಳ ತಮ್ಮ ತಮ್ಮ ಗ್ರಾಮದಲ್ಲಿ ಪ್ರತಿಯೊಬ್ಬ ಪ್ರಜೆ ಮತದಾನ ದಿನದಂದು ರಜೆ ಇದ್ದಾಗ ಪ್ರವಾಸಕ್ಕೆ ಹೋಗದೆ ತಮ್ಮ ಒಂದು ಮತ ಇಡೀ ಐದು ವರ್ಷದ ದೇಶದ ಭವಿಷ್ಯವನ್ನು ಹಾಗೂ ತಮ್ಮ ಗ್ರಾಮದ ಭವಿಷ್ಯವನ್ನು ರೂಪಿಸುತ್ತದೆ ಅದಕ್ಕಾಗಿ ತಾವೆಲ್ಲ ಯುವ ಮತದಾರರು ತಪ್ಪದೇ ಜನಪರ ಕಾಳಜಿಯುಳ್ಳ ವ್ಯಕ್ತಿಗೆ ಮತ ಹಾಕಿ ರಾಷ್ಟ್ರದ ಭವಿಷ್ಯವನ್ನು ರೂಪಿಸಬೇಕೆಂದು ನುಡಿದರು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ ಡಾ: ಮಲ್ಲಿಕಾರ್ಜುನ ಕೋಟೆಯವರು ಮಾತನಾಡುತ್ತಾ ಭಾರತ ಬೃಹತ ಪ್ರಮಾಣ ಪ್ರಜಾಪ್ರಭುತ್ವ ಪ್ರತಿಯೊಬ್ಬ ಪ್ರಜೆ ಯಾವುದೇ ಆಸೆ ಆಮಿಷಕ್ಕೆ ಒಳಗಾಗದೆ ನಿರ್ಭಯ ನಿಷ್ಪಕ್ಷಪಾತ ಮತದಾನ ಮಾಡಬೇಕು ಪ್ರತಿಯೊಂದು ಮತ ದೇಶದ ಭವಿಷ್ಯವನ್ನು ರೂಪಿಸುತ್ತದೆ ಎಂದು ಮಾರ್ಮಿಕವಾಗಿ ಹೇಳಿದರು.

ಈ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಯನ್ನು ರಾಜ್ಯಶಾಸ್ತ್ರ ವಿಭಾಗ ಮುಖ್ಯಸ್ಥರಾದ ಶ್ರೀಮತಿ ವಾಣಿಶ್ರೀ ಹೇಳಿದರು.

ಇದೇ ಸಂದರ್ಭದಲ್ಲಿ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀ ಸಂದೀಪಕುಮಾರ ವನ್ನಾಳೆಯವರು ಮತದಾರರ ಪ್ರತಿಜ್ಞಾ ವಿಧಿ ಬೋಧಿಸಿದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಪ್ರಭಾರಿ ಎನ್.ಸಿ.ಸಿ. ಅಧಿಕಾರಿಯಾದ ಡಾ. ಸಾಮ್ರಾಟ ಶಿವಪ್ಪ ಪಾಯದ್ ಹಾಜರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರಾರ್ಥನೆ ಗೀತೆಯನ್ನು ಶ್ರೀಮತಿ ರೇಣುಕಾದೇವಿ ಎಂ. ಅವರು ಹಾಡಿದರೆ, ಸ್ವಾಗತವನ್ನು ಇತಿಹಾಸದ ಮುಖ್ಯಸ್ಥರಾದ ಡಾ. ಶಿವಲೀಲಾ ವೀರಯ್ಯಾ ಹೇಳಿದರೆ, ಇತಿಹಾಸ ವಿಭಾಗದ ಉಪನ್ಯಾಸಕರಾದ ಶ್ರೀ ಬಸವರಾಜ ಬಿರಾದಾರ ನಿರೂಪಿಸಿದರೆ, ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ. ಲಕ್ಷ್ಮೀ ವಿಶ್ವನಾಥ ಅವರು ವಂದಿಸಿದರು.

ಈ ಕಾರ್ಯಕ್ರಮದಲ್ಲಿ ಎನ್.ಸಿ.ಸಿ., ಎನ್.ಎಸ್.ಎಸ್., ಸ್ಕೌಟ್ಸ್ ಹಾಗೂ ಗೈಡ್ಸ್, ಯುವ ರೆಡ್‌ಕ್ರಾಸ್ ಸ್ವ–ಯಂ ಸೇವಕರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಮೊರಖಂಡಿ ಮಕ್ಕಳ ವಿಶೇಷ ಹಕ್ಕುಗಳ ಗ್ರಾಮಸಭೆ




• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:**

ಶಾಲೆಯಲ್ಲಿ ಯಾವುದೇ ಸಮಸ್ಯೆ ಇದ್ದರೆ ನಮ್ಮ ಗಮನಕ್ಕೆ ತನ್ನಿ ನಾವು ಬಗೆಹರಿಸಿ ಕೊಡುತ್ತೆವೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪ್ರಶಾಂತರೆಡ್ಡಿ ಮಾಲಿಪಾಟೀಲ್ ಹೇಳಿದರು.

ತಾಲ್ಲೂಕಿನ ಮೊರಖಂಡಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡ ವಿಶೇಷ ಮಕ್ಕಳ ಗ್ರಾಮ ಸಭೆಯಲ್ಲಿ ಅವರು ಮಾತನಾಡಿ, ಮಕ್ಕಳ ಹಕ್ಕುಗಳ ಉಲ್ಲಘನೆ ಆಗಬಾರದು ಎಂಬ ಉದ್ದೇಶ ದಿಂದ ಸರ್ಕಾರ ಪ್ರತಿವರ್ಷ ಗ್ರಾಮ ಸಭೆಯನ್ನು ನಡೆಸಿ ಮಕ್ಕಳ ಸಮಸ್ಯೆಗಳ ಆಲಿಸಿ, ಅವುಗಳನ್ನು ಬಗೆಹರಿಸುವಂತೆ ಆದೇಶ ನೀಡಿದೆ. ಹೀಗಾಗಿ ಶಾಲೆಯಲ್ಲಿ ಶೌಚಾಲಯ, ವಿದ್ಯುತ್, ಪುಸ್ತಕ ಸೇರಿದಂತೆ ಯಾವುದೇ ಸಮಸ್ಯೆ ಇದ್ದರೆ ಗ್ರಾಮ ಪಂಚಾಯತ್ ಅಥವಾ ಸಂಬಂಧ ಪಟ್ಟ ಇಲಾಖೆಯ ಗಮನಕ್ಕೆ ತರಬೇಕು ಎಂದು ತಿಳಿಸಿದರು.

ಆರ್.ಎಲ್.ಎಚ್.ಪಿ.ಸಂಯೋಜಕ ನಾಗರಾಜ ಶಿಲವಂತ ವಿಶೇಷ ಉಪನ್ಯಾಸ ನೀಡುತ್ತ ಮಕ್ಕಳ ಹಕ್ಕುಗಳ ಕುರಿತು ಮಾತನಾಡಿದರು.

ನಂತರ ಶಾಲೆಯ ಮುಖ್ಯಗುರು ನಾಗನಾಥ ಪುಂಡೆ ಮಾತನಾಡಿದರು. ನಂತರ ಶಾಲಾ ಮಕ್ಕಳು ಸಮಸ್ಯೆಗಳ ಪಟ್ಟಿ ಮಾಡಿ ಇವು ಇಡೇರಿಸಬೇಕು ಎಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾ.ಪಂ.ಸದಸ್ಯ ಸುಧಾರಾಣಿ ಜಯರಾಜ, ಡಿಇಓ ವಿಠಲ ಪಂಚಾಳ ಸೇರಿದಂತೆ ಗ್ರಾಮದ ಪ್ರಮುಖರು, ಶಾಲಾ ಸಿಬ್ಬಂದಿಗಳು ಇದದ್ದರು.

# ಸುತ್ತಮುತ್ತಲಿನ ಪ್ರದೇಶದಲ್ಲಿ ಚಿರತೆ ಎಚ್ಚರ ವಹಿಸಲು ಸಾರ್ವಜನಿರಲ್ಲಿ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಬೀದರ :**




ಬೀದರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ ಕಾಣಿಸಿಕೊಂಡಿರುವುದರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಬೀದರ ಜಿಲ್ಲಾ ಉಪ ಸಂರಕ್ಷಣಾಧಿಕಾರಿ ಆಶಿಷ್ ರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಡಂಗೂರ ಸಾರುವ ಮೂಲಕ ಎಚ್ಚರಿಕೆ ನೀಡಿ ಗ್ರಾಮ ಸಭೆಗಳನ್ನು ನಡೆಸಲಾಗುತ್ತಿದೆ. ಸಾರ್ವಜನಿಕರು ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ಎಚ್ಚರಿಕೆಯಿಂದ ಇರಬೇಕು, ಸೂರ್ಯಾಸ್ತದ ನಂತರ ಮಕ್ಕಳನ್ನು ಮನೆ ಒಳಗೇ ಇರಿಸಿ, ರಾತ್ರಿ ನಡೆಯುವಾಗ ಟಾರ್ಚ್ /ಬೆಳಕು ಬಳಸಿ, ಪಶುಗಳನ್ನು ಮುಚ್ಚಿದ, ಬೆಳಕು ಇರುವ ಕೊಟ್ಟಿಗೆಯಲ್ಲಿ ಇರಿಸಿ ಎಂದು ಸಾರ್ವಜನಿರಲ್ಲಿ ಕೋರಿದ್ದಾರೆ. ಚಿರತೆ ಕಂಡುಬಂದಿರುವ ಬಗ್ಗೆ ಆಯಾ ಗ್ರಾಮಗಳಲ್ಲಿ ಬಿತ್ತಿ ಪತ್ರಗಳನನ್ನು ಅಂಟಿಸಲಾಗುತ್ತಿದೆ.

ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ ಕಂಡುಬಂದರೆ ತಕ್ಷಣವೇ ಅರಣ್ಯ ಇಲಾಖೆಯ ಆರ್.ಎಫ್.ಓ. ವಿಜಯಕುಮಾರ ಜಾಧವ (9591317807), ಡಿ.ಆರ್. ಎಫ್.ಓ. ರವಿ (9900561007), ಡಿ.ಆರ್.ಎಫ್.ಓ. ಆರ್.ಎಲ್. ರಾಠೋಡ (8618002638), ಬಿಟ್ ಫಾರೇಸ್ಟರ್ ಪರಶುರಾಮ (9845112328), ಅರಣ್ಯ ಸಹಾಯವಾನಿ ಸಂಖ್ಯೆ: 1926 ಗೆ ಕರೆ ಮಾಡಿ ಮಾಹಿತಿ ನೀಡಬೇಕೆಂದು ಅವರು ತಿಳಿಸಿದ್ದಾರೆ.

# ಕ್ರೀಡೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಲಿ: ಪ್ರೊ. ಸಾಲಿಮನಿ



• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:

ಕ್ರಿಕೆಟ್ ಕೇವಲ ಒಂದು ಕ್ರೀಡೆಯಲ್ಲ, ಇದು ಲಕ್ಷಾಂತರ ಜನರ ಜೀವನದ ಒಂದು ಭಾಗ. ಇದು ಗೆಲುವು–ಸೋಲು, ರೋಮಾಂಚನ, ಮತ್ತು ಕ್ರೀಡಾಸ್ಫೂರ್ತಿಯನ್ನು ನೀಡುತ್ತದೆ ಎಂದು ಪ್ರೊ. ವಿಜಯಕುಮಾರ ಸಾಲಿಮನಿ ಅಭಿಪ್ರಾಯಪಟ್ಟರು. ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ. ಅರುಣಕುಮಾರ ಬಿ. ಕುರನೆ ಮಾತನಾಡಿ ಸಂವಿಧಾನ ಪ್ರಿಮಿಯರ್ ಲೀಗ್ ಆಡಿಸುತ್ತಿರುವುದು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಲ್ಲಿರುವ ಪ್ರತಿಭೆ ಹೊರಗೆ ತರಲು ಎಂದರು. ವಿದ್ಯಾರ್ಥಿನಿಯರು ತಾವು ಕಡಿಮೆ ಇಲ್ಲ ಎಂದು ತೋರಿಸಲು ಇದು ಉತ್ತಮ ವೇದಿಕೆಯಾಗಿದೆ. ಈ ಕ್ರಿಕೆಟ್ ಪಂದ್ಯದಲ್ಲಿ ಆಟವಾಡಿದವರು ರಾಜ್ಯ ಮತ್ತು ರಾಷ್ಟ್ರಮಟ್ಟದ ಪಂದ್ಯದಲ್ಲಿ ಆಡುವ ಅವಕಾಶ ಸಿಗಲಿ ಎಂದರು. ಈ ವೇಳೆ ಡಾ. ಎಂ ಬಿ ಕಟ್ಟಿ, ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಅಶೋಕ ದೊಡ್ಮನಿ, ಡಾ. ಹಣಮಂತ ಮೇಲಕೇರಿ, ಸುನೀಲ ಜಾಬಾದಿ, ಸಂತೋಷ ಕಂಬಾರ, ಪ್ರಕಾಶ್ ಸಂಗಮ, ಡಾ. ಮಾಧುರಿ ಬಿರಾದಾರ, ಡಾ. ಶಿವಶರಣಪ್ಪ ಕೊಡ್ಲಿ, ಡಾ. ರೂಕ್ಸನಾ, ಡಾ. ಶಂಭುಲಿಂಗ ನಾಡಿಗೇರಿ, ಡಾ. ಆನಂದ ಮೇಟಿ ನಿರ್ಣಾಯಕರಾದ ಪುಟ್ಟರಾಜ ಮಡಿವಾಳ, ಅಜಯ ರಾಠೋಡ್, ಓಂಕಾರ ಮಡಿವಾಳ, ಗಣೇಶ ಮದರಿ, ಸಾವಿರಲಿಂಗ ಅತಿಥಿ ಉಪನ್ಯಾಸಕರಾದ ಡಾ.ಪರಶುರಾಮ ಪಿ, . ಶೇಖರ ಸಲಗರ, ಡಾ. ಹಣಮಂತ ಮೇಲಕೇರಿ, ಸಂತೋಷ ಕಂಬಾರ, ಪ್ರಕಾಶ್ ಸಂಗಮ, ಡಾ. ಮಿಲಿಂದ ಕಾಂಬಳೆ, ಡಾ. ತಾತ್ಯಾರಾವ, ಡಾ. ಮಂಜೂರ್ ಅಹ್ಮದ, ಡಾ. ಸಿದ್ಧಾರ್ಥ ಬಬಲಾದ, ಡಾ. ಮಾಧುರಿ ಬಿರಾದಾರ, ಡಾ. ರಾಜಕುಮಾರ ಎಂ ದಣ್ಣೂರ, ಡಾ. ಆನಂದ ಮೇಟಿ, ಡಾ. ಕವಿತಾ ನಾಗಶೆಟ್ಟಿ, ಡಾ. ಚಿಂತನ ರಾಠೋಡ್, ಡಾ. ರಾಜೇಶ್ವರಿ, ಡಾ. ಮಹಾಲಿಂಗಪ್ಪ ಮಂಗಳೂರು, ಅಭಯಕುಮಾರ ಪೋತೆ, ಡಾ. ಸಂದೀಪ ಹೋಲ್ಕರ್, ಡಾ. ನಂದಿನಿ, ಡಾ. ವಿಜಯಕುಮಾರ ಬೀಳಗೆ, ಡಾ ಸೇರಿದಂತೆ ಇತರರು ಇದ್ದರು.

# ಸುಭಾಸ ಚಂದ್ರ ಬೋಸ ಅಪ್ರತಿಮ ದೇಶ ಭಕ್ತ



• ಮಲ್ಲಮ್ಮ ನುಡಿ ವಾರ್ತೆ,
• ಕಮಲನಗರ:

ಭಾರತ ದೇಶದ ವಿಮುಕ್ತಿಗಾಗಿ ನಡೆದ ಹೋರಾಟದಲ್ಲಿ ನೇತಾಜಿ ಸುಭಾಸ್ ಚಂದ್ರ ಬೋಸ್ ಅಗ್ರಗಣ್ಯ ನಾಯಕರಾಗಿದ್ದರು. ಅವರ ದಿಟ್ಟ ಹೋರಾಟ ಬ್ರಿಟಿಷರ ಎದೆ ನಡುಗಿಸಿ ದೇಶದಿಂದ ಕಾಲ್ಕಿತ್ತುವಂತೆ ಮಾಡಿತ್ತು ಅವರು ಒಬ್ಬ ಅಪ್ರತಿಮ ದೇಶ ಭಕ್ತ ಎಂದು ಮಾಜಿ ಸೈನಿಕ ರಾಮದಾಸ ಭೋಸಲೆ ಹೇಳಿದರು.

ತಾಲೂಕಿನ ತೋರಣಾ ಗ್ರಾಮದ ಸುಭಾಷ್ ಚಂದ್ರ ಬೋಸ್ ಚೌಕದಲ್ಲಿ ಶುಕ್ರವಾರ ಸುಭಾಷ್ ಚಂದ್ರ ಬೋಸ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀಮಂತಿಕೆಯ ಬದುಕು ತೊರೆದು ದೇಶಕ್ಕಾಗಿ ಹೋರಾಟ ಮಾಡಿ ಹುತಾತ್ಮರಾಗುವುದರ ಮೂಲಕ ನೇತಾಜಿ ಭಾರತೀಯರ ಹೃದಯದಲ್ಲಿ ಮನೆ ಮಾಡಿದ್ದಾರೆ ಎಂದರು.

ಇಂಗ್ಲೆಂಡ್‌ನಲ್ಲಿ ಕೇವಲ 8 ತಿಂಗಳಲ್ಲಿ ಸತತ ಪರಿಶ್ರಮದಿಂದ ಐಸಿಎಸ್ ಪರೀಕ್ಷೆಯನ್ನು ಅಗ್ರಕ್ರಮಾಂಕದಲ್ಲಿ ತೇರ್ಗಡೆಯಾದ ಅವರು ನಂತರ ಒಲಿದು ಬಂದ ಉನ್ನತ ಸರ್ಕಾರಿ ಹುದ್ದೆ ತಿರಸ್ಕರಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ಸ್ವಾತಂತ್ರ ಎನ್ನುವುದು ಬೇಡಿ–ಕೊಂಡು ಪಡೆಯುವ ಭಿಕ್ಷೆಯಲ್ಲ, ಅದನ್ನು ಅಪಹರಿಸಿರುವವರಿಂದ ಕಿತ್ತುಕೊಳ್ಳುವುದು ಎಂದು ಸಾರಿದ ಅವರು ಕ್ರಾಂತಿಕಾರಿ ಹೋರಾಟದಿಂದ ಮಾತ್ರ ಸ್ವಾತಂತ್ರ್ಯ ಲಭಿಸಲಿದೆ ಎಂದು ಬಲವಾಗಿ ನಂಬಿದ್ದರು.

> ‘ಸುಭಾಷ್ ಚಂದ್ರ ಬೋಸ್ ಅವರ ಹೋರಾಟ ಮತ್ತು ತ್ಯಾಗದಿಂದಾಗಿ ಅವರು ಭಾರತದ ಸ್ವಾತಂತ್ರ್ಯದ ಸಂಕೇತ ಮತ್ತು ದೇಶದ ಅಮೂಲ್ಯ ಆಸ್ತಿಯಾಗಿ ಉಳಿದಿದ್ದಾರೆ.‘
>
> **ಸಿದ್ದು ಸೋನಾಳೆ**
> **ಅಧ್ಯಕ್ಷ ಭಗತ್ ಸಿಂಗ್ ಯುವ ಸೇನೆ ಕಮಲನಗರ.**

ಇಂದಿನ ಜನಾಂಗಕ್ಕೆ ಅವರ ಜೀವನ ಮಾದರಿಯಾಗಿದೆ ಎಂದರು. ಯುವ ಮುಖಂಡ ಅರಹಂತ ಸಾವಳೆ ಮಾತನಾಡಿ, ಸುಭಾಷ್ ಚಂದ್ರ ಬೋಸ್ ಅವರು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ನಾಯಕ, ದೇಶದ ಅವಿಭಾಜ್ಯ ಅಂಗ ಮತ್ತು ಜನರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದ ರಾಷ್ಟ್ರೀಯ ವೀರ; ಅವರ ದೇಶಭಕ್ತಿ, ನಿರ್ಭೀತ ನಾಯಕತ್ವ ಮತ್ತು ದೇಶಕ್ಕಾಗಿ ಅವರು ನೀಡಿದ ಕೊಡುಗೆಯಿಂದಾಗಿ ಅವರು ದೇಶದ ’ಆಸ್ತಿ’ಯಾಗಿದ್ದಾರೆ, ಅವರ ಪ್ರತಿಮೆಗಳು, ವಿಮಾನ ನಿಲ್ದಾಣಗಳು ಮತ್ತು ರೈಲು ಮಾರ್ಗಗಳು ಇತ್ಯಾದಿ ಅವರ ನೆನಪನ್ನು ಸದಾ ಜೀವಂತವಾಗಿರಿಸಿವೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸೈನಿಕ ಧನಾಜಿ ಪಾಂಚಾವರೆ, ಗ್ರಾಪಂ ಸದಸ್ಯ ವಿಜಯಕುಮಾರ ತೆಗಂಪೂರೆ, ಧನಾಜಿ ಗಾಯಕವಾಡ, ಭಗತ್ ಸಿಂಗ್ ಯುವ ಸೇನೆ ಕಮಲನಗರ ಘಟಕ ಅಧ್ಯಕ್ಷ ಸಿದ್ದು ಸೋನಾಳೆ, ಉಪಾಧ್ಯಕ್ಷ ಸುರೇಶ ಜೀರಗೆ, ಮಾಜಿ ಗ್ರಾಪಂ ಅಧ್ಯಕ್ಷ ಬಾಲಾಜಿ ಡೊಂಗರೆ, ಹಣಮಂತ ಭೋಸಲೆ, ಮಹಾದೇವ ಪಾಂಚಾವರೆ, ಪ್ರಕಾಶ ಶೆಟಕಾರ, ನಾಗೇಶ ತಾದಲಾಪೂರೆ, ವಿನೋದ್ ದುಧಕಾಂಬಳೆ, ಮೋತಿರಾಮು ಪಾಂಚಾವರೆ, ಅಶೋಕ ಪಾಂಚಾವರೆ, ಕಂಟೇಶ್ ಸ್ವಾಮಿ, ನಾಗೇಶ ಔರಾದೆ, ವೆಂಕಟ ಕೋಟೆ, ರಾಜಕುಮಾರ ಚಿಕಲೆ, ಪ್ರಕಾಶ ಮಡುವೆ ಬಾಲಾಜಿ ಕಪಡೇ, ಬಾಲಾಜಿ ಫಿರಂಗೇ, ಪ್ರಕಾಶ್ ಸೆಟಕರ್, ವಿನೋದ್ ಜಾಕತೆ ಸೇರಿದಂತೆ ಅನೇಕರು ಇದ್ದರು.

# ವಸತಿ ನಿಲಯ ಸ್ಥಾಪಿಸಲು.ದಲಿತ ವಿದ್ಯಾರ್ಥಿ ಪರಿಷತ್ ಸಂಘಟನೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ
• ಸಿಂಧನೂರು:



ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಸಮಿತಿ ಸಿಂಧನೂರು ವತಿಯಿಂದ ತುರ್ವಿಹಾಳ ಹೋಬಳಿಯ ಕಲಮಂಗಿ ಗ್ರಾಮದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಕುರಿತು ಮಸ್ಕಿ ವಿಧಾನ ಸಭಾ ಕ್ಷೇತ್ರದ ಶಾಸಕರು ಹಾಗೂ

ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರಾದ ಆರ್ ಬಸನಗೌಡ ಪಾಟೀಲ್ ತುರುವಿಹಾಳ ಅವರಿಗೆ ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ವತಿಯಿಂದ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು

ನಂತರ ಮಾತನಾಡಿದ ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಅಧ್ಯಕ್ಷರು ದುರುಗೇಶ ಕಲಮಂಗಿ ಅವರು ಕಲಮಂಗಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಲವಾರು ಬಡ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಹೈಸ್ಕೂಲ್ ಶಿಕ್ಷಣವನ್ನು ಪಡೆಯುತ್ತಿದ್ದು. ಆದರೆ ನಮ್ಮ ಭಾಗದಲ್ಲಿ ವಿದ್ಯಾರ್ಥಿಗಳಿಗೆ ಉಳಿದುಕೊಳ್ಳಲು ಯಾವುದೇ ಸರ್ಕಾರಿ ವಿದ್ಯಾರ್ಥಿನಿಲಯದ (ಊಥಣಜಟ) ಸೌಲಭ್ಯವಿರುವುದಿಲ್ಲ. ದೂರದ ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳು ಪ್ರತಿದಿನ ಬಸ್ ಸೌಕರ್ಯದ ಕೊರತೆಯಿಂದಾಗಿ ಮತ್ತು ಆರ್ಥಿಕ ಸಂಕಷ್ಟದಿಂದಾಗಿ ಶಾಲೆಗೆ ಬರಲು ತೊಂದರೆ–ಯಾಗುತ್ತಿದೆ ಇದರಿಂದಾಗಿ ಅನೇಕ ವಿದ್ಯಾರ್ಥಿಗಳು ಅರ್ಧಕ್ಕೆ ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದಾರೆ.

ಈ ಭಾಗದ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶಾಸಕರು ಮುಂದಾಗಬೇಕೆಂದರು

ಇಲ್ಲಿ ಒಂದು ಸರ್ಕಾರಿ ವಿದ್ಯಾರ್ಥಿನಿಲಯ ಮಂಜೂರಾದಲ್ಲಿ ನೂರಾರು ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಬಹಳ ಅನುಕೂಲವಾಗಲಿದೆ.

ಆದುದರಿಂದ, ದಯವಿಟ್ಟು ಪರಿಸ್ಥಿತಿಯನ್ನು ಅವಲೋಕಿಸಿ, ಮುಂದಿನ ಶೈಕ್ಷಣಿಕ ವರ್ಷದಿಂದಲೇ ಅನ್ವಯವಾಗುವಂತೆ ನಮ್ಮಲ್ಲಿ ಹೊಸ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕೆಂದು ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಸಮಿತಿ ಒತ್ತಾಯವಾಗಿದೆ ಎಂದು ತಿಳಿಸಿದರು

ಈ ಸಂದರ್ಭದಲ್ಲಿ. ಅಮರೇಗೌಡ ವಕೀಲರು, ಶರಣಬಸವ ನಾಯಕ, ಯಲ್ಲನಗೌಡ ಮಾಲಗತ್ತಿ, ಪಂಪನಗೌಡ ಜಾಲಿಹಾಳ, ರಾಮಣ್ಣ ಬಡಿಗೇರ್, ರವಿ ಗೌಡ ಕುಲಕರ್ಣಿ, ವಿದ್ಯಾರ್ಥಿ ಮುಖಂಡರು ಶರಣಬಸವ ಸಂಕನೂರ, ಮಹಮದ್ ಸುಲೇಮಾನ್, ಶರಣಬಸವ ಸಂಗನಾಳ, ಶೋಯಬ್ ಅಕ್ತರ, ನೀಲಪ್ಪ ತಾವರಗೇರಾ, ಬಾಬು ಚಳಗೇರಿ, ಹಾಗೂ ಊರಿನ ಮುಖಂಡರು ಮತ್ತು ವಿದ್ಯಾರ್ಥಿ ಮುಖಂಡರು ಉಪಸ್ಥಿತರಿದ್ದರು

## ಪೊತಿ ಖಾತಾ ಆಂದೋಲನದಲ್ಲಿ ಅಕ್ರಮ

# ಆಸ್ತಿ ದಾಖಲು ಅಧಿಕಾರಿಗಳ ವಿರುದ್ದ ಕ್ರಮಕ್ಕೆ ಆಗ್ರಹ ನೊಂದ ರೈತ



• ಮಲ್ಲಮ್ಮ ನುಡಿ ವಾರ್ತೆ, ಕಲಘಟಗಿ :

ತಾಲೂಕಿನ ರಾಮನಾಳ ಗ್ರಾಮದ ಸಿಧ್ದಪ್ಪ ಬಸಪ್ಪ ತಳವಾರ ಎನ್ನುವರು ರಿ.ಸ.ನಂ 75*/*ಕ್ಷೇತ್ರ 16 ಎಕರೆ.17 ಗುಂಟೆ ಜಮೀನನ್ನು ಯಾವುದೇ ಮೂಲ ಆಸ್ತಿದಾರರಿಗೆ ಮಾಹಿತಿ ನೀಡದೆ ಬೇರೆಯವರ ಹೆಸರು ಪಹಣಿಯಲ್ಲಿ ದಾಖಲು ಮಾಡಿದ ಘಟನೆ ಜರುಗಿದೆ. ದಾಸ್ತಿಕೊಪ್ಪ ವಿಶ್ರಾಂತಿ ಭವನದಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ನೊಂದ ರೈತ ಸಿದ್ದಪ್ಪ ತಳವಾರ ಇಗಾಗಲೇ ತಹಶಿಲ್ದಾರ ಕೋರ್ಟನಲ್ಲಿ ಹೆಸರು ದಾಖಲಿಸಿಕೊಂಡವರ ವಿರುದ್ದ ಕೇಸ ಬಿದ್ದು ಹೋಗಿದ್ದು ಇ ಮೊಕದ್ದಮೆ ಹಿರಿಯ ದಿವಾಣಿ ನ್ಯಾಯಲಯದಲ್ಲಿ ಪ್ರಕರಣ ದಾಖಲಾಗಿರುತ್ತದೆ ಇವೆಲ್ಲ ಘಟನೆಗಳ ನಡುವಿಯೂ ಅಧಿಕಾರಿಗಳು ನಮ್ಮ ಗಮನಕ್ಕೆ ತರದೆ ಯಾವುದೇ ಕ್ರಮ ಭದ್ದ ನೋಟಿಸನ್ನು ನೀಡದೆ ಪಟ್ಟಭದ್ದ ಹಿತಾಸಕ್ತಿಗಳ ವತ್ತಾಯಕ್ಕೆ ಮಣಿದು 26ಜನ ರೈತರು ಅಧಿಕಾರಿಗಳಿಬ್ಬರು ಸೇರಿ ಪಹಣಿ ಪತ್ರಿಕೆಯ ಕಾಲಂ ನಂ9 ಮತ್ತು 12ರಲ್ಲಿ ಹೆಸರುಗಳನ್ನು ದಾಖಲುಮಾಡಿರುತ್ತಾರೆ ಇ ಕುರಿತು ನಾನು ಸ್ಥಳೀಯ ಪಟ್ಟಣದ ಪೊಲೀಸ ಠಾಣೆಯಲ್ಲಿ ಪಿರ್ಯಾದಿ ದಾಖಲು (ಪ್ರಾಥಮಿಕ ವರ್ತಮಾನ ವರದಿ) ಮಾಡಿ ತಪ್ಪಿಗಸ್ಥರ ವಿರುದ್ದ ಕ್ರಮ ಜರುಗಿಸುವಂತೆ ನ್ಯಾಯಾಲಯದ ಮೊರೆ ಹೋಗಿದ್ದೆನೆ ಎಂದರು.ಪತ್ರಿಕಾ ಗೋಷ್ಠಯಲ್ಲಿ ಯಲ್ಲಪ್ಪ ಮೇಲಿನಮನಿ, ಹೂಗಪ್ಪ ಆಚಮಟ್ಟಿ, ದೇವರಾಜ

> **ಇಗಾಗಲೇ ಇ ಪ್ರಕರಣ ಕುರಿತು ನನ್ನ ಗಮನಕ್ಕೆ ಬಂದಿದ್ದು ಮೇಲಾದಿಕರಿಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದು**
>
> **ಬಸವರಾಜ**
> **ಹೊಂಕಣ್ಣವರ ತಹಶಿಲ್ದಾರ**

# ಜ.25ಕ್ಕೆ ಕಮಲನಗರ ಸಂಚಾರ ನ್ಯಾಯಾಲಯ ಉದ್ಘಾಟನಾ ಸಮಾರಂಭ

• ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:




ಪಟ್ಟಣದ ವಿಶ್ವಾಸ ನಗರ, ಮದನೂರ ರಸ್ತೆ ಹತ್ತಿರ ಇರುವ ಮೆಟ್ರಿಕ ಪೂರ್ವ ವಸತಿ ನಿಲಯ ಆವರಣದಲ್ಲಿ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ಔರಾದ್ (ಬಿ) ಆಯೋಜನೆ ಮಾಡಿದ ಕಮಲನಗರ ಸಂಚಾರ ನ್ಯಾಯಾಲಯದ ಉದ್ಘಾಟನಾ ಸಮಾರಂಭ ಜನವರಿ 25 ಭಾನುವಾರ ರಂದು ನಡೆಯಲಿದೆ. ಕಾರ್ಯಕ್ರಮದ ಉದ್ಘಾಟಕ್ಕರಾಗಿ ನ್ಯಾಯಮೂರ್ತಿ ಹಂಚಾಟೆ ಸಂಜೀವ್‌ಕುಮಾರ್

ಗೌರವಾನ್ವಿತ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಬೀದರ್ ಜಿಲ್ಲಾ ಆಡಳಿತ ನ್ಯಾಯಾಧೀಶರು. ಅಧ್ಯಕ್ಷತೆ:ಈಶ್ವರ ಬಿ. ಖಂಡ್ರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು. ಗೌರವ ಅತಿಥಿಗಳಾಗಿ ಸಾಗರ ಈಶ್ವರ ಖಂಡ್ರೆ ಸಂಸದರು, ಬೀದರ್ ಲೋಕಸಭಾ ಕ್ಷೇತ್ರ. ಹಾಗೂ ಪ್ರಭು ಬಿ. ಚವ್ಹಾಣ ಶಾಸಕರು, ಔರಾದ್ (ಬಿ) ವಿಧಾನಸಭಾ ಕ್ಷೇತ್ರ.

ಅತಿಥಿಗಳಾಗಿ ಸೈಯದ್ ಬಾಲೆಗೂರ್ ರಹಮಾನ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ್. ಹಾಗೂ ಶ್ರೀಮತಿ ಶಿಲ್ಪಾ ಶರ್ಮಾ ಜಿಲ್ಲಾಧಿಕಾರಿಗಳು, ಬೀದರ. ಬಾಲಾಜಿ ಕಂಬಾರ ಅಧ್ಯಕ್ಷರು, ವಕೀಲರ ಸಂಘ, ಔರಾದ್ (ಬಿ), ಬಾಲಾಜಿ ಉಪಾಸೆ, ಪ್ರಧಾನ ಕಾರ್ಯದರ್ಶಿಗಳು, ವಕೀಲರ ಸಂಘ, ಔರಾದ್ (ಬಿ),ಶ್ರೀ ಶಿವಶಂಕರ್ ಕಂಶೆಟ್ಟಿ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೀದರ್ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವಕೀಲರ ಸಂಘದ ಎಲ್ಲಾ ಸದಸ್ಯರು, ಔರಾದ್ (ಬಿ) ಕಾರ್ಯಕ್ರಮ ಯಶಸ್ವಿ ಮಾಡುವಂತೆ ಕೊರಿದ್ದಾರೆ.

# ವಿವಿಧ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:

ಚಿಂಚೋಳಿ ಪುರಸಭೆಯಿಂದ 2022–23ನೇ ಸಾಲಿನಲ್ಲಿ ಶೇ. 5ರ ಯೋಜನೆ ಹಾಗೂ 2025–26ನೇ ಸಾಲಿನ ಶೇ. 24.10 ಯೋಜನೆಯಡಿ ಕೆಳಕಂಡ ಸೌಲಭ್ಯ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಚಿಂಚೋಳಿ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

2022–23ನೇ ಸಾಲಿಗೆ ಶೇ. 5ರ ಯೋಜನೆಯಡಿ ವಿಕಲಚೇತನರಿಗೆ ದ್ವಿಚಕ್ರ ವಾಹನ ಒದಗಿಸಲಾಗುತ್ತಿದೆ. ಅದೇ ರೀತಿ 2025–26ನೇ ಸಾಲಿನಲ್ಲಿ ಶೇ. 24.10 ಯೋಜನೆಯಡಿ ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸಹಾಯಧನ ನೀಡಲಾಗುತ್ತಿದೆ.

ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಅವಶ್ಯಕ ದಾಖಲೆಗಳನ್ನು ಲಗತ್ತಿಸಿ 2026ರ ಫೆಬ್ರವರಿ 6 ರೊಳಗಾಗಿ ಚಿಂಚೋಳಿ ಪುರಸಭೆ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಚಿಂಚೋಳಿ ಪುರಸಭೆ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

# ದಾಸೋಹ ತತ್ವ ವಿಶ್ವಕ್ಕೆ ಮಾದರಿ

• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ:



ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿ ಅವರ ದಾಸೋಹ ತತ್ವ ವಿಶ್ವಕ್ಕೆ ಮಾದರಿಯಾಗಿದೆ ಎಂದು ಹಿರೇಮಠ ಸಂಸ್ಥಾನದ ನಿರಂಜನ ಸ್ವಾಮೀಜಿ ಹೇಳಿದರು.

ಪಟ್ಟಣದ ಮಹಾತ್ಮ ಗಾಂಧಿ ವೃತ್ತದಲ್ಲಿ ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿ ಹಿತೈಷಿಗಳ ಸಂಘ ಭಾಲ್ಕಿ ಸಹಯೋಗದಲ್ಲಿ ಡಾ.ಶಿವಕುಮಾರ ಸ್ವಾಮೀಮಿ ಅವರ 7ನೇ ಪುಣ್ಯ ಸ್ಮರಣೆ ನಿಮಿತ್ತ ಶುಕ್ರವಾರ ಆಯೋಜಿಸಿದ್ದ ಅನ್ನದಾಸೋಹ ಕಾರ್ಯಕ್ರಮ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

> **ವಿದ್ಯೆ ಮತ್ತು ಅನ್ನದಾನದ ಮೂಲಕ ವಿದ್ಯಾರ್ಥಿಗಳ ಬದುಕುನ್ನು ಬೆಳಗಿದ ಶಿವಕುಮಾರ ಸ್ವಾಮೀಜಿ ಅವರು ಲಕ್ಷಾಂತರ ಕುಟುಂಬಗಳಿಗೆ ಬೆಳಕಾಗಿದ್ದಾರೆ. ಸಿದ್ಧಗಂಗಾ ಮಠದಲ್ಲಿ ಓದಿದ ಸಾವಿರಾರೂ ವಿದ್ಯಾರ್ಥಿಗಳು ಇಂದು ಸಮಾಜದಲ್ಲಿ ಉನ್ನತ ಹುದ್ಧೆ ಅಲಂಕರಿಸಿ ಸೇವೆ ಸಲ್ಲಿಸುತ್ತಿದ್ದಾರೆ.**
>
> **ಚಂದ್ರಶೇಖರ ಬನ್ನಾಳೆ**
> ತಾಲೂಕು ಅಧ್ಯಕ್ಷರು ಸರಕಾರಿ ನೌಕರರ ಸಂಘ ಭಾಲ್ಕಿ

ಸಿದ್ಧಗಂಗೆ ಮಠದಲ್ಲಿ ಪೂಜ್ಯರು ತಮ್ಮ ಜೀವಿತಾವಧಿಯಲ್ಲಿ 10 ಸಾವಿರಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ಉಚಿತ ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಇಡೀ ದೇಶಕ್ಕೆ ಮಾದರಿಯಾಗುವಂತಹ ಕೆಲಸ ಮಾಡಿದ್ದಾರೆ. ಬಸವಣ್ಣನವರು ಬೋಧಿಸಿದ ಕಾಯಕ ದಾಸೋಹ ತತ್ವವನ್ನು ಪೂಜ್ಯರು ನಿಜ ಜೀವನದಲ್ಲಿ ಆಚರಣೆಗೆ ತಂದು ಸಮಾಜದಲ್ಲಿನ ಬಡವರು, ದುರ್ಬಲರು, ನಿರ್ಗತಿಕ ಮಕ್ಕಳ ಬಾಳನ್ನು ಉಜ್ವಲಗೊಳಿಸುವ ಕೆಲಸ ಮಾಡಿದ್ದಾರೆ.

ಹಾಗಾಗಿ ಎಲ್ಲರೂ ಬಸವಣ್ಣನವರ, ಸಿದ್ಧಗಂಗೆ ಪೂಜ್ಯರು, ಡಾ.ಚನ್ನಬಸವ ಪಟ್ಟದ್ದೇವರ ವಿಚಾರ ಮೈಗೂಡಿಸಿಕೊಂಡು ದಾಸೋಹ ತತ್ವವನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು. ಬಸವಲಿಂಗ ಸ್ವಾಮೀಜಿ, ಶಿವಬಸವ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಸಿದ್ಧಗಂಗಾ ಹಳೆ ವಿದ್ಯಾರ್ಥಿಗಳ ಸಂಘದ ಜಿಲ್ಲಾಧ್ಯಕ್ಷ ಶಿವಕುಮಾರ ಪಾಟೀಲ್ ತೇಗಂಪುರ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ತಾಲೂಕು ಸರಕಾರಿ ನೌಕರರ ಸಂಘದ ಚಂದ್ರಶೇಖರ ಬನ್ನಾಳೆ, ತಾಲೂಕು ಕಸಾಪ ಅಧ್ಯಕ್ಷ ನಾಗಭೂಷಣ ಮಾಮಡಿ, ನಗರ ಘಟಕದ ಅಧ್ಯಕ್ಷ ಸಂತೋಷ ಬಿಜಿ ಪಾಟೀಲ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಚಂದ್ರಶೇಖರ ವಂಕೆ, ಆಕಾಶ ಪಾಟೀಲ್, ವೀರೇಶ ಚೀಲಶೆಟ್ಟೆ, ಪವನ ಶಿಂಧೆ, ಮಹೇಶ ಗೋಧೆ, ಸಂಗಮೇಶ ಮೈನಳ್ಳಿ, ಪ್ರಕಾಶ ವಾಲೆ, ಆಕಾಶ ಕಾರಾಮುಂಗೆ, ಆಕಾಶರೆಡ್ಡಿ, ಅರವಿಂದ ಕುಲಕರ್ಣಿ, ಸಂಗಮೇಶ ಜೈನಾಪುರೆ ಸೇರಿದಂತೆ ಹಲವರು ಇದ್ದರು. ಸಿದ್ಧಗಂಗಾ ಹಳೆ ವಿದ್ಯಾರ್ಥಿಗಳ ಸಂಘದ ತಾಲೂಕು ಅಧ್ಯಕ್ಷ ಸೋಮನಾಥ ತುಗಶೆಟ್ಟೆ ಸ್ವಾಗತಿಸಿದರು. ಗುಂಡಪ್ಪ ಸಂಗಮಕರ್ ನಿರೂಪಿಸಿದರು. ಈಶ್ವರ ರುಮ್ಮಾ ವಂದಿಸಿದರು.

# ರಾಜ್ಯಪಾಲರ ನಡೆಗೆ ಡಾ. ಬಿ. ಆರ್. ಅಂಬೇಡ್ಕರ್ ಯುತ್ ಬ್ರಿಗೇಡ್‌ನಿಂದ ತೀವ್ರ ವಿರೋಧ

ಮಲ್ಲಮ್ಮ ನುಡಿ ವಾರ್ತೆ
ಬೀದರ್



ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನದ ಮೊದಲ ದಿನವೇ ಸಂಭವಿಸಿದ ಘಟನೆಗೆ ಡಾ.ಬಿ.ಆರ್.ಅಂಬೇಡ್ಕರ್ ಯುತ್ ಬ್ರಿಗೇಡ್ ಸಂಘಟನೆ ತೀವ್ರ ವಿರೋಧ ವ್ಯಕ್ತಪಡಿಸಿದೆ.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಸಂಪ್ರದಾಯದಂತೆ ಸರ್ಕಾರದ ತಯಾರಿಸಿದ ಭಾಷಣವನ್ನು ಸಂಪೂರ್ಣವಾಗಿ ಓದದೆ, ಕೆಲವೇ ಸಾಲುಗಳನ್ನು ಹೇಳಿ ಅಧಿವೇಶನದಿಂದ ಹೊರನಡೆದ ಕ್ರಮವನ್ನು ಡಾ.ಬಿ.ಆರ್. ಅಂಬೇಡ್ಕರ್ ಯುತ್ ಬ್ರಿಗೇಡ್ ಬೀದರ್ ಜಿಲ್ಲಾ ಅಧ್ಯಕ್ಷ ಉದಯ್ ನಾಯಕ್ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು,

ರಾಜ್ಯಪಾಲರು ಸಂವಿಧಾನಾತ್ಮಕ ಹುದ್ದೆಯಲ್ಲಿ ಇರುವವರು. ಅವರು ಯಾವುದೇ ರಾಜಕೀಯ ಪಕ್ಷದ ಪ್ರತಿನಿಧಿಯಾಗಿರುವುದಿಲ್ಲ. ಆದರೆ ಇತ್ತೀಚಿನ ನಡೆ ಸಂವಿಧಾನದ ವಿಧಿಗಳಿಗೆ ವಿರುದ್ಧವಾಗಿದ್ದು, ಹೊಸದಾದ ತಪ್ಪು ಸಂಪ್ರದಾಯಕ್ಕೆ ನಾಂದಿ ಹಾಡುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಹಿಂದೆಂದೂ ಕಂಡು ಕೇಳರಿಯದಂತಹ ಘಟನೆ ಇದಾಗಿದ್ದು, ಇದು ಸಂವಿಧಾನಕ್ಕೆ ಗೌರವ ನೀಡುವ ಎಲ್ಲ ನಾಗರಿಕರಿಗೆ ನೋವು ತಂದಿದೆ ಎಂದು ಅವರು ಹೇಳಿದ್ದಾರೆ. ರಾಜ್ಯಪಾಲರಂತಹ ಉನ್ನತ ಹುದ್ದೆಯಲ್ಲಿರುವವರು ಸಂವಿಧಾನಾತ್ಮಕ ಮೌಲ್ಯಗಳನ್ನು ಗೌರವಿಸಿ ನಡೆದುಕೊಳ್ಳಬೇಕೆಂದು

# ಅಕ್ರಮ ಮದ್ಯ ಮಾರಾಟ ವಿರೋಧಿಸಿ ಜನಜಾಗೃತಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಗ್ಗಿಲ್ಲದೆ ಹಳ್ಳಿ ಹಳ್ಳಿಗಳಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟದ ವಿರುದ್ಧ ಜನರಿಗೆ ಜಾಗೃತಿ ಮೂಡಿಸಿ ಮದ್ಯ ಮುಕ್ತ ಕಲ್ಯಾಣ ಕರ್ನಾಟಕದ ನಿರ್ಮಾಣಕ್ಕೆ ಕೆ ಆರ್ ಎಸ್ ಪಕ್ಷದ ವತಿಯಿಂದ ಇಂದು ಬಳ್ಳಾರಿ ಜಿಲ್ಲಾ, ಕಂಪ್ಲಿ ತಾಲ್ಲೂಕಿನ ಇಟಗಿ ಗ್ರಾಮದಲ್ಲಿ ಅರಿವಿನ ಕ್ರಾಂತಿ (ಕುಡಿತ ಬಿಡಿಸಿ ಸಂಸಾರ ಉಳಿಸಿ) ಕಾರ್ಯಕ್ರಮ ನಡೆಯಿತು.

ಬೆಳಿಗ್ಗೆ ಕಂಪ್ಲಿ ಬಸ್ ನಿಲ್ದಾಣದಿಂದ ಪಕ್ಷದ ನೂರಾರು ಸೈನಿಕರ ನೇತೃತ್ವದಲ್ಲಿ ಆರಂಭವಾದ ಜಾಥಾವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸರಾಯಿ ಬೇಡ,ಶಿಕ್ಷಣ ಬೇಕು.ನಮಗೆ ಬೀರು ಬೇಡ,ನೀರು ಬೇಕು. ಎಂಬ ಘೋಷಣೆ ಕೂಗುತ್ತಾ ಅಕ್ರಮವಾಗಿ ಮದ್ಯ ಮಾರುವ ಅಂಗಡಿಗಳಿಗೆ ಭೇಟಿ ಮಾಡಿ ಅಕ್ರಮ ಮದ್ಯ ಮಾರುವುದನ್ನು ನಿಲ್ಲಿಸುವಂತೆ ಅಂಗಡಿ ಮಾಲೀಕರಿಗೆ ಮನವಿ ಮಾಡಲಾಯಿತು.

ಸಭಾಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕೆ ಆರ್ ಎಸ್ ಪಕ್ಷದ ಗೌರವಾಧ್ಯಕ್ಷರಾದ ಶ್ರೀ ರವಿ ಕೃಷ್ಣಾರೆಡ್ಡಿ ಅವರು ರಾಜ್ಯದಲ್ಲಿ ನಮ್ಮನ್ನು ಆಳುವ ಯಾವುದೇ ಸರ್ಕಾರಗಳು ಜಾರಿ ಮಾಡುತ್ತಿರುವ ಯಾವುದೇ ಜನ ಕಲ್ಯಾಣದ ಯೋಜನೆಗಳು ವಿಶೇಷವಾಗಿ ಬಡತನ




ನಿರ್ವಹಣೆಯಂತಹ ವಿಶೇಷ ಯೋಜನೆಗಳು ಗಣನೀಯವಾಗಿ ಫಲ ನೀಡದೇ ಇರುವ ಕಾರಣ ಕಲ್ಯಾಣ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಮದ್ಯ ಮಾರಾಟ ನಡೆಯುತ್ತಿದ್ದು ಇದ–ರಿಂದಾಗಿ ಮಹಿಳೆಯರು,ಯುವಕರು,ಬಡವರು,ಹಿಂದುಳಿದವರು,ಸಾಮಾನ್ಯ ಜನರು ಬಲಿಯಾಗುತ್ತಿದ್ದಾರೆ. ಹಾಗಾಗಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಕಲ್ಯಾಣ ಕರ್ನಾಟಕದ ಭಾಗದ ಹಲವು ಜಿಲ್ಲೆಗಳಲ್ಲಿ ಈ ಜಾಥಾವು ಆಯೋಜಿಸಲಲಾಗಿದೆ.ಅಕ್ರಮ ಮದ್ಯ ಮಾರಾಟವನ್ನು ಸ್ಥಳೀಯ ಸಂಸ್ಥೆಗಳ ಮತ್ತು ಇಲಾಖೆಗಳ ಅಧಿಕಾರಿಗಳ(ಗ್ರಾಮ ಪಂಚಾಯತಿ ಅಭಿವೃದಿ ಅಧಿಕಾರಿಗಳು,ಪೊಲೀಸ್ ಇಲಾಖೆ,ಅಭಕಾರಿ ಇಲಾಖೆ)ವಿಶೇಷ ಕಾರ್ಯವು ಪ್ರಮುಖವಾಗಿದ್ದು ಅಧಿಕಾರಿಗಳು ಅಕ್ರಮ ಮದ್ಯ ಮಾರಾಟ ತಡೆಯುವಲ್ಲಿ ನಿರ್ಭೀತಿಯಿಂದ ಕೆಲಸ ಮಾಡಬೇಕೆಂದು ತಿಳಿಸಿ ಅಕ್ರಮದ ಮದ್ಯ ಮಾರಾಟ ಕರ್ನಾಟಕದಲ್ಲಿ ಸಂಪೂರ್ಣ ನಿಷೇಧಿಸುವಂತೆ ಒತ್ತಾಯಿಸಿ ಅಭಕಾರಿ ಇಲಾಖೆಯ ಮುಖ್ಯಸ್ಥರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಮಾಡಲಾಯಿತು.

ಮಹಿಳಾ ಘಟಕದ ರಾಜ್ಯಾಧ್ಯಕ್ಷರಾದ ಶ್ರೀಮತಿ ಆಶಾ ವೀರೇಶ್ ಮಾತನಾಡಿ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯದಿಂದಾಗಿ ಹಾಗೂ ಜನಪ್ರತಿನಿಧಿಗಳ ಸರ್ಕಾರದ ಕಾನೂನು ನಿಯಮಗಳ ಉಲ್ಲಂಘನೆಯಿಂದಾಗಿ ಹಳ್ಳಿ ಹಳ್ಳಿಗಳಲ್ಲಿ, ಅಂಗಡಿಯ ಮುಂಗಟ್ಟುಗಳಲ್ಲಿ, ಹಾದಿ ಬೀದಿಗಳಲ್ಲಿ, ಅಕ್ರಮವಾಗಿ ಸರಾಯಿ ಸಿಗುವಂತಾಗಿದ್ದು ಇದರಿಂದ ಸಾರ್ವಜನಿಕರು ಮದ್ಯ ವ್ಯಸನಿಗಳಾಗುತ್ತಿದ್ದು ಇದರಿಂದ ಸಾಮಾಜಿಕ,ಆರ್ಥಿಕ,ಕೌಟಂಬಿಕ ಸಮಸ್ಯೆಗಳಿಂದ ಖಿನ್ನತೆಗೆ ಒಳಗಾಗಿ ಜೀವನವನ್ನೇ ಹಾಳುಮಾಡಿಕೊಳ್ಳುತ್ತಿರುವ ಪ್ರಸಂಗಗಳು ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಕಾಣಬಹುದಾಗಿದೆ.ಕೆ ಆರ್ ಎಸ್ ಪಕ್ಷವು ಮಹಿಳಾ ಘಟಕದ ನೇತೃತ್ವದಲ್ಲಿ ರಾಜ್ಯದಲ್ಲಿ ಜೆಸಿಬಿ ಪಕ್ಷಗಳು ಮಾಡದೇ ಇರುವ ವಿಶೇಷವಾದ ಕಾರ್ಯಕ್ರಮಗಳನ್ನು ಮತ್ತು ಅಭಿಯಾನಗಳನ್ನು ಹಮ್ಮಿಕೊಳ್ಳುವ ಮೂಲಕ ಜನರ ಜಾಗೃತಿ ಮಾಡಿ ಮುಂದಿನ ದಿನಗಳಲ್ಲಿ ಸಂಪೂರ್ಣವಾಗಿ ಮದ್ಯ ಮುಕ್ತ ಕರ್ನಾಟಕದ ನಿರ್ಮಾಣದ ಕಾರ್ಯಕ್ಕೆ ಮುಂದಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮದ್ಯಪಾನ ನಿಷೇಧ ಆಂದೋಲನದ ಮುಖ್ಯಸ್ಥೆ, ರಾಜ್ಯ ಕಾರ್ಯಾಧ್ಯಕ್ಷ ರಘು ಜಾಣಗೆರೆ, ರಾಜ್ಯ ಕಾರ್ಯದರ್ಶಿಗಳಾದ ರಮೇಶ್ ಗೌಡ ಮಹಿಳಾ ಘಟಕದ ಉಪಾಧ್ಯಕ್ಷೆ ಶಕುಂತಲಾ, ರಾಜ್ಯ ಸಂಘಟನಾ ಕಾರ್ಯದರ್ಶಿ ದೀಪಾ ಮನೂರ್, ಪುಷ್ಪ ನಿರುಪಾದಿ ಕೆ ಗೋಮರ್ಸಿ,ಮೇರಿ, ರೇಖಾ, ತರಂಗಿಣಿ ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ
**ಪುರಸಭೆ ಕಾರ್ಯಾಲಯ ಭಾಲ್ಕಿ**

ಸಂಖ್ಯೆ: ಪುಸಭಾ/ಇಎನ್‌ಜಿ/ಸಿಆರ್– /2025–26 ದಿನಾಂಕ: 23–01–2026

**ಟೆಂಡರ್ ಪ್ರಕಟಣೆ**

1) ಕಾಮಗಾರಿ/ ಸರಕು/ಸೇವೆಯ ವಿವರ **Indent no : 54395, 54399, 54360**, 2) ಕಾಮಗಾರಿಯ ಅಂದಾಜು ಮೊತ್ತ kppportal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ kppportal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ kppportal ನಲ್ಲಿ ನಮೂದಿಸಿದಂತೆ 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು **09-02-2026 up to 04:30 PM,** 6) ಟೆಂಡರ ತೆರೆಯುವ ದಿನಾಂಕ **10-02-2026 AT 5:00 PM ,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಮುಖ್ಯಾಧಿಕಾರಿ ಪುರಸಭೆ ಭಾಲ್ಕಿ ಇ–ಮೇಲ್: ka.bhalki.tmc@gmail.com ಫೊನ್:08484–261941, 8) ಅಂತರಜಾಲ ತಾಣದ ವಿಳಾಸ www.kppp.karnataka.gov.in

ಸಹಿ/–ಮುಖ್ಯಾಧಿಕಾರಿ
ಪುರಸಭೆ ಭಾಲ್ಕಿ

ವಾ.ಸಾ.ಸಂ.ಇ/ಬೀದರ/307/ಕೆ.ಎಸ್.ಎಂ.ಸಿ.&ಎ/2025–26

# ಬೀದಿಬದಿ ವ್ಯಾಪಾರಿಗಳು ಶಿಸ್ತಿನಿಂದ ವ್ಯಾಪಾರ ಮಾಡಿ ಸಹಕಾರಕ್ಕೆ ಸಿದ್ಧ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಬೀದಿಬದಿ ವ್ಯಾಪಾರಿಗಳು ನಗರದಲ್ಲಿ ಮಾರುಕಟ್ಟೆ ಮತ್ತು ರಸ್ತೆ ಬದಿಯಲ್ಲಿನ ವ್ಯಾಪಾರಸ್ಥರು ಎಲ್ಲಾ ರೀತಿಯ ಡಿಜಿಟಲ್ ವ್ಯವಹಾರಗಳಾದ ಫೋನ್ ಪೇ, ಗೂಗಲ್ ಪೇ, ಸ್ಕ್ಯಾನರ್ ಗಳಿಂದ ವ್ಯವಹಾರ ಮಾಡುತ್ತಾ ಅತ್ಯಂತ ಶಿಸ್ತು ಮತ್ತು ಸ್ವಚ್ಛತೆ ಕಾಪಾಡುವವರಿಗೆ ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ಧ ಎಂದು ಪೌರಾಯುಕ್ತ ಜೀವನ ಕಟ್ಟಿಮನಿ ಅವರು ಹೇಳಿದರು. ಶಹಾಪುರ ನಗರ ಸಭೆ ಮತ್ತು ಭಾರತಾಂಬೆ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ರವರ ಸಂಯುಕ್ತ ಆಶ್ರಯದಲ್ಲಿ 2025 –26ನೇ ಸಾಲಿನ ಕೇಂದ್ರ ಪುರಸ್ಕೃತ ಯೋಜನೆಯಡಿ ಮೈ ಬಿ ಡಿಜಿಟಲ್ ಕುರಿತು ಶಹಾಪುರದಲ್ಲಿ ಏರ್ಪಡಿಸಿದ್ದ

ತರಬೇತಿಕಾರ್ಯಕ್ರಮಉದ್ಘಾಟಿಸಿಮಾತನಾಡಿದರು.ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಪರಿಸರ ಅಭಿಯಂತರರಾದ ಹರೀಶ್ ಸಜ್ಜನಶೆಟ್ಟಿ ಮಾತನಾಡಿ, ಪ್ಲಾಸ್ಟಿಕ್ ಬಳಸಿದರೆ



ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಪ್ಲಾಸ್ಟಿಕ್ ಮುಕ್ತ ವ್ಯವಹಾರ ಮಾಡಬೇಕು ಎಂದು ಹೇಳಿದರು. ಕಾರ್ಯಕ್ರಮ ನಿರ್ವಹಣೆ ಮತ್ತು ಮೇಲುಸ್ತುವಾರಿ ವಹಿಸಿದ ನಗರ ಅಭಿಯಾನ ವ್ಯವಸ್ಥಾಪಕರಾದ ಗುರುಪಾದ ತಳವಾರ್ ಪ್ರಾಸ್ತಾವಿಕ ಮಾತನಾಡಿ ಸಮಗ್ರ ಯೋಜನೆಯ ಬಗ್ಗೆ ವಿವರಿಸುತ್ತಾ ಸಾಮಾಜಿಕ ಭದ್ರತೆ ಯೋಜನೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಕಾರ್ಯಕ್ರಮದ ಆಯೋಜಕರಾದ ಭಾರತಾಂಬೆ ಸಂಸ್ಥೆಯ ಕಾರ್ಯದರ್ಶಿಗಳಾದ ಭೀಮಶಂಕರ್ ಬೆನಕನಹಳ್ಳಿ ಮಾತನಾಡಿ, ಬೀದಿಬದಿ ವ್ಯಾಪಾರಿಗಳಿಗೆ ಸ್ವಚ್ಛತೆ ಬಗ್ಗೆ ಉಪನ್ಯಾಸ ನೀಡುತ್ತಾ ಡಿಜಿಟಲ್ ವ್ಯವಹಾರದ ಕುರಿತು ಜಾಗೃತಿ ಮೂಡಿಸಿದರು. ಹಿಂದೆ 2.0 ಅಮೃತ್ ಯೋಜನೆಯಡಿ ಉದ್ಯಾನಗಳು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದ ಮಹಿಳಾ ಸಂಘಕ್ಕೆ ಹತ್ತುಸಾವಿರ ರೂಪಾಯಿ ನೀಡುವುದಾಗಿ ಭಾರತಾಂಬೆಯ ಸಂಸ್ಥೆಯು ಘೋಷಿಸಲಾಗಿತ್ತು. ಅದರಂತೆ ಎಲ್ಲಾ ಉದ್ಯಾನವನಗಳು ಪರಿಶೀಲಿಸಿ ಅಚ್ಚುಕಟ್ಟಾಗಿ ನಿರ್ವಹಣೆ ಮಾಡುತ್ತಿರುವ ಪಾರಿಜಾತ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೇ ಹತ್ತುಸಾವಿರ ರೂಪಾಯಿ ಬಹುಮಾನದ ಚೆಕ್ ವಿತರಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಆರೋಗ್ಯ ಇಲಾಖೆಯ ಅಧಿಕಾರಿ ನೈರ್ಮಲಿಕರಣದಿಂದ ಆಗುವ ಪರಿಣಾಮಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ನ ವ್ಯವಸ್ಥಾಪಕರೂ ಇನ್ಸೂರೆನ್ಸ್‌ನಿಂದಾಗುವ ಪ್ರಯೋಜನೆಗಳ ಬಗ್ಗೆ ತಿಳಿಸಿದರು. ಕರ್ನಾಟಕ ಬ್ಯಾಂಕ್ ಮತ್ತು ಇತರೆ ಬ್ಯಾಂಕ್ ಅಧಿಕಾರಿಗಳು ಉಪಸ್ಥಿತರಿದ್ದರು. ನೂರಾರು ಜನ ಬೀದಿ ಬದಿ ವ್ಯಾಪಾರಿಗಳು ಮತ್ತು ಸಿಆರ್‌ಪಿ ಗಳಾದ ಸಂಗೀತ ಸ್ವಾಗತಿಸಿ ಕವಿತಾ ರವರು ವಂದಿಸಿ ಸುಧಾ ರವರು ನಿರೂಪಿಸಿದರು.

# ವಿಕಲಚೇತನರಿಂದ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಗ್ರಾಮೀಣ ಪುನರ್ವಸತಿ ಯೋಜನೆಯಡಿ ಯಾದಗಿರಿ ತಾಲ್ಲೂಕಿನ ಅರಿಕೇರಾ (ಬಿ) ಹಾಗೂ ಗುರುಮಠಕಲ್ ತಾಲ್ಲೂಕಿನ ಚಂಡ್ರಕಿ ಗ್ರಾಮ ಪಂಚಾಯತನಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಸ್ಥಾನಕ್ಕೆ ಗೌರವ ಧನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು ಆಸಕ್ತಿಯುಳ್ಳ ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಶರಣಪ್ಪ ಪಾಟೀಲ ಅವರು ತಿಳಿಸಿದ್ದಾರೆ. ದಾಖಲಾತಿಗಳು : ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಶಾಲಾ ವರ್ಗವಣಾ ಪ್ರಮಾಣ ಪತ್ರ, ವಿಕಲಚೇತನ ಗುರುತಿನ ಪ್ರಮಾಣ ಪತ್ರ, ತಹಸೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, 2 ಫೋಟೋ ಲಗತ್ತಿಸಬೇಕು. ಯಾದಗಿರಿ ತಾಲ್ಲೂಕಿನ ಅರಿಕೇರಾ (ಬಿ) ಹಾಗೂ ಗುರುಮಠಕಲ್ ತಾಲ್ಲೂಕಿನ ಚಂಡ್ರಕಿ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಸ್ಥಾನಕ್ಕೆ ತಾತ್ಕಾಲಿಕ ಗೌರವ ಧನ ಆಧಾರದ ಮೇಲೆ ಕಾರ್ಯನಿರ್ವಹಿಸಲು ಸ್ಥಳೀಯ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅರ್ಹ ವಿಕಲಚೇತನರಿಂದ 2026ರ ಫೆಬ್ರವರಿ 3ರ ಸಂಜೆ 5.30 ಗಂಟೆಯ ಒಳಗೆ ಅರ್ಜಿಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕೊಠಡಿ ಸಂ.ಬಿ11, ಬಿ12 ನೆಲಮಹಡಿ ಜಿಲ್ಲಾಡಳಿತ ಭವನ ಯಾದಗಿರಿ ಇಲ್ಲಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೇತಾಜಿ ಸುಭಾಷ್ ಚಂದ್ರ ಬೋಸ್ ಸ್ವಾತಂತ್ರ ಹೋರಾಟದ ಕ್ರಾಂತಿಯ ಕಿಡಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ನೇತಾಜಿ ಸುಭಾಷ್ ಚಂದ್ರಬೋಸ್ ಸ್ವಾತಂತ್ರಹಹೋರಾಟದ ಕ್ರಾಂತಿಯ ಕಿಡಿ ಎಂದು ಪ್ರಾಂಶುಪಾಲ ಜಸ್ಟಿನ್ ಕೆ.ಎಸ್ ಹೇಳಿದರು.ಪಟ್ಟಣದ ಡಿಡಿಯು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ನೇತಾಜಿ ಸುಭಾಷ್ ಚಂದ್ರಬೋಸ್ ರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.ಭಾರತದ ಸೈನ್ಯಬಲ ಗಡಿ ರಕ್ಷಣೆ ದೇಶದ ತಾತ್ವಿಕ ಆದರ್ಶಗಳ ಕುರಿತು ಅವರು ಅಪಾರಜ್ಞಾನವನ್ನು ಹೊಂದಿದ್ದರು ಅವರು ದೇಶದ ಜನರ ಮನಸ್ಸಿನಲ್ಲಿ ಇಂದಿಗೂ ಅಜರಾಮರವಾಗಿ ಉಳಿದಿದ್ದಾರೆ ವಿದ್ಯಾರ್ಥಿಗಳು ದೇಶ ಅಭಿಮಾನ ಬೆಳೆಸಿಕೊಳ್ಳುವುದರ ಜೊತೆಗೆ ಸ್ವಾತಂತ್ರ ಹೋರಾಟಗಾರರನ್ನು ಗೌರವಿಸಬೇಕು ಎಂದು ಹೇಳಿದರು.ಶಿಕ್ಷಕ ನಮಾನಂದ ಮಾತನಾಡಿ ವಿದ್ಯಾರ್ಥಿ ಜೀವನದಲ್ಲಿಯೇ ದೇಶ ಅಭಿಮಾನ ಹೋರಾಟದ ಗುಣಗಳನ್ನು ರೂಡಿಸಿಕೊಳ್ಳಬೇಕು ದೇಶಕ್ಕಾಗಿ ಪ್ರತಿಯೊಬ್ಬರು ತ್ಯಾಗ ಮನೋಭಾವ ಬೆಳೆಸಿಕೊಳ್ಳಬೇಕು ಅವರು ಯುವಕರ ಪಡೆಯನ್ನು ಕಟ್ಟಿಕೊಂಡು ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ಕೊಡಿಸುತ್ತೇನೆ ಎಂಬ ಘೋಷ ವಾಕ್ಯದೊಂದಿಗೆ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ನೇತಾಜಿ ಸುಭಾಷ್ ಚಂದ್ರಬೋಸ್ ರವರ ಕೊಡುಗೆ ಅಪಾರವಾದದ್ದು ಇಂದಿನ ಯುವ ಜನತೆ ಅವರ ತತ್ವ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.ಈ ಸಂದರ್ಭದಲ್ಲಿ ಖಂಡಪ್ಪ ವರಿಕೇರಿ,ಕಾಳಪ್ಪ ವಿಶ್ವಕರ್ಮ,ಹಾಗೂ ಶಿಕ್ಷಕ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾಹಿತ್ಯ ಕ್ಷೇತ್ರಕ್ಕೆ ಹಾರಕೂಡ ಮಠದ ಕೊಡುಗೆ ಅಪಾರ –ಶರಣಪ್ಪ ತಳವಾರ.



• ಮಲ್ಲಮ್ಮ ನುಡಿ ವಾರ್ತೆ,ಬಸವಕಲ್ಯಾಣ :

ತಾಲೂಕಿನ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಪ್ರೊ. ಸೂಗಯ್ಯ ಹಿರೇಮಠ ಸ್ಮರಣಾರ್ಥ ನೀಡುವ 2025ನೇ ಸಾಲಿನ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿ–ತು. ದಿವ್ಯ ಸಾನಿಧ್ಯ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ವಹಿಸಿ ಕೊಂಡು ಭಾಗವಸಿದವರಿಗೆ ಆಶೀರ್ವಾದ ಮಾಡಿದರು. ಪಿಜೆಪಿ ಮುಖಂಡರಾದ ಶರಣಪ್ಪ ತಳವಾರ ಅವರು ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಹಾರ ಕೂಡ ಮಠದ ಪೂಜ್ಯರಾದ ಶ್ರೀ ಚೆನ್ನವೀರ ಶಿವಾಚಾರ್ಯರು ಲೋಕಕಲ್ಯಾಣ ಕಾರ್ಯಕ್ಕೆ ಈ ಭೂಮಿಯ ಮೇಲೆ ಅವತರಿಸಿ ಬಂದಿದ್ದಾರೆ, ಶ್ರೀಗಳ ಮಠವು ಯಾವುದೇ ಜಾತಿ ಮತಕ್ಕೆ ಸೀಮಿತವಾಗಿಲ್ಲ ಸರ್ವಜನಾಂಗದ ಶಾಂತಿಯ ತೋಟವಾಗಿದೆ ಹೀಗಾಗಿ ಶ್ರೀ ಮಠಕ್ಕೆ ಭಕ್ತ ಸಾಗರವೇ ಹರಿದು ಬರುತಿದೆ, ಶ್ರೀಗಳು ತ್ರಿವಿದ ದಾಸೋಹೋದೊಂದಿಗೆ ಬಡಗ್ರಾಮೀಣ ಮಕ್ಕಳಿಗೆ ಶಿಕ್ಷಣ ನೀಡುವುದರ ಮೂಲಕ ಅವರನ್ನು ಭವಿಷ್ಯದ ಪ್ರತಿಭೆಗಳನ್ನಾಗಿ ಮಾಡುತ್ತಿದ್ದಾರೆ, ರೈತರ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳುತ್ತಾ, ಸಾಹಿತ್ಯ ಕಲೆ ಸಂಗೀತ–ಕ್ಕೆ ಪೂಜ್ಯಶ್ರೀಗಳ ಪ್ರೋತ್ಸಾಹಿಸುತ್ತ ಬರುತ್ತಿರುವದರಿಂದ ಶ್ರೀ ಮಠದ ಕೊಡುಗೆ ಅಪಾರವಾಗಿದೆ, ಶಿವಸ್ವರೂಪಿಯಾದ ಪೂಜ್ಯರು ನಡೆದಾಡುವಜಗದ್ಗುರುಗಳಾಗಿದ್ದಾರೆಂದು ತಿಳಿಸಿದರು. ಇದೆ ಸಂದರ್ಭದಲ್ಲಿ 2025ನೇ ಸಾಲಿನ ಪ್ರಶಸ್ತಿ ಪುರಸ್ಕೃತರಾದ ಡಾ. ಬಸವರಾಜ ಪೊಲೀಸ್ ಪಾಟೀಲರಿಗೆ ಸಾಹಿತ್ಯ ಸಾಧಕ ಪ್ರಶಸ್ತಿ, ಮಲ್ಲಪ್ಪ ಹುಶೇನಪ್ಪ ಮಸ್ಕಿ ಅವರಿಗೆ ಜಾನಪದ ಕಲಾವಿದ ಸಾಧಕ ಪ್ರಶಸ್ತಿಯನ್ನು ಪೂಜ್ಯಶ್ರೀಗಳು ಹಾಗೂ ಅತಿಥಿಗಳು ಸೇರಿ ಪ್ರದಾನ ಮಾಡಿದರು. ಅದೇ ರೀತಿಯಾಗಿ ಗೌರವ ಪ್ರಶಸ್ತಿಗೆ ಭಾಜನರದ ಎಸ್ ಎಸ್ ದೇವರಕಲ್ಲ, ಜಯದೇವಿ ತೇಲಿ, ಗೋಪಿಕಾ ದೇವಿ ದೇಶಮುಖ, ನಾಗರಾಜ್ ಸಂಬಾಜಿ, ಬಸವರಾಜ್ ಐನೊಲಿ, ಕನಕಪ್ಪ ಬಿಲ್ಲವ, ಬಿ ಬಿ. ಸರಡಗಿ, ಡಾ ಸ್ವಾಮಿ ವಿವೇಕಾನಂದ ಇವರುಗಳಿಗೆ ಸಮಾರಂಭದಲ್ಲಿ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಾಹಿತಿ ಡಾ. ಸದಾನಂದ ಪೆರ್ಲ ಅವರು ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಪೂಜ್ಯ ಚೆನ್ನವೀರ ಶಿವಾಚಾರ್ಯರು ಧಾರ್ಮಿಕ ಸಾಮಾಜಿಕ ಸಾಂಸ್ಕೃತಿಕ ಶಿಕ್ಷಣ ಹಲವು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ನಿರಂತರ ಪ್ರಯತ್ನಿಸುತ್ತಿದ್ದಾರೆ, ಶ್ರೀಗಳ ಪ್ರಯತ್ನದಿಂದ ಶ್ರೀ ಮಠವು ನಾಡಿನ ಶ್ರೇಷ್ಠವಾಗಿ ಹೊರಹೋಮ್ಮಿರುವದ್ದಕ್ಕೆ ಶ್ರೀಗಳ ಪ್ರಗತಿಪರ ಕಾರ್ಯಕ್ರಮಳೇ ಕಾರಣವಾಗಿವೆ, ಸಾಹಿತ್ಯ ಕ್ಷೇತ್ರಕ್ಕೆ ಹಾರಕೂಡ ಮಠದ ಕೊಡುಗೆ ಮಹತ್ವದ್ದಾಗಿದೆ ಎಂದು ತಿಳಿಸಿದರು. ಅತಿಥಿಗಳಾದ ಡಾ ಮಲ್ಲಿಕಾರ್ಜುನ ಮುಕ್ಕಾ, ಅಧ್ಯಕ್ಷತೆ ವಹಿಸಿದ ಪ. ಮಾನು ಸಗರ ಕಾರ್ಯಕ್ರಮ ಕುರಿತು ಮಾತನಾಡಿದರು, ಸಾಹಿತಿ ಡಾ. ಗವಿಸಿದ್ದಪ್ಪ ಪಾಟೀಲ ಸ್ವಾಗತಿಸಿ, ಪ್ರಾಸ್ತವಿಕ ಮಾತನಾಡಿದರು, ಟ್ರಸ್ಟ್ ಅಧ್ಯಕ್ಷರಾದ ನಟರಾಜ ಎಸ್ ಹಿರೇಮಠ, ಶಾಂತಮ್ಮ ಹಿರೇಮಠ, ಡಾ. ಈಶ್ವರಯ್ಯ ಕೊಡಂಬಲ್ಲ, ಗಿರಿಮಲ್ಲಪ್ಪ ಹರವಾಳ. ಕಾರ್ಯಕ್ರಮ ದಲ್ಲಿ ವಿದ್ಯಾರ್ಥಿಗಳು, ಸಾಹಿತಿಗಳು, ಉಪನ್ಯಾಸಕರು, ಶ್ರೀಮಠದ ಭಕ್ತರು ಭಾಗವಹಿಸಿದ್ದರು ಸಾಹಿತಿ ಡಾ. ಚಿ. ಸಿ. ನಿಂಗಣ್ಣ ನಿರೂಪಿಸಿದರು ಚಿದಾನಂದ ಹಿರೇಮಠ ವಂದಿಸಿದರು.

# ನೇತಾಜಿ ಸುಭಾಷಚಂದ್ರ ಭೋಸ್ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ತಾಲೂಕಿನ ಬಳಿಚಕ್ರ ಗ್ರಾಮದ ಖಾಸಗಿ ಶಿಕ್ಷಣ ಸಂಸ್ಥೆಯಾದ ಜ್ಞಾನದೀಪ ಹಿರಿಯ ಪ್ರಾಥಮಿಕ ಶಾಲೆ ಅವರಣದಲ್ಲಿ ನಡೆದ ನೇತಾಜಿ ಸುಭಾಷಚಂದ್ರ ಭೋಸ್ ರವರ ಜಯಂತಿಯನು ಆಚರಣೆ ಮಾಡಲಾಯಿತು. ಈ ವೇಳೆಯಲ್ಲಿ ಸಂಸ್ಥೆಯ ಅಧ್ಯಕ್ಷರಾದ ಭೀಮರಾಯ ಕೋಟಗಾರ್, ಮುಖ್ಯ ಶಿಕ್ಷಕಿ ಶ್ರೀಮತಿ ಅಶ್ವಿನಿ.ಬಿ. ಕೋಟಗಾರ್. ಕುಮಾರಿ ಗೌರಮ್ಮ ಹಾಗೂ ಸಹ ಶಿಕ್ಷಕರ ಇತರರು ಭಾಗವಹಿಸಿದರು.

# ಜ, 25 ರಂದು ರಾಷ್ಟ್ರೀಯ ಮತದಾರರ ದಿನಾಚರಣೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಭಾರತ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಯಾದಗಿರಿ ಇವರ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಇದೇ ಜನೇವರಿ 25 ರಂದು ನಗರದಲ್ಲಿ ಆಚರಿಸಲಾಗುತ್ತಿದೆ. ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಏರ್ಪಡಿಸಲಾದ ಈ ಕಾರ್ಯಕ್ರಮವನ್ನು ಗೌರವಾನ್ವಿತ ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶರಾದ ಶ್ರೀ ಮರುಳಸಿದ್ಧಾರಾಧ್ಯ ಅವರು ಉದ್ಘಾಟಿಸುವರು.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ಹರ್ಷಲ್ ಭೋಯರ್ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು. ವಿಶೇಷ ಆಹ್ವಾನಿತರಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮರಿಯಪ್ಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಅವರು ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ಯುವ ಮತದಾರರಿಗೆ ಗುರುತಿನ ಚೀಟಿ ವಿತರಿಸಲಾಗುತ್ತದೆ. ನಾನು ಭಾರತ ವಿಡಿಯೋ ಪ್ರದರ್ಶನ, ಪ್ರತಿಜ್ಞಾ ವಿಧಿ ಸ್ವೀಕಾರ, ಜಿಲ್ಲಾ ಅತ್ಯುತ್ತಮ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಸನ್ಮಾನ ಹಾಗೂ ಬಹುಮಾನ ಸಹ ವಿತರಿಸಲಾಗುತ್ತದೆ.

## ರಾಮ ಜನ್ಮಭೂಮಿ ಎರಡು ವರ್ಷ ಪೂರ್ಣ

# ಚೌಡಯ್ಯನವರ ಜಯಂತಿಯ ಅಂಗವಾಗಿ ಅನ್ನ ಸಂತರ್ಪಣೆ.



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ರಾಮ ಜನ್ಮಭೂಮಿ ಪ್ರತಿಷ್ಠಾಪನೆಯ ಎರಡು ವರ್ಷಗಳ ಪೂರ್ಣತೆಯ ಅಂಗವಾಗಿ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅವರ 906 ನೇ ಜಯಂತ್ಯೋತ್ಸವದ ಪ್ರಯುಕ್ತ ಜಿಲ್ಲಾ ಕೋಲಿ ಕಬ್ಬಲಿಗ ಸಮಾಜದ ವತಿಯಿಂದ ನಗರದ ಗಾಂಧಿ ವೃತ್ತದ ಪಂಪ ಮಹಾ ಕವಿ ಮಂಟಪದಲ್ಲಿ ಮಹಾಪ್ರಸಾದ ವಿತರಣೆ ಕಾರ್ಯಕ್ರಮವನ್ನು

ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಲಕ್ಷ್ಮಣ್ಣ ಪೂಜಾರಿ ಗಡ್ಡಿಮನಿ, ಮಲ್ಲಿಕಾರ್ಜುನ ಗೋಸಿ, ಮಲ್ಲು ಪೂಜಾರಿ, ನಿಂಗಪ್ಪ ಜಾಲಗಾರ, ಸಣ್ಣ ಹನುಮಂತ ಬಳ್ಳಿಕರ್, ರಾಜಪ್ಪ ಸೈದಾಪುರ, ಮಹೇಶ್ ಪೂಜಾರಿ, ಮುದಕಪ್ಪ ಚಾಮನಳ್ಳಿ, ಶರಣು ಪಟ್ಟೆದಾರ್, ದೇವೇಂದ್ರಪ್ಪ ಪಸಪೂಲ್, ಶ್ರೀನಿವಾಸ್ ಚಾಮಹಳ್ಳಿ, ಸಾಬಣ್ಣ ಸು–ಣಗಾರ, ವಿಶ್ವ ಹೊನಿಗೇರಾ. ಸೇರಿದಂತೆ ಇನ್ನಿತರ ಪ್ರಮುಖರು ಉಪಸ್ಥಿತರಿದ್ದರು.

# ಈಶ್ವರ ಖಂಡ್ರೆ ಅವರಿಗೆ ಬಿಡಿಪಿಸಿ ಮತ್ತು ಬಿಡಿವಿಸಿಯಿಂದ ಅಭಿನಂದನೆ

• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ:

ಅರಣ್ಯ ಮತ್ತು ಪರಿಸರ ಸಚಿವರು ಹಾಗೂ ಬೀದರ ಜಿಲ್ಲೆಯ ಉಸ್ತುವಾರಿ ಸಚಿವರು ಆಗಿರುವ ಈಶ್ವರ ಖಂಡ್ರೆ ಅವರು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದು ಅತ್ಯಂತ ಹರ್ಷ ತಂದಿದೆ. ಈಶ್ವರ ಖಂಡ್ರೆ ಅವರಿಗೆ ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷರಾದ ಬಸವರಾಜ ಕೋರಕೆ, ವಿಶ್ವಸ್ಥ ಸಮಿತಿ ಅಧ್ಯಕ್ಷರಾದ ಶಶಿಕಾಂತ ದುರ್ಗೆ, ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಚಿರಡೆ, ಕೋಶಾಧ್ಯಕ್ಷ ರಾಜಕುಮಾರ ಹೊಳಕುಂದೆ, ಕಾರ್ಯದರ್ಶಿ ವಿವೇಕಾನಂದ ಹೊದಲೂರೆ, ನಿರ್ದೇಶಕರಾದ ವೀರಣ್ಣಾ ಹಲಶೆಟ್ಟೆ, ಸುಭಾಷ ಹೊಳಕುಂದೆ, ಮಲ್ಲಯ್ಯ ಸ್ವಾಮಿ, ಶ್ರೀಕಾಂತ ಬಡದಾಳೆ, ಅಶೋಕ ನಾಗರಾಳೆ, ಕಾಶಪ್ಪಾ ಸಕ್ಕರಬಾವಿ, ಜಗನ್ನಾಥ ಖೂಬಾ, ಭದ್ರಿನಾಥ ಪಾಟೀಲ, ಅನಿಲಕುಮಾರ ರಗಟೆ, ರೇವಣಪ್ಪಾ ರಾಯವಾಡೆ, ವಿಜಯಲಕ್ಷ್ಮೀ ಗಡ್ಡೆ, ಶ್ರೀ ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿ ಉಪಾಧ್ಯಕ್ಷ ಘಂಟೆಪ್ಪ ಭುರಾಳೆ, ಕಾರ್ಯದರ್ಶಿ ನಾಗಯ್ಯ ಸ್ವಾಮಿ, ಕೋಶಾಧ್ಯಕ್ಷ ಶಿವರಾಜ್ ಶಾಶಟ್ಟೆ, ಗದಿಗೆಪ್ಪ ಹಲಶೆಟ್ಟೆ, ಬಸವರಾಜ ಪಾಟೀಲ, ಸೋಮಶೇಖರಯ್ಯ ವಸ್ತ್ರದ, ಮಲ್ಲಿನಾಥ ಮಂಠಾಳೆ ಹಾರ್ದಿಕ ಅಭಿನಂದನೆಗಳು ಸಲ್ಲಿಸಿದ್ದಾರೆ.

# ಮುಧೋಳ(ಬಿ)ನಲ್ಲಿ ಜ. 25ಕ್ಕೆ ಉಚಿತ ಆರೋಗ್ಯ ತಪಾಸಣೆ ಶಿಬಿರ



• ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಮುಧೋಳ (ಬಿ) ಹಾಗೂ ತ್ರಿನೇತ್ರ ಆಸ್ಪತ್ರೆ ಔರಾದ (ಬಾ) ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ:25–01–2026 ಭಾನುವಾರ ಬೆಳಗ್ಗೆ 10:30 ರಿಂದ 04:00ರ ವರೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮುಧೋಳ(ಬಿ)ದಲ್ಲಿ ಜರುಗಲಿದೆ. ಶಿಬಿರದಲ್ಲಿಯ ವೈದ್ಯಕೀಯ ಸೌಲಭ್ಯಗಳು ಸಾಮಾನ್ಯ ಆರೋಗ್ಯ ತಪಾಸಣೆ, ಕಣ್ಣಿನ ಪರೀಕ್ಷೆ, ಉಚಿತ ಕಣ್ಣಿನ ಮೊರೆಯ ಶಸ್ತ್ರ ಚಿಕಿತ್ಸೆ (ಫ್ರೀ ಆಪರೇಶನ್), ಉಚಿತ ಬಿಪಿ, ಶುಗರ್ ತಪಾಸಣೆ ಮಾಡಲಾಗುವುದು. ಸದರಿ ಕಾರ್ಯಕ್ರಮವನ್ನು ಡಾ. ರಾಜಶೇಖರ ದಾಮಾ,ಡಾ. ಆದಿನಾಥ ಹಟಕರ,ಡಾ. ಆರತಿ ದಾಮಾ (ವಟಗೆ),ಡಾ. ಪ್ರೇಮ ಬಿರಾದಾರ ಅವರು ನೆರವೇರಿಸಿ ಕೂಡುವರು.ಮುಧೋಳ (ಬಿ) ಮತ್ತು ಸುತ್ತ ಮುತ್ತಲಿನ ಗ್ರಾಮದ ಜನರು ಆರೋಗ್ಯ ತಪಾಸಣೆ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಗುರುನಾಥ ನಾಗನಾಥ ವಟಗೆ, ಅಧ್ಯಕ್ಷರು ಪಿ.ಕೆ.ಪಿ.ಎಸ್ ಮುಧೋಳ (ಬಿ) ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ರಾಷ್ಟ್ರೀಯ ಮತದಾರರ ದಿನಾಚರಣೆ




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಯಾದಗಿರಿ ನಗರದ ಲಿಂಗೇರಿ ಕೋನಪ್ಪ ಶಿಕ್ಷಣ ಸಂಸ್ಥೆಯ ಬಾಲಕಿಯರ ಪದವಿಪೂರ್ವ ಮಹಾವಿದ್ಯಾಲಯ ಹಾಗೂ ಮಹಿಳಾ ಮಹಾವಿದ್ಯಾಲಯಗಳ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಸಂಯುಕ್ತಾ ಆಶ್ರಯದಲ್ಲಿ ಮತ್ತು ಮತದಾರರ ಸಾಕ್ಷರತಾ ಕ್ಲಬ್ ವತಿಯಿಂದಆಯೋಜಿಸಲಾದರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಕಾಲೇಜಿನ ಪ್ರಾಚಾರ್ಯ ಜಿಎಂ ವಿಶ್ವಕರ್ಮ ರವರು ಪ್ರತಿಜ್ಞಾವಿಧಿಯನ್ನು ಬೋಧಿಸುವುದರೊಂದಿಗೆಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ನಂತರ ಹೊಸದಾಗಿ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಿಕೊಳ್ಳಲು 18 ವರ್ಷದ ಎಲ್ಲಾ ಯುವಕರು ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವಂತೆ ಮಾಹಿತಿಯನ್ನು ನೀಡಿದರು. ಅಲ್ಲವೇ ಅರ್ಜಿ ಸಂಖ್ಯೆ 6 ಅನ್ನು ತುಂಬಿ ಹೊಸದಾಗಿ ಅರ್ಜಿ ಸಲ್ಲಿಸಲು ಬೇಕಾದ ದಾಖಲಾತಿಗಳು ಹಾಗೂ ಆನ್ಲೈನ್ ಮುಖಾಂತರ ವೋಟರ್ ಹೆಲ್ಪ್ ಲೈನ್ ಆಪನ್ನು ಬಳಸಿ ಅರ್ಜಿಯನ್ನು ತುಂಬುವಂತೆ ಮಾಹಿತಿಯನ್ನು ನೀಡಿದರು ಜೊತೆಗೆ ಭಾರತದ ಪ್ರಜೆಗಳಾದ ನಾವು ಪ್ರತಿಯೊಬ್ಬರೂ ಕಡ್ಡಾಯವಾಗಿ ಮತದಾನದಲ್ಲಿ ಪಾಲ್ಗೊಳ್ಳಬೇಕು ಮತ್ತು ಮತದಾನ ನಮ್ಮ ಹಕ್ಕು ಕಡ್ಡಾಯವಾಗಿ ಮತ ಚಲಾಯಿಸಬೇಕು ಎನ್ನುವ ಕುರಿತು ಯುವತಿಯರಿಗೆ ಕಿವಿ ಮಾತನ್ನು ಹೇಳಿದ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಏಳಿಗೆಗಾಗಿ ಪ್ರಜೆಗಳೇ ಉತ್ತಮವಾದ ಸರಕಾರವನ್ನು ಆಯ್ಕೆ ಮಾಡಿಕೊಳ್ಳಲು ಮತದಾನ ಪ್ರಮುಖವಾಗಿರುತ್ತದೆ ಭಾರತದ ನಾಗರಿಕರಾದ ನಾವು ಯಾವುದೇ ಆಮಿಷಗಳಿಗೆ ಒಳಗಾಗದೆ ಜಾತಿ ಧರ್ಮ ಮತ ಪಂಥ ಇವುಗಳನ್ನು ಲೆಕ್ಕಿಸದೆ ಮತದಾನವನ್ನು ಮಾಡುವಂತೆ ಪ್ರತಿಯೊಬ್ಬರೂ ಜಾಗೃತಿಯನ್ನು ಹೊಂದಬೇಕು ಹಾಗೆ ನಮ್ಮ ಅಮೂಲ್ಯವಾದ ಮತವನ್ನು ಯಾವುದೇ ವಸ್ತುಗಳಿಗೆ ಮಾರಿಕೊಳ್ಳಬಾರದು ಎಂದು ಯುವ ಮತದಾರರ ದಿನಾಚರಣೆಯ ಕುರಿತು ಯುವಕರಿಗೆ ಸಲಹೆಗಳನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಪದವಿ ಪೂರ್ವ ವಿಭಾಗದ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಅಧಿಕಾರಿ ಬಸವರಾಜ ಜುಗೇರಿ, ಸತೀಶ್ ಹವಾಲ್ದಾರ್, ಕ್ರೀಡಾ ನಿರ್ದೇಶಕ ಬಸವಲಿಂಗಪ್ಪ, ಉಪನ್ಯಾಸಕಿ ತನುಜಾ ಪಾಟೀಲ್, ಸವಿತಾ, ರಮೇಶ್ ರಾಮ ಕುಲಕರ್ಣಿ, ಅಕ್ಷತಾ ಮುಂತಾದವರು ಇದ್ದರು.

## ಅಭಿವೃದ್ಧಿಯ ಹರಿಕಾರ ಲಿಂ ಡಾ. ಭೀಮಣ್ಣ ಖಂಡ್ರೆ

# ಬಸವರಾಜ ಜಾಬಶೆಟ್ಟಿ

• ಮಲ್ಲಮ್ಮ ನುಡಿ ವಾರ್ತೆ, ಬೀದರ :

ಜಿಲ್ಲೆಮಾತ್ರವಲ್ಲಸಮಗ್ರಹೈದ್ರಾಬಾದ ಕರ್ನಾಟಕ ಏಳಿಗೆಯಾಗಬೇಕೆಂಬ ಪ್ರಬಲಚ್ಛಾಶಕ್ತಿ ಹೊಂದಿದ ಲಿಂ ಡಾ. ಭೀಮಣ್ಣ ಖಂಡ್ರೆ ಅವರು ನಿಜವಾದ ಅಭಿವೃದ್ಧಿಯ ಹರಿಕಾರರು ಎಂದು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಬಸವರಾಜ ಜಾಬಶೆಟ್ಟಿ ನುಡಿದರು. ಅವರು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಮತ್ತು ನ್ಯಾಸದ ಆಯೋಜಿಸಿದ ಲಿಂ. ಡಾ. ಭೀಮಣ್ಣ ಖಂಡ್ರೆ ಅವರ ನುಡಿ ನಮನ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡುತ್ತ ಅವರು ನಡೆಸಿದ ಬಿಜಾಂದೋಲನ, ಆರಂಭಿಸಿದ ಬಿಎಸ್‌ಎಸ್‌ಕೆ ರೈತರ ಕಾಳಜಿ ಎತ್ತಿ ತೋರಿಸುತ್ತದೆ. ಹುಟ್ಟು ಹೋರಾಟಗಾರರಾಗಿದ್ದ ಖಂಡ್ರೆಯವರು ಸ್ವಾತಂತ್ರ್ಯ ಚಳವಳಿ, ಕರ್ನಾಟಕ ಏಕೀಕರಣ ಹಾಗೂ ಹೈದ್ರಾಬಾದ ಕರ್ನಾಟಕ ವಿಮೋಚನೆಯಲ್ಲಿ ಸಕ್ರಿಯ ಹೋರಾಟಗಾರರಾಗಿದ್ದರು. ಸ್ವ ಸಾಮರ್ಥ್ಯದಿಂದ ಮೇಲೆಬಂದ ಅವರ ಜೀವನ ನಮಗೆಲ್ಲ ಮಾದರಿ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕರಾಶಿ ನ್ಯಾಸದ ಅಧ್ಯಕ್ಷರಾದ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರು ಮಾತನಾಡುತ್ತ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗೂ ರಾಜಕಾರಿಣಿಗಳಿಗೂ ಅವಿನಾಭಾವ ಸಂಬಂಧವಿದೆ, ಲಿಂ ಡಾ. ಭೀಮಣ್ಣ ಖಂಡ್ರೆ ಆರ್ ವಿಬಿಡಪ, ರತ್ನಾ ಕುಶನೂರ, ಮೊದಲಾದವರು ಈ ಸಂಸ್ಥೆಯ ಆಜೀ ಸದಸ್ಯರಾಗಿದ್ದು ನಮಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ನುಡಿದರು.

ಕರಾಶಿ ಸಂಸ್ಥೆಯ ಉಪಾಧ್ಯಕ್ಷರಾದ ಬಿ.ಜಿ. ಶೆಟಕಾರ ಅವರು ಮಾತನಾಡುತ್ತ ಲಿಂ ಡಾ. ಭೀಮಣ್ಣ ಖಂಡ್ರೆ ಅವರು ಪಕ್ಷಾತೀತವಾಗಿ ಜನಮನ ಗೆದ್ದವರಾಗಿದ್ದರು. ರಾಜಕಾರಣದಲ್ಲಿದ್ದರೂ ಸಮಾಜ, ಸಮುದಾಯದ ಪ್ರಶ್ನೆ ಬಂದಾಗ ಯುಆವತ್ತೂ ರಾಜಿ ಮಾಡಿಕೊಂಡವರಲ್ಲ ಹಾಗಾಗಿ ಅವರ ಹೋರಾಟ ಯಾವಗಲೂ ಸತ್ಯದಪರ ಸಾತ್ವಿಕ ನೆಲೆಯಿಂದ ಕೂಡಿತ್ತೆಂದು ಅಭಿಪ್ರಾಯ ಪಟ್ಟರು.

ಕ.ರಾ.ಶಿ. ಸಂಸ್ಥೆಯ ಕಾರ್ಯದರ್ಶಿಗಳಾದ ಸತೀಶ ಪಾಟೀಲ ಅವರು ಮಾತನಾಡುತ್ತ ಭೀಮಣ್ಣ ಖಂಡ್ರೆಯವರು ದೂರದೃಷ್ಟಿಯುಳ್ಳ ಮಹಾಮುತ್ಸದ್ದಿಯಾಗಿದ್ದರು. ಅವರ ಜೀವನ ಸಾಧನೆಗಳು ನಮಗೆಲ್ಲ ಸದಾ ಪ್ರೇರಣಾದಾಯಕವಾಗಿವೆ ಎಂದು ನುಡಿದರು.

ಆಡಳಿತನಿರ್ದೇಶಕರಾದಮಲ್ಲಿಕಾರ್ಜುನ ಹತ್ತಿ, ವಿಜಯಕುಮಾರ ಬಿರಾದಾರ ಗೂನಳ್ಳಿ, ಬುಯ್ಯ ವೀರಭದ್ರಪ್ಪ, ರವಿ ಹಾಲಹಳ್ಳಿ, ಡಾ. ಧೂಳಪ್ಪ ಪಾಟೀಲ, ಶಿವಶಂಕರ ಬಿ. ಶೆಟಕಾರ, ವಿಕಾಸ ಗೋಯಲ್ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕರ್ನಾಟಕ ಪಪೂ ಕಾಲೇಜಿನ ಪ್ರಾಚಾರ್ಯರಾದ ಬಸವರಾಜ ಬಲ್ಲೂರ ಪ್ರಾಸ್ತಾವಿಕ ನುಡಿ ನುಡಿದರು. ಕರಾಶಿ ಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳ ಪ್ರಾಚಾರ್ಯರು, ಬೋಧಕ–ಬೋಧಕೇತರ ಸಿಬ್ಬಂದಿ ಮೊದಲಾದವರು ಭಾಗವಹಿಸಿದ್ದರು.

## ಜಿಲ್ಲಾ ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು 2026ರ ಜನವರಿ 26ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಿಗ್ಗೆ 9ಗಂಟೆಗೆ ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ವತಿಯಿಂದ ಏರ್ಪಡಿಸಲಾದ ಗಣರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10.30ಕ್ಕೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರಾಯಚೂರು ಉತ್ಸವ ಕುರಿತು ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 11ಗಂಟೆಗೆ ರಾಯಚೂರಿನಿಂದ ರಸ್ತೆ ಮೂಲಕ ದೇವದುರ್ಗ ತಾಲ್ಲೂಕಿನ ಗಬ್ಬೂರಿಗೆ ಪ್ರಯಾಣ ಬೆಳಸಿ, ಶ್ರೀ ಬೂದಿಬಸವಶ್ವರ ಮಹಾಸಂಸ್ಥಾನಮಠ ಗಬ್ಬೂರು ಇವರ ವತಿಯಿಂದ ಏರ್ಪಡಿಸಿರುವ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3.30ಕ್ಕೆ ಗಬೂರಿನಿಂದ ರಸ್ತೆ ಮೂಲಕ ಹೈದ್ರಾಬಾದಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿವಿಧ ಅಂಗಡಿಗಳ ಮೇಲೆ ದಾಳಿ ಏಕಬಳಿಕೆ ಪ್ಲಾಸ್ಟಿಕ್ ವಶ



• **ಮಲ್ಲಮ್ಮ ನುಡಿ ವಾರ್ತೆ ಹುಣಸಗಿ:**

ಪಟ್ಟಣ ಪಂಚಾಯತ ಹುಣಸಗಿ ವತಿಯಿಂದ ಹುಣಸಗಿ ಪಟ್ಟಣದ ವಿವಿಧ ಅಂಗಡಿಗಳ ಮೇಲೆ ಪ ಪಂ ಮುಖ್ಯಾದಿಕಾರಿ ಅರುಣ ಚವ್ಹಾಣ ನೇತೃತ್ವದಲ್ಲಿ ಆರೋಗ್ಯ ನಿರೀಕ್ಷಕರು ಹಾಗೂ ಸಮುದಾಯ ಸಂಚಾಲಕರು ಅನಿರೀಕ್ಷಿತ ದಾಳಿ ಮಾಡಿ ಸುಮಾರು 565 ಕೆಜಿ ಏಕಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಂಡು 500/– ರೂಪಾಯಿಗಳ ದಂಡ ವಿಧಿಸಲಾಯಿತು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಸಿಬ್ಬಂದಿಗಳು ಇದ್ದರು.

## ವಿಷಯವಾರು ವಸ್ತು ಪ್ರದರ್ಶನ ಮಕ್ಕಳ ಜ್ಞಾನ ಹೆಚ್ಚಿಸಲು ಸೂಕ್ತ ವೇದಿಕೆ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ನಗರದ ವಿದ್ಯಾಸರಸ್ವತಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸರಸ್ವತಿ ಪೂಜೆ ಮತ್ತು ವಿಷಯವಾರು ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸರಸ್ವತಿ ದೇವಿಯ ಭಾವಚಿತ್ರಕ್ಕೆ ವಿಶೇಷ ಪೂಜೆಸಲ್ಲಿಸಿ ನೈವೇದ್ಯ ಅರ್ಪಿಸುವ ಮೂಲಕ ಸಾಮೂಹಿಕ ಪ್ರಾರ್ಥನೆ ಮಾಡಲಾಯಿತು. ನಂತರ ವಿಷಯವಾರು ವಸ್ತು ಪ್ರದರ್ಶನ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಪ್ರತಿಕಾ ಮತ್ತು ಪ್ರಶಾಂತ ಡಂಗೂರಮಠ ದಂಪತಿಗಳು ಮಕ್ಕಳು ತಮ್ಮ ಕೌಶಲ್ಯವನ್ನು ಹೊರಹಾಕಲು ಮತ್ತು ತಮ್ಮ ಜ್ಞಾನ ಹೆಚ್ಚಿಸಿಕೊಳ್ಳಲು ಸೂಕ್ತ ವೇದಿಕೆಯಾಗಿದೆ. ವಸ್ತು ವಿಷಯ ಪ್ರದರ್ಶನದಿಂದ ಮಕ್ಕಳಿಗೆ ಯೋಜನೆ, ಯೋಚನೆ ಮತ್ತು ಮಾತನಾಡುವ ಕಲೆ ಒಡಮೂಡುತ್ತದೆ ಎಂದು ತಿಳಿಸಿದರು.

ನಂತರ ಮಕ್ಕಳು ತಯಾರಿಸಿ ಪ್ರದರ್ಶನಕ್ಕಿಟ್ಟ ವಸ್ತುಗಳನ್ನು ಅತಿಥಿಗಳು, ಪಾಲಕರು, ಶಿಕ್ಷಣ ಪ್ರೇಮಿಗಳು ವೀಕ್ಷಿಸಿದರು. ಮಕ್ಕಳು ಪ್ರದರ್ಶನದ ವಸ್ತುವಿನ ವಿವರಣೆಯನ್ನು ತಿಳಿಸಿದರು. ಭಾಗವಹಿಸಿದ ಎಲ್ಲಾ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸಲಾಯಿತು. ಇದೇ ವೇಳೆ ಪಾಲಕ ಪ್ರತಿನಿಧಿಗಳಾದ ದೀಪಾ, ನಾಗರಾಜ, ಶಾಲೆಯ ಆಡಳಿತ ಮಂಡಳಿ, ಚಿದಾನಂದಯ್ಯ ಬನ್ನಿಮಠ ಮತ್ತು ಮುಖ್ಯೋಪಾಧ್ಯಾಯರು, ಶಿಕ್ಷಕರು, ಮಕ್ಕಳು ಉಪಸ್ಥಿತಿ ಇದ್ದರು.

## ಅಭಿವೃದ್ಧಿ ನಿರ್ಣಯಿಸುವ ಅಂಶ ಒಳಗೊಂಡಿರಲಿ: ಜಿಲ್ಲಾಧಿಕಾರಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾ ಮಾನವ ಅಭಿವೃದ್ಧಿ–2025 ಮತ್ತು ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ–2031 ರವರೆಗೆ ವರದಿ ತಯಾರಿಕೆ ಕುರಿತಂತೆ ಅಧಿಕಾರಿಗಳು ನೀಡುವ ವರದಿಯಲ್ಲಿನ ಅಂಶಗಳು ಜಿಲ್ಲೆಯ ಅಭಿವೃದ್ಧಿ ನಿರ್ಣಯಿಸುವ ಪೂರಕ ಅಂಶಗಳಾಗಿರಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.




ನಗರದ ಜಿಲ್ಲಾ ಪಂಚಾಯತ್ ನ ಹೊಸ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಮಾನವ ಅಭಿವೃದ್ಧಿ–2025 ಮತ್ತು ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ–2031 ರವರೆಗೆ ವರದಿ ತಯಾರಿಕೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ವರದಿಗಳ ತಯಾರಿಕೆಗೆ ದತ್ತಾಂಶಗಳು, ಸೂಚಕಗಳು ಹಾಗೂ ಸೂಚ್ಯಾಂಕಗಳ ಕುರಿತು ಶುಕ್ರವಾರ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಒಂದು ದೇಶದ ಅಭಿವೃದ್ಧಿ ಎಂದರೆ ಮಾನವನ ಅಭಿವೃದ್ಧಿ ಅಳತೆಯ ಮೂಲಕ ಹೇಳಬಹುದಾಗಿದ್ದು, ಪ್ರತಿಯೊಂದು ರಾಷ್ಟ್ರಗಳು ಇಂತಹ ವರದಿಗಳನ್ನು ತಯಾರಿಸುತ್ತವೆ. ವಿಶ್ವದಲ್ಲಿಯೇ ಆರ್ಥಿಕತೆಯಲ್ಲಿ ಭಾರತ ದೇಶ 5ನೇ ಸ್ಥಾನದಲ್ಲಿದ್ದು, ಅಭಿವೃದ್ಧಿಯಲ್ಲಿದೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ ದೇಶ 130 ನೇ ಸ್ಥಾನದಲ್ಲಿದೆ. ಇದಕ್ಕೆ ಕಾರಣ ಮಾನವ ಸಂಪನ್ಮೂಲ ಅಭಿವೃದ್ಧಿ ಹೊಂದುತ್ತಿಲ್ಲ ಎಂದು ವಿಷಾಧ ವ್ಯಕ್ತಪಡಿಸಿದರು.

ಜಿಲ್ಲಾ ಮಾನವ ಅಭಿವೃದ್ಧಿ ವರದಿಯು ಜಿಲ್ಲೆಯ ಜನರ ಕಲ್ಯಾಣ, ಶಿಕ್ಷಣ, ಆರೋಗ್ಯ ಮತ್ತು ಆದಾಯದಂತಹ ಅಂಶಗಳನ್ನು ಅಳೆಯುವ ಬಹಳ ಮುಖ್ಯವಾದ ವರದಿಯಾಗಿದ್ದು, ಎಲ್ಲಾ ಇಲಾಖೆ ಅಧಿಕಾರಿಗಳು ವರದಿ ತಯಾರಿಕೆ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಬೇಕು. ನಿಖರವಾದ ಅಂಕಿ– ಅಂಶಗಳನ್ನು ನೀಡುವಿದರಿಂದ ಬಳ್ಳಾರಿಯು ಜಿಲ್ಲಾ ಮಾನವ ಅಭಿವೃದ್ಧಿಯಲ್ಲಿ ಮುಂದುವರಿಯಲಿದೆ ಎಂದು ಹೇಳಿದರು.

2014–15 ರ ಸುಚ್ಯಾಂಕದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ ಜಿಲ್ಲೆಯು 0.513 ಇತ್ತು. 2019–2020 ರಲ್ಲಿ 0.730 ಕಾಣಬಹುದಾಗಿದೆ. ಹಾಗಾಗಿ ಅಭಿವೃದ್ಧಿಗೆ ಪೂರಕವಾಗಿ ವರದಿಗಳನ್ನು ಸಿದ್ಧಪಡಿಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಳೆಯ ದತ್ತಾಂಶಗಳನ್ನು ನೀಡದೇ, ಇತ್ತೀಚಿನ ದತ್ತಾಂಶಗಳನ್ನು ಮಾತ್ರ ನೀಡಬೇಕು. ವರದಿ ಉತ್ತಮವಾಗಿ ರೂಪುಗೊಳ್ಳಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ನಿಖರ ಮಾಹಿತಿ ನೀಡುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಶಿಕ್ಷಣ, ಆರೋಗ್ಯ ಪೋಷಣಾ ಸ್ಥಿತಿ, ಜೀವನೋಪಾಯ, ಮೂಲಸೌಕರ್ಯ, ಸಾಮಾಜಿಕ ಒಳಗೊಳ್ಳುವಿಕೆ ಹಾಗೂ ಪರಿಸರದ ಸುಸ್ಥಿರತೆ ಸೇರಿದಂತೆ ವಿವಿಧ ಮಾನವ ಅಭಿವೃದ್ಧಿ ಸೂಚ್ಯಂಕಗಳ ಆಧಾರದ ಮೇಲೆ ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವುದು ಈ ವರದಿಗಳ ಪ್ರಮುಖ ಗುರಿಯಾಗಿರುತ್ತದೆ. ಅಧಿಕಾರಿಗಳು ದತ್ತಾಂಶ ಸಂಗ್ರಹಣೆ, ವಿಶ್ಲೇಷಣೆ, ಇಲಾಖಾವಾರು ಸಹಕಾರ ಮತ್ತು ಕಾಲಮಿತಿಯೊಳಗೆ ಮಾಹಿತಿಯನ್ನು ಒದಗಿಸಬೇಕು. ಜಿಲ್ಲೆಯ ಸಮಗ್ರ ಹಾಗೂ ಸಮತೋಲನೆಯುತ ಅಭಿವೃದ್ಧಿಗಾಗಿ ಇಲಾಖೆಗಳ ನಡುವೆ ಪರಸ್ಪರ ಸಮನ್ವಯ ಅಗತ್ಯ ಎಂದು ಅವರು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಜಂಟಿ ನಿರ್ದೇಶಕ(ನಿವೃತ್ತ) ಶ್ರೀನಿವಾಸ್ ರಾವ್ ಅವರು ಮಾತನಾಡಿ, ಜಿಲ್ಲಾ ಮಾನವ ಅಭಿವೃದ್ಧಿ ವರದಿಗೆ ಅತ್ಯಂತ ಮಹತ್ವವಾದ ಮೌಲ್ಯವಿದೆ. ಇದು ದೀರ್ಘ, ಆರೋಗ್ಯಕರ ಮತ್ತು ಸೃಜನಾತ್ಮಕ ಜೀವನ ನಡೆಸಲು, ಶಿಕ್ಷಣ ಪಡೆಯಲು ಮತ್ತು ಯೋಗ್ಯ ಜೀವನ ಮಟ್ಟಕ್ಕೆ ಬೇಕಾದ ಸಂಪನ್ಮೂಲಗಳನ್ನು ಹೊಂದಲು ಅವಕಾಶ ನೀಡುತ್ತದೆ. ಹಾಗಾಗಿ ಅಧಿಕಾರಿಗಳು ತಾವು ತಯಾರಿಸುವ ವರದಿಯಿಂದ ಜಿಲ್ಲೆಯ ಅಭಿವೃದ್ಧಿ ಅವಲಂಬಿತವಾಗಿರುತ್ತದೆ. ವಸ್ತುಸ್ಥಿತಿ ವರದಿ ತಯಾರಿಕೆಗೆ ಅಧಿಕಾರಿಗಳ ಸಹಕಾರ ಅಗತ್ಯವಾಗಿದೆ ಎಂದು ಹೇಳಿದರು.

ಇನ್ನೋರ್ವ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ನಿರಂಜನ್ ಅವರು ಮಾತನಾಡಿ, ಮಾನವ ಅಭಿವೃದ್ಧಿ ಸೂಚ್ಯಂಕ ತಯಾರಿಕೆಗೆ ಜನರ ಜೀವನ ಮಟ್ಟ, ಶಿಕ್ಷಣ, ಆರೋಗ್ಯ, ಆದಾಯ ಸೇರಿದಂತೆ ಇತರೆ ಅಂಕಿ ಅಂಶಗಳನ್ನು ಪರಿಗಣಿಸಲಾಗುತ್ತದೆ. ನಿಖರವಾದ ಮಾಹಿತಿ ಮತ್ತು ಅಂಕಿ ಅಂಶಗಳನ್ನು ನೀಡಿದರೆ ಉತ್ತಮ ವರದಿಯಾಗುತ್ತದೆ ಎಂದು ಅವರು ಹೇಳಿದರು.

ಇದೇ ವೇಳೆ ರಾಷ್ಟ್ರೀಯ ಮತದಾರರ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ ಶಿವಪೂರೆ, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಜಿಪಂ ಯೋಜನಾಧಿಕಾರಿ ಪ್ರಮೋದ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ವರ್ಧಂತ್ಯೋತ್ಸವ : ಸಾವಿರಾರು ಭಕ್ತರ ಆಗಮನ

• **ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ:**

ಇಲ್ಲಿಯ ಸಮೀಪದ ಹನೇಹಳ್ಳಿ–ಬಂಕಿಕೊಡ್ಲದ ಶ್ರೀ ಮುರ್ಕುಂಡಿ ದೇವರ 34 ನೇ ಪುನರ್ ಪ್ರತಿಷ್ಠಾ ವರ್ಧಂತ್ಯೋತ್ಸವ ಶುಕ್ರವಾರ ಸಂಭ್ರಮ–ಸಡಗರದಿಂದ ನಡೆಯಿತು. ಅಂಕೋಲಾ ಸೇರಿದಂತೆ ವಿವಿಧ ತಾಲೂಕುಗಳಿಂದ ಎರಡು ಸಾವಿರಕ್ಕೂ ಅಧಿಕ ಭಕ್ತರು ಆಗಮಿಸಿದ್ದರು.

ಶುಕ್ರವಾರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಗಣಹವನ, ಪಂಚಾಮೃತಾಭಿಷೇಕ, ಜಲಾಭಿಷೇಕ ನಡೆಯಲಿದೆ. 12.30 ರಿಂದ ಶ್ರೀ ದೇವರ ಮಹಾಪೂಜೆ, ಮಂಗಳಾರತಿ, ತೀರ್ಥಪ್ರಸಾದ ವಿತರಣೆ ನಡೆಯಿತು. ನಂತರ ನಡೆದ ಅನ್ನ ಸಂತರ್ಪಣೆ ನಡೆಯಿತು.

## ಕ್ಲಸ್ಟರ್ ಮಟ್ಟದ ಎಪ್ ಎಲ್ ಎನ್ ಕಲಿಕಾ ಹಬ್ಬ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ಕ್ಲಸ್ಟರ್ ಮಟ್ಟದ ಶಿಕ್ಷಕರ ತಂಡ ನಮ್ಮೆಲರ ಪ್ರೀತಿಯ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಸಲಹೆ ಸಹಕಾರ ಕೋರಿದ ಸಂಧರ್ಭ ಊರಿನ ಗ್ರಾಮಸ್ಥರು ಎಲ್ಲಾ ಸಾರ್ವಜನಿಕ ಬಂದುಗಳು ಕೂಡ ಸಹಕಾರ ನೀಡಿದರು ಎಂದು ಕೇಳಿ ಸಂತೋಷವಾಯಿತು. ಎಂದು ಕ್ಷೇತ್ರದ ಶಿಕ್ಷಣಾಧಿಕಾರಿ ಮಾದೇವಸ್ವಾಮಿ ತಿಳಿಸಿದ್ದಾರೆ

ತಾಲ್ಲೂಕು.ಮೈಸೂರು ಜಿಲ್ಲೆ ಕ್ಲಸ್ಟರ್ ಮಟ್ಟದ ಎಪ್ ಎಲ್ ಎನ್ ಕಲಿಕಾ ಹಬ್ಬ 2025–26 .ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಭಾರತವಾಡಿ ಗ್ರಾಮದ ಶಾಲೆಯಲ್ಲಿ ದ ದೊಡ್ಡ ಹೆಜ್ಜೂರು ಕ್ಲಸ್ಟರ್ ನ ಸರ್ಕಾರಿ ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಭಾರತವಾಡಿ ಶಾಲೆಯಲ್ಲಿ ಮಕ್ಕಳ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಸಾಮರ್ಥ್ಯದ ವಿವಿಧ ವಿಭಾಗಗಳಲ್ಲಿ ತಮ್ಮ ಪ್ರತಿಭಯನ್ನು ಪ್ರದರ್ಶಿಸಲು ಕ್ಲಸ್ಟರ್ ಮಟ್ಟದ ಎಫ್ ಎಲ್ ಎನ್ ಕಾಲಿಕ ಹಬ್ಬ ಹಮ್ಮಿಕೊಳ್ಳಲಾಯಿತು ಕಾರ್ಯಕ್ರಮವನ್ನು ನಂತರ ಮಾತನಾಡಿ ಈ ಸಂತೋಷದ ಹಬ್ಬದಲ್ಲಿ ನನ್ನನು ಮುಖ್ಯ ಅತಿಥಿಗಳಾಗಿ ಆಗಮಿಸಿ ವೇದಿಕೆಯನ್ನು ಅಲಂಕರಿಸಿ ಮಕ್ಕಳಿಕೆ ತಮ್ಮ ಪ್ರತಿಭೆಯನ್ನು ಹೋರತರಲು ಇಂತಹ ಕಾರ್ಯಕ್ರಮ ನಡೆಯುತ್ತ ಇದ್ದೂ ಮಕ್ಕಳು ಈ ಕಾರ್ಯಕ್ರಮದ ಉದ್ಧೇಶ ಮತ್ತು ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಎಂದರು

ಕಾಡಂಚಿನ ಪ್ರದೇಶದ ಸರ್ಕಾರಿ ಶಾಲೆಗಳಾದರೂ ಸಹ ಅತ್ಯುತ್ತಮವಾಗಿ ಕರ್ತವ್ಯವನ್ನು ನಿರ್ವಹಿಸುತ್ತಿರುವುದು ನನಗೆ ಸಂತಸ ತಂದಿದೆ ಎಂಬ ಮೆಚ್ಚುಗೆಯ ಮಾತುಗಳನ್ನು ತಿಳಿಸುತ್ತಾ , ಇಲಾಖೆಯಿಂದ ಬರುವ ಸವಲತ್ತುಗಳನ್ನು ಈ ಭಾಗದ ಶಾಲೆಗಳಿಗೆ ದೊರಕಿಸಿ ಕೊಡುವ ಭರವಸೆಯನ್ನು ತಿಳಿಸಿ ದರು

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ದಾರಾ ಮಹೇಶ್ ಶುಭಾಷ್ ಸದಸ್ಯರಾದ ಶಾತಾಜ್ ತಾಲೂಕು ಅಧ್ಯಕ್ಷ ದೊಡ್ಡ ಹೆಜ್ಜೂರು ನಾಗೇಶ್ ಹಾಗೂ ಶಿಕ್ಷಕರು ಗ್ರಾಮಸ್ಥರು ಹಾಜರಿದ್ದರು.

## ಉತ್ಸವ 2026ರ ವಿಶೇಷ ವೆಬ್‌ಸೈಟ್ ಲೋಕಾರ್ಪಣೆ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಫೆ.5 ರಿಂದ ಫೆ.7ರವರೆಗೆ ರಾಯಚೂರು ಜಿಲ್ಲೆಯಲ್ಲಿ ನಿಗದಿಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಪ್ರಚಾರಾರ್ಥ ಸಿದ್ಧಪಡಿಸಿದ ವಿಶೇಷ ವೆಬ್‌ತಾಣವನ್ನು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್.ಬೋಸರಾಜು ಅವರು ಜನವರಿ 21ರಂದು ಲೋಕಾರ್ಪಣೆ ಮಾಡಿದರು.

ಉತ್ಸವದ ಪ್ರಚಾರ ಸಮಿತಿಯು ಸಿದ್ಧಪಡಿಸಿರುವ ಈ ವೆಬ್‌ತಾಣದಲ್ಲಿ ಉತ್ಸವದ ಎಲ್ಲ ಕಾರ್ಯಕ್ರಮಗಳ ಸಂಕ್ಷಿಪ್ತ ಮಾಹಿತಿ, ಛಾಯಾಚಿತ್ರಗಳು, ಪೋಸ್ಟರ್, ವಿಶೇಷ ವಿಡಿಯೋಗಳು, ಪ್ರತಿ ದಿನ ನಡೆಯುವ ವಿವಿಧ ಚಟುವಟಿಕೆಗಳ ವಿವರ ಸೇರಿದಂತೆ ಉತ್ಸವ ನಾನಾ ಕಾರ್ಯಕ್ರಮಗಳ ಮಾಹಿತಿಗಾಗಿ ತಿತಿತಿ.ಡಿಚುಛಿಣಡಿಣಣಚಿತಚಿ.ಛಿಂಟ ಲಿಂಕ್ ಬಳಸಿ ವೆಬ್‌ತಾಣಕ್ಕೆ ಭೇಟಿ ನೀಡಬಹುದಾಗಿದೆ. ನಮ್ಮ ಜಿಲ್ಲೆ ಸೇರಿದಂತೆ ರಾಜ್ಯದ ಯಾವುದೇ ಕಡೆಗಳಲ್ಲಿನ ಜನತೆ ಮತ್ತು ವಿಶ್ವದ ಯಾವುದೇ ಭಾಗದಲ್ಲಿನ ಜನತೆ ಈ ವೆಬ್‌ತಾಣಕ್ಕೆ ಭೇಟಿ ನೀಡಿ ಉತ್ಸವದ ಮಾಹಿತಿ ಪಡೆಯಲು ಮತ್ತು ಉತ್ಸವದಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ಈ ವೆಬ್‌ಸೈಟ್ ರಚಿಸಲಾಗಿದೆ ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸಚಿವರಿಗೆ ಮಾಹಿತಿ ನೀಡಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಈಶ್ವರ್ ಕಾಂದೂ, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ತಾಲೂಕುಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ರೈತ ಸಂಘದ ಅಧ್ಯಕ್ಷರಾದ ಚಾಮರಸ ಪಾಟೀಲ, ರಾಜ್ಯ ನೀತಿ ಆಯೋಗದ ಸದಸ್ಯರಾದ ಡಾ.ರಝಾಕ್ ಉಸ್ತಾದ್, ಮಹಾನಗರ ಪಾಲಿಕೆಯ ಸಮಿತಿಯ ಕಾರ್ಯದರ್ಶಿ ಹಾಗೂ ಜಿಲ್ಲಾ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾವಂತಗೇರಿ, ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ, ವಾರ್ತಾ ಇಲಾಖೆಯ ಗವಿಸಿದ್ದಪ್ಪ ಹೊಸಮನಿ, ತಹಸಿಲ್ದಾರರಾದ ಸುರೇಶ ವರ್ಮಾ, ಅಮರೇಶ ಬಿರಾದಾರ ಸೇರಿದಂತೆ ಇನ್ನಿತರರು ಇದ್ದರು.

## ಪ್ರಸ್ತಾವನೆಗಳಿಗೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಆರೈಕೆ, ರಕ್ಷಣೆ, ಸಂರಕ್ಷಣೆ ಮಾಡುತ್ತಿರುವ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ನೋಂದಣಿ ಮಾಡಿಕೊಂಡ 03 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸುತ್ತಾ ಬಂದಿರುವ ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಜಿಲ್ಲಾ ಮಟ್ಟದ ಕೇಂದ್ರದಲ್ಲಿ 01 ಸಂಸ್ಥೆಗೆ ಹಾಗೂ ಕಂದಾಯ ಉಪವಿಭಾಗ ಮಟ್ಟದ ತಾಲ್ಲೂಕು ಕೇಂದ್ರಗಳಲ್ಲಿ 01 ಸಂಸ್ಥೆಗೆ ರಾಜ್ಯವಲಯದ ಅನುದಾನದಡಿ ಅನುದಾನ ನೀಡಲು ಉದ್ದೇಶಿಸಲಾಗಿದ್ದು, ಅರ್ಹ ಸ್ವಯಂ ಸೇವಾ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವಂತಹ ಸ್ವಯಂ ಸೇವಾ ಸಂಸ್ಥೆಗಳು ನಗರದ ಕಂಟೋನ್ ಮೆಂಟ್ ಪ್ರದೇಶದ ಶಾಂತಿಧಾಮ ಆವರಣದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಲ್ಲಿ ಅರ್ಜಿ ಪಡೆದು ಸಂಸ್ಥೆಯ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಫೆ.06 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.ಹೆಚ್ಚಿನ ಮಾಹಿತಿಗಾಗಿ ದೂ.08392–267886, ಮೊ.9972813152 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ.24: ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಯ 220/11ಕೆವಿ ಅಲ್ಲಿಪುರ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್–2ರ ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಜ.24 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತಯವಾಗಲಿದೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಗಳು:**

ಎಫ್–76 ವ್ಯಾಪ್ತಿಯ ಅರಣ್ಯ ಕ್ವಾಟರ್ಸ್, ಜಾಗೃತಿ ನಗರ, ರೇಷ್ಮೆ ಇಲಾಖೆ, ಟೀರ್ಸ್ ಕಾಲೋನಿ, ಈದ್ಗಾ ಮೈದಾನ, ರಾಮಾಂಜನೇಯ ನಗರ.

ಎಫ್–34 ವ್ಯಾಪ್ತಿಯ ಫಸ್ಟ್‌ಗೇಟ್, ಕೊರಚ ಸ್ಟ್ರೀಟ್, ಉರ್ದು ಟ್ರೈನಿಂಗ್ ಸ್ಕೂಲ್, ಕಡಪಗೆರೆ, ಟೈಲರ್ ಸ್ಟ್ರೀಟ್, ವಡ್ಡೆ ನಾಗಪ್ಪ ಕಾಲೋನಿ, ತಿಲಕ್ ನಗರ, ವಿನಾಯಕ ನಗರ, ಐಶ್ವರ್ಯ ಕಾಲೋನಿ, ಐಟಿಐ ಕಾಲೇಜ್, ರೇಡಿಯೋ ಪಾರ್ಕ್, ಕೌಲ್ ಬಜಾರ್ ಮೇನ್ ರೋಡ್.ಹಾಗಾಗಿ ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿವಕುಮಾರ ಸ್ವಾಮೀಜಿಯವರ 7ನೇ ವರ್ಷದ ಪುಣ್ಯ ಸ್ಮರಣೆ



• **ಮಲ್ಲಮ್ಮ ನುಡಿ ವಾರ್ತೆ ಹರಪನಹಳ್ಳಿ:**

ತ್ರಿವಿಧ ದಾಸೋಹಿ ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಯವರ ಏಳನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಬುದುವಾರ ಶ್ರದ್ಧಾ ಭಕ್ತಿಗಳಿಂದ ಶ್ರೀ ಸಿದ್ದಗಂಗಾ ಮಠದ ಗೆಳೆಯರ ಬಳಗದ ವತಿಯಿಂದ ಆಯೋಜಿಸಲಾಗಿತ್ತು.

ನಗರದ ಡಾ. ಬಿಆರ್ ಅಂಬೇಡ್ಕರ್ ವೃತ್ತದಲ್ಲಿ ನಾಡಿನಾದ್ಯಂತ ಪ್ರತಿ ವರ್ಷದಂತೆ ತ್ರಿವಿಧ ದಾಸೋಹದ ಸ್ಮರಣಾರ್ಥ ಅಂಗವಾಗಿ ಅನ್ನದಾನ ವಿಶೇಷ ಪೂಜೆ ಕಾರ್ಯಕ್ರಮವನ್ನು ನೆರವೇರಿಸಿದರು

ಈ ನಾಡು ಕಂಡ ಶ್ರೇಷ್ಠ ಸಾಧಕರು ಅನ್ನ ಅಕ್ಷರ ವಸತಿಗಳನ್ನು ಕೊಟ್ಟು ಲಕ್ಷಾಂತರ ಬಡ ಮಕ್ಕಳ ಬಾಳನ್ನು ಬೆಳಗಿದ ತ್ರಿವಿಧದ ದಾಸೋಹಿ ಪದ್ಮಭೂಷಣ ಶ್ರೀ ಶ್ರೀ ಡಾ ಶಿವಕುಮಾರ ಸ್ವಾಮಿಗಳ ಏಳನೇ ಪುಣ್ಯತಿಥಿ ಭಕ್ತಿ ಪೂರ್ವಕ ಪ್ರಣಾಮಗಳನ್ನು ಹಾಗೂ ಸಮಾಜದ ಏಳಿಗೆಗಾಗಿ ತಮ್ಮ ಜೀವನವನ್ನೇ ಸವೆಸಿ ಅವರ ಆದರ್ಶಗಳು ನಾಡಿನ ಹಿರಿಮೆಗಳನ್ನು ಹೆಚ್ಚಿಸಿದ್ದಾರೆ.ಲಿಂಗೈಕ ಡಾ. ಶಿವಕುಮಾರ್ ಸ್ವಾಮೀಜಿಯವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.

ತುಮಕೂರು ಸಿದ್ದಗಂಗಾ ಮಠದೀಶರಾಗಿದ್ದ ದಿವಂಗತ ಡಾ ಶಿವಕುಮಾರ ಸ್ವಾಮೀಜಿಯವರ ಏಳನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ಶ್ರೀ ಶಿವಕುಮಾರ ಸಿದ್ದಗಂಗಾ ಗೆಳೆಯರ ಬಳಗ ಹರಪನಹಳ್ಳಿ ಇವರ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.ನೂರಾರು ವರ್ಷಗಳ ಕಾಲ ಸಾರ್ಥಕ ಬದುಕು ಪೂರ್ಣಗೊಳಿಸಿ ಶಿವೈಕ್ಯರಾದ ಶ್ರೀಗಳು ಲೋಕಸೇವೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡ ಪರಿ ಅಸಂಖ್ಯ ಭಕ್ತರನ್ನು ಸಮರ್ಪಿಸಿಕೊಂಡಿದೆ. ಸ್ವಾಮೀಜಿಯವರು ಕೇವಲ ಒಂದು ಪೀಠಾಧಿಪತಿಗಳಾಗಿರಲಿಲ್ಲ ಅವರು ಸಮಾಜದ ಅಂತಕರಣವಾಗಿದ್ದರೂ ನಡೆದಾಡುವ ದೇವರೆಂಬ ನಾಮ ಧೇಯ ಅವರಿಗೆ ಜನರ ನೀಡಿದ್ದು ಭಕ್ತಿಯಿಂದ ಮಾತ್ರವಲ್ಲ ಅವರು ಬದುಕಿದ ರೀತಿಯಿಂದ ಶಿಕ್ಷಣವೇ ಸಾಮಾಜಿಕ ನ್ಯಾಯದ ಸಾಮಾಜಿಕ ನ್ಯಾಯದ ಬಲವಾದ ಅಸ್ತ್ರ ಎಂಬ ನಂಬಿಕೆಯಿಂದ ಜೀವನಪೂರ್ತಿ ಅನುಸರಿಸಿದವರು. ಶ್ರೀ ಸಿದ್ದಗಂಗಾ ಮಠ ಗೆಳೆಯರ ಬಳಗ ವತಿಯಿಂದ ಏರ್ಪಡಿಸಲಾಗಿದೆ

ಈ ವೇಳೆ ಸುಭಾಷ್.ಅಧ್ಯಕ್ಷರು ಮಾಲ್ತೇಶ್ ಗೌಡ. ಕೆ ಜಿಶಿವಕುಮಾರ್. ಸುಖಿಭವನ ವೀರೇಶ್. ಕೆ ಬಸವನಗೌಡ. ವೀರೇಶ್.ರಕ್ಷಿತ. ಸ್ಟುಡಿಯೋ ಮನೋಜ್ ಕುಮಾರ್.ಎಂ ಧನಂಜಯ್ ಕುಮಾರ್. ಎಂ ಮಲ್ಲಿಕಾರ್ಜುನ್ ಗೌಡ.ಕೆ ಜಿ ಜಗದೀಶ್ ಕುಮಾರ್. ಕೆ ಜಿ ಗೌಡ. ಎಂ. ಅಭಿಷೇಕ್ ಕುಮಾರ್. ರಾಘವೇಂದ್ರ. ವೀರೇಶ್ ಆಚರ್.ಸನ್ನಿಧಿ. ಜಿಕೆ ಸರಪಭೂಷಣ್. ಜಿಕೆ ಗುರುರಾಜ್. ಪ್ರಜ್ವೀತ್ ಕುಮಾರ್. ವೀರೇಶ್ ಬಡಿಗೇರ್. ಅನಸ್. ಹೋಂ ಗಾರ್ಡ್ ವಾಸಿಮ್ ಅಕ್ರಂ. ಸಿದ್ದನಗೌಡ. ಕೆಜಿ ಕೆ ಪುನೀತ್. ಅನೇಕರು ಭಾಗವಹಿಸಿದ್ದರು.

## ಜ, 25ರಂದು ರಾಷ್ಟ್ರೀಯ ಮತದಾರರ ದಿನಾಚರಣೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಭಾರತ ಚುನಾವಣಾ ಆಯೋಗ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ರಾಯಚೂರು ಇವರಿಂದ ಜನವರಿ 25ರ ಬೆಳಿಗ್ಗೆ 10.30ಕ್ಕೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಾರುತಿ ಎಸ್. ಬಾಗಡೆ ಅವರು ಉದ್ಘಾಟನೆ ನೆರವೇರಿಸುವರು.

ಜಿಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಅಧ್ಯಕ್ಷತೆ ವಹಿಸುವರು.ಮುಖ್ಯ ಅತಿಥಿಗಳಾಗಿ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್. ಎ. ಸಾತ್ವಿಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ, ರಾಯಚೂರು ತಹಶೀಲ್ದಾರ್ ಸುರೇಶ್ ವರ್ಮ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಆರೋಗ್ಯ ಹದಗೆಟ್ಟರೆ ಗಳಿಸೋಕೆ ಆಗೋಲ್ಲ: ಬಿ.ಶ್ರೀರಾಮುಲು



ಜಿಕೆ ಫೌಂಡೇಶನ್ ಹಾಗೂ ಬಳ್ಳಾರಿ ಜಿಲ್ಲಾ ಫಿಟ್ನೆಸ್ ಅಸೋಸಿಯೇಶನ್ ಆಶ್ರಯದಲ್ಲಿ, ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ಪುರುಷ ಹಾಗೂ ಮಹಿಳೆಯರ ದೇಹದಾಡ್ಯ ಸ್ಪರ್ಧೆ ಹಾಗೂ ಪವರ್ ಲಿಫ್ಟಿಂಗ್ ಸ್ಪರ್ಧೆಗಳಿಗೆ ಚಾಲನೆ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಹಣ, ಎಸ್ಟಿಗಳಿಸಬಹುದು. ಆದರೆ, ಆರೋಗ್ಯ ಹದಗೆಟ್ಟರೆ ಗಳಿಸೋಕೆ ಆಗೋಲ್ಲ, ಈ ಹಿನ್ನೆಲೆಯಲ್ಲಿ ಯುವಕ, ಯುವತಿಯರು ಆರೋಗ್ಯದ ಕಡೆ ಹೆಚ್ಚುಗಮನಹರಿಸಿ, ಸದೃಢರಾಗಬೇಕು ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಅವರು ಹೇಳಿದರು. ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ಜಿಕೆ ಫೌಂಡೇಶನ್ ಹಾಗೂ ಬಳ್ಳಾರಿ ಜಿಲ್ಲಾ ಫಿಟ್ನೆಸ್ ಅಸೋಸಿಯೇಶನ್ ಆಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ಪುರುಷ ಹಾಗೂ ಮಹಿಳೆಯರ ದೇಹದಾಡ್ಯ ಸ್ಪರ್ಧೆ ಹಾಗೂ ಪವರ್ ಲಿಫ್ಟಿಂಗ್ ಸ್ಪರ್ಧೆಗಳಿಗೆ ಚಾಲನೆ ನೀಡಿ ಮಾತನಾಡಿದರು. ಉತ್ತಮ, ಸದೃಢ ಆರೋಗಕ್ಕಾಗಿ ವ್ಯಾಯಾಮ, ಓಟ, ಜಾಗಿಂಗ್ ಸೇರಿದಂತೆ ಹಿತ ಮಿತಿಯಲ್ಲಿ ಶುಚಿಯಾದ ಆಹಾರ ಸೇವನೆ ಮುಖ್ಯವಾಗಿದೆ. ಸದೃಢ ಆರೋಗ್ಯಕ್ಕಾಗಿ ಯುವಕರು ಜಿಮ್, ವ್ಯಾಯಾಮದಲ್ಲಿ ತೊಡಗುತ್ತಿದ್ದಾರೆ. ಕಳೆದ 2021–22ರಲ್ಲಿ ಎದುರಾದ ಕೋವಿಡ್ ಸಂದರ್ಭದಲ್ಲಿ ಅನೇಕ ಯುವಕರು, ದೊಡ್ಡವರನ್ನು ಕಳೆದುಕೊಂಡಿದ್ದೇವೆ. ದೇಹಕ್ಕೆ ವ್ಯಾಯಾಮ ಅತ್ಯಗತ್ಯ. ಜಿ.ಕೆ.ಸ್ವಾಮಿ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಜಿ.ಕೆ.ಸ್ವಾಮಿ (ವಿಜಯ್) ಅವರು, ಯುವಕರಿಗೆ ಇದೊಂದು ಉತ್ತಮ ವೇದಿಕೆ ಕಲ್ಪಿಸಿದ್ದಾರೆ, ಅತ್ಯಂತ ಶ್ಲಾಘನೀಯ. ಯುವಕ ಯುವತಿಯರು ಫಿಟ್ನೆಸ್ ಗಾಗಿ ಸಾಕಷ್ಟು ಶ್ರಮಪಡುತ್ತಿರುವುದು ಕಂಡು ಬರುತ್ತಿದೆ. ನಮ್ಮ ಬಳ್ಳಾರಿಯಲ್ಲಿ ಜಿಲ್ಲಾ ಕ್ರೀಡಾಂಗಣ, ಹಾಕಿ ಸ್ಟೇಡಿಯಂ, ಬ್ಯಾಸ್ಕೆಟ್ ಬಾಲ್, ಸ್ವಿಮ್ಮಿಂಗ್, ಒಳಾಂಗಣ ಕ್ರೀಡಾಂಗಣ ಇದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಸಿಂಥಟಿಕ್ ಕ್ರೀಡಾಂಗಣ ಧೂಳು ತಿನ್ನುತ್ತಿದೆ, ಅದನ್ನು ಸ್ವಚ್ಛಗೊಳಿಸುವ ಕಾರ್ಯವಾಗಬೇಕು ಎಂದರು. ಜಿ.ಕೆ. ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಜಿ.ಕೆ.ಸ್ವಾಮಿ ಅವರು, ಉದ್ಯಮಿಗಳು, ಅದರಿಂದ ಬರುವ ಹಣದಲ್ಲಿ ಸಮಾಜಕ್ಕೆ ಏನಾದ್ರೂ ಕೊಡುಗೆ ನೀಡಬೇಕು ಎಂದು ಮುಂದೆ ಬಂದಿದ್ದಾರೆ, ಇಂತವರು ಬಹಳ ಅಪರೂಪ, ಪ್ರಸ್ತುತ ದಿನಗಳಲ್ಲಿ ಎಲ್ಲರ ಬಳಿ ಹಣವಿದೆ. ಆದರೆ, ಖರ್ಚು ಮಾಡುವ ಗುಣವಿರಬೇಕು. ಜಿ.ಕೆ.ಸ್ವಾಮಿ ಅವರು ಇಲ್ಲಿವರೆಗೆ ಆರೋಗ್ಯ, ಶಿಕ್ಷಣ, ಮಕ್ಕಳಿಗೆ ಲ್ಯಾಪ್ ಟಾಪ್ ವಿತರಣೆ, ಬಡಜನರ ಸೇವೆ, ರಕ್ತದಾನ ಶಿಬಿರ, ಆರೋಗ್ಯ ಶಿಬಿರ, ಬಡ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವ ಮೂಲಕ ಗಮನಸೆಳೆದಿದ್ದಾರೆ. ಇದೆಲ್ಲದರ ಜೊತೆಗೆ ಕ.ಕ.ವಿಭಾಗ ಮಟ್ಟದ ಯುವಕ, ಯುವತಿಯರಿಗೆ ದೇಹದಾಡ್ಯ ಸ್ಪರ್ಧೆಗಳನ್ನು ಆಯೋಜಿಸಿ, ಬಳ್ಳಾರಿಯ ಕೀರ್ತಿ ಹೆಚ್ಚಿಸಿದ್ದಾರೆ, ಅವರಿಗೆ ನಮ್ಮೆಲ್ಲರ ಪ್ರೋತ್ಸಾಹ ಇರಲಿದೆ ಎಂದರು.

ಜಿಕೆ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಜಿ.ಕೆ.ಸ್ವಾಮಿ (ವಿಜಯ್) ಅವರು ಮಾತನಾಡಿ, ಪ್ರತಿಯೊಬ್ಬ ಕ್ರೀಡಾಪಟುಗಳು ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು, ಕ್ರೀಡೆಗಳಲ್ಲಿ ಸೋಲು, ಗೆಲುವು ಅನ್ನುವುದಕ್ಕಿಂತ ಭಾಗವಹಿಸುವುದು ಮುಖ್ಯ. ಕ.ಕ.ಭಾಗದ ನಮ್ಮ ಯುವಕ, ಯುವತಿಯರಿಗೆ

ಇದೊಂದು ಸ್ನೇಹಪೂರ್ವಕವಾಗಿ ಈ ಜಿಮ್ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ತೀರ್ಪುಗಾರರು ಅರ್ಹರಿಗೆ ಮಾತ್ರ ತೀರ್ಪು ನೀಡಿ, ಸಹಕರಿಸಬೇಕು ಎಂದರು. ತೀರ್ಪುಗಾರರಾಗಿ ಮೈಸೂರಿನ ಗಣೇಶ್ ಪ್ರಸಾದ್, ಲಕ್ಷ್ಮಿ ದಯಾನಂದ್, ಸುರೇಂದ್ರ, ಚಂದ್ರಪ್ಪ, ರಾಜೇಶ್ ಹೊಸಪೇಟೆ, ತಿಪ್ಪಯ್ಯ ಜಿ., ಲಕ್ಷ್ಮಿ ನಾರಾಯಣ, ಗೋಪಾಲ್ ಜಿ., ಶಶಿಧರ್, ರಘುಪತಿ, ಹಜರತ್ ಅಲಿ, ಎಂ.ನಾರಾಯಣ, ಮಂಜುನಾಥ್ ಚಿಕ್ಕ ಮಂಗಳೂರು ಅವರು ನಿರ್ವಹಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಗೋವಿಂದರಾಜಲು, ರಘು, ಓಬಳೇಶ್, ಮೇಘನಾಥ್ ರೆಡ್ಡಿ, ಉಜ್ವಲ, ಶ್ಯಾಮ್ ಸುಂದರ್, ಕೆ.ಯರಿಸ್ವಾಮಿ, ಬಂಡಿಹಟ್ಟಿ ರಾಜು, ಕರಾಟೆ ಕಟ್ಟೆಸ್ವಾಮಿ ಇತರರಿದ್ದರು.

# ಪಡಿತರ ಅಕ್ಕಿಯ ಅಕ್ರಮ ದಂಧೆ ಮೇಲೆ ಮತ್ತೆ ಎಸಿ ರಾಜೇಶ್ ದಾಳಿ



**• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಸಾರ್ವಜನಿಕರಿಗೆ ವಿತರಣೆಯಾಗಬೇಕಿದ್ದ 50 ಕಿಲೋದ 523 ಚೀಲ ಪಡಿತರ ಅಕ್ಕಿಯನ್ನು ಗುಜರಾತಿಗೆ ಸಾಗಾಣೆ ಮಾಡಲು ಹೊರಟ್ಟಿದ್ದನ್ನು ಬಳ್ಳಾರಿ ಉಂ ವಿಭಾಗದ ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ. ಅವರು ನನ್ನೆ ರಾತ್ರಿ ತಡೆಹಿಡಿದಿದ್ದಾರೆ.

ನಗರದ ಎಸ್.ಎಲ್.ಎನ್ ಮಾಲ್ ಬಳಿ ಇರುವ ದರೂರು ಪುಲ್ಲಯ್ಯ ಕಾಂಪೌಂಡ್ ಒಳ ಆವರಣದಲ್ಲಿ ಪಡಿತರ ಅಕ್ಕಿಯನ್ನು ಬಳ್ಳಾರಿಯ ವಾಹನಗಳ ಮೂಲಕ ತಂದು ಗುಜರಾತ್ ಮೂಲದ ಸರಕು ಸಾಗಣೆ ಲಾರಿಯಲ್ಲಿ ಲೋಡ್ ಮಾಡಲಾಗುತ್ತಿತ್ತು.

ಹಗರಿಬೊಮ್ಮನಹಳ್ಳಿಯಿಂದ ಬಂದಿದ್ದ 10 ಜನ ಹಮಾಲಿಗಳು ಚಿಕ್ಕ ಲಾರಿಯಿಂದ ದೊಡ್ಡ ಲಾರಿಗೆ ಲೋಡ್

ಮಾಡುತ್ತಿದ್ದರು. ಇವರಿಗೆ ಶ್ರೀಧರ್ ಎಂಬಾತ 750 ಕೂಲಿ ನೀಡಿ ಈ ದಂಧೆ ಮಾಡಿಸುತ್ತಿದ್ದನಂತೆ.

ಈ ಬಗ್ಗೆ ತಮಗೆ ದೊರೆತ ಮಾಹಿತಿಯಿಂದ ಸ್ವತಃ ರಾಜೇಶ್ ಅವರು ತಲೆಗೆ ಟವಲ್ ಕಟ್ಟಿ–ಕೊಂಡು ಬೈಕ್ ನಲ್ಲಿ ಬಂದು ಈ ದಂಧೆಗೆ ಬ್ರೇಕ್ ಹಾಕಿದ್ದಾರೆ.

ಇಬ್ಬರು ಗುಜರಾತ್ ಮೂಲದ ಚಾಲಕರು,

ಬಳ್ಳಾರಿ ಮೂಲದ ಒಬ್ಬ ಚಾಲಕ, 5 ಹಮಾಲಿಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ಇನ್ನೂ ಒಬ್ಬ ಚಾಲಕ ಮತ್ತು 5 ಹಮಾಲಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ.

ವಿಚಾರಣೆ ವೇಳೆ ಸದರಿ ಅಕ್ಕಿ ಚೀಲಗಳನ್ನು ಅಕ್ರಮವಾಗಿ ಗುಜರಾತ್ ರಾಜ್ಯಕ್ಕೆ ತೆಗೆದು–ಕೊಂಡು ಹೋಗಲು ತಯಾರಿ ಮಾಡುತ್ತಿರುವುದಾಗಿ ಗುಜರಾತ್ ಮೂಲದ ಚಾಲಕ ಹೇಳಿದ್ದಾನೆ.

ಸ್ಥಳಕ್ಕೆ ಎಪಿಎಂಸಿ ಪೊಲೀಸ್ ಕರೆಸಿ ಪ್ರಕರಣ ದಾಖಲಿಸಿದೆ.

ಈ ಹಿಂದೆ ಸಹ ಬಳ್ಳಾರಿ ನಗರದ ಲಾಲಾ ಕಮಾನ್ ನಲ್ಲಿ ನಡೆ–ಯುತ್ತಿದ್ದ ಅಕ್ರಮವಾಗಿ ಪಡಿತರ ಅಕ್ಕಿಯ ಸಾಗಾಣೆಯ ದಂಧೆ ಕೊರರಿಗೆ ಬಿಸಿ ಮುಟ್ಟಿಸಿದ್ದರು. ಅಲ್ಲದೆ ಹಗರಿ ನದಿಯಿಂದ ಅಕ್ರಮವಾಗಿ ಎತ್ತಿನಬಂಡಿಗಳಲ್ಲಿ ಮರಳು ಸಾಗಾಸುವ ದಂಧೆ ಕೋಋು ಮೇಲೂ ರಾಜೇಶ್ ಅವರು ದಾಳಿ ನಡೆಸಿ ಪ್ರಕರಣ ದಾಖಲಿಸಿದ್ದರು.

# ಮೂರು ದಿನಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ಸದುಪಯೋಗ ಪಡೆದುಕೊಳ್ಳಲು : ಡಾ.ಬಸವರಾಜ ಕರೆ



**• ಮಲ್ಲಮ್ಮ ನುಡಿ ವಾರ್ತೆ,ಗುರುಮಠಕಲ್:**

ಪಟ್ಟಣದ ಶ್ರೀ ಬಸವೇಶ್ವರ ಆಸ್ಪತ್ರೆ ದಿನಾಂಕ: 26–01–2026 ರಿಂದ ದಿನಾಂಕ 28–01–2026 ವರೆಗೆ ಮೂರು ದಿನಗಳ ಉಚಿತ ಆರೋಗ್ಯ ತಪಾಸಣೆ ಶಿಬಿರ ಬೆಳಿಗ್ಗೆ 10 ರಿಂದ 3 ಗಂಟೆವರೆಗೆ ಹಮ್ಮಿಕೊಂಡಿರುವದಾಗಿ ಗುರುಮಠಕಲ್ ಹಾಗೂ ಸುತ್ತಮುತ್ತಲಿನ ಗ್ರಾಮದ ಸಾರ್ವಜನಿಕರು ಇದರ ಸದುಪಯೋಗ ಪಡೆದು ಕೊಳ್ಳಲು ಡಾ. ಬಸವರಾಜ ಬೇಲಿ ಸುದ್ದಿಗೋಷ್ಠಿ ನಡೆಸಿ ಶುಕ್ರವಾರ ತಿಳಿಸಿದರು.

ಶ್ರೀ ಬಸವೇಶ್ವರ ಆಸ್ಪತ್ರೆ ಪ್ರಾರಂಭವಾಗಿ 13 ವರ್ಷ ಆಗಿರುವ ಸುಸಂದರ್ಭದಲ್ಲಿ ಶಿಬಿರ ಆಯೋಜಿಸಿದ್ದು, ಶಿಬಿರದಲ್ಲಿ ಬಂಜೆತನ, ಸ್ತ್ರೀ ರೋಗ, ಥೈರಾಯ್ಡ್, ಮುಟ್ಟಿನ ಅಸ್ವಸ್ಥತೆ, ಪಿಸಿಓಡಿ, ಚರ್ಮಕ್ಕೆ ಸಂಬಂಧಿಸಿದ ಅಲರ್ಜಿ, ಸೋರಿಯಸ್, ಮೂಲವ್ಯಾಧಿ, ರಕ್ತಸ್ರಾವ, ಭಗಂದರ, ಮುಂತಾದ ರೋಗಗಳ ತಪಾಸಣೆ ಜರುಗುವದು ಎಂದು ತಿಳಿಸಿದರು.

ಶಿಬಿರದಲ್ಲಿ ನುರಿತ ವೈದ್ಯರಾದ ಡಾ. ವರ್ಷರಾಣಿ ಸ್ತ್ರೀ ರೋಗ ತಜ್ಞರು, ಶಸ್ತ್ರಚಿಕಿತ್ಸಕರಾದ

ಡಾ.ವಿನೋದ್ ಭಾವಿ, ಚರ್ಮರೋಗ ತಜ್ಞರಾದ ಡಾ. ಸೌಮ್ಯ ವಿ. ಭಾವಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ವೀರಶೈವ ಲಿಂಗಾಯತ ಸಮಾಜದ ನಿಕಟಪೂರ್ವ ಅಧ್ಯಕ್ಷರಾದ ನಾಗಭೂಷಣ ಅವಂಟಿ, ನರಸರೆಡ್ಡಿ ಪೊಲೀಸ್ ಪಾಟೀಲ ಗಡ್ಡೆಸುಗೂರು, ವೀರಣ್ಣ ಬೇಲಿ ಉಪಸ್ಥಿತರಿದ್ದರು.

# ಕಬ್ಬಡ್ಡಿ ಬೀರಪ್ಪ ಅಂಡಗಿ ಪ್ರಥಮ ಸ್ಥಾನೆ



**• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇತ್ತಿಚೇಗೆ ಸರಕಾರಿ ನೌಕರರ ಸಂಘದ ಕ್ರೀಡಾಕೂಟದ ಜೊತೆಯಲ್ಲಿ ಜುರುಗಿದ ವಿಕಲಚೇತನ ನೌಕರರ ಕ್ರೀಡಾಕೂಟದ ಕಬ್ಬಡ್ಡಿ ಆಟದಲ್ಲಿ ವಿಕಲಚೇತನ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಬೀರಪ್ಪ ಅಂಡಗಿ ನಾಯಕತ್ವದ ತಂಡವು ಪ್ರಥಮ ಸ್ಥಾನವನ್ನು ಪಡೆಯಿತು. ವಿಕಲಚೇತನ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಬಸವರಾಜ ಮಾರನಬಸರಿ ಅವರ ನಾಯತ್ವದ ತಂಡ ದ್ವೀತಿಯ ಸ್ಥಾನವನ್ನು ಪಡೆಯಿತು.

ಪ್ರಥಮ ಹಾಗೂ ದ್ವಿತೀಯ ಸ್ಥಾನವನ್ನು ಪಡೆದ ತಂಡಗಳಿಗೆ ಜಿಲ್ಲಾಧಿಕಾರಿಗಳಾದ ಸುರೇಶ ಇಟ್ನಾಳ ಅವರು ಬಹುಮಾನ ವಿತರಣೆ ಮಾಡಿದರು.

ಈ ಸಮಯದಲ್ಲಿ ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಸರಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷರಾದ ನಾಗರಾಜ ಆರ್ ಜುಮ್ಮಣ್ಣನವರ, ರಾಜ್ಯ ಪರಿಷತ್ತಿನ ಸದಸ್ಯರಾದ ಆಸೀಫ ಅಲಿ, ಗೌರವಾಧ್ಯಕ್ಷರಾದ ಸಿದ್ದಪ್ಪ ಮೇಳಿ, ಖಜಾಂಚಿಗಳಾದ ಜಯತೀರ್ಥ ದೇಸಾಯಿ ಸೇರಿದಂತೆ ಅನೇಕರು ಹಾಜರಿದ್ದರು.

ಪೋಟೋ: ವಿಕಲಚೇತನ ನೌಕರರ ಕಬಡ್ಡಿ ಆಟದಲ್ಲಿ ಪ್ರಥಮ ಸ್ಥಾನ ಪಡೆದ ಬೀರಪ್ಪ ಅಂಡಗಿ ಅವರ ತಂಡಕ್ಕೆ ಜಿಲ್ಲಾಧಿಕಾರಿಗಳಾದ ಸುರೇಶ ಹಿಟ್ನಾಳ ಬಹುಮಾನ ವಿತರಣೆ ಮಾಡಿದರು.

# ಬೊಮ್ಮಾನಾಳ್ ನಿಂದ ಬರುತ್ತಿದ್ದ ಬಿಂಚೆ ಲಾರಿ ಸೀಜ್



**• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಆನಧಿಕೃತವಾಗಿ ಬಿಂಚೆ ಕಲ್ಲು ಮತ್ತು ಎಮ್‌ಸ್ಯಾಂಡ್ ನ್ನು ಆಂದ್ರಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ. ಪ್ರದೇಶದ ಬೊಮ್ಮಹಾಳ್ ಕ್ರಸರ್ ಗಳಿಂದ ತುಂಬಿಕೊಂಡು ನಗರಕ್ಕೆ ಬರುತ್ತಿದ್ದ ಲಾರಿಗಳನ್ನು ಗ್ರಾಮೀಣ ಠಾಣೆಯ ಪೊಲೀಸರು ಸೀಜ್ ಮಾಡಿದ್ದಾರೆ. ಬೊಮ್ಮನಾಲಳ್ ನಿಂದ ಬರುತ್ತಿದ್ದ ಲಾರಿಗಳನ್ನು ತಾಲೂಕಿನ ಎತ್ತಿನಬೂದಿಹಾಳ್ ಕ್ರಾಸ್ ಹತ್ತಿರ ಚೆಕ್‌ಪೋಸ್ಟ್‌ನಲ್ಲಿ ಗ್ರಾಮೀಣ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಉದಯ ರವಿ ಮತ್ತವರ ಸಿಬಗಬಂದಿ ತಡೆದು. ಓವರ್ ಲೋಡ್ ನೊಂದಿಗೆ ಕಲ್ಲು ಬಿಂಚೆ ಸಾಗಾಟ ಮಾಡುತ್ತಿದ್ದ 10 ಮತ್ತು ಎಮ್ಯಾಂಡ್ ಸಾಗಾಟ ಮಾಡುತ್ತಿದ್ದ 1 ಟಿಪ್ಪರ್ ಲಾರಿಗಳನ್ನು ಮೊನ್ನೆ ವಶಕ್ಕೆ ಪಡೆಯಲಾಗಿದೆ. ಮುಂದಿನ ಕ್ರಮಕ್ಕಾಗಿ ಉಪ–ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

# ಮಳಿಗೆಗೆ ಅರ್ಜಿ ಆಹ್ವಾನ

**• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ):**

ಪ್ರಸಕ್ತ ಸಾಲಿನ ಹಂಪಿ ಉತ್ಸವ ಕಾರ್ಯಕ್ರಮವನ್ನು ಫೆಬ್ರವರಿ 13 ರಿಂದ 15 ರವರಿಗೆ ಆಯೋಜಿಸಲಾಗಿದ್ದು, ಹಂಪಿ ಉತ್ಸವದಲ್ಲಿ 10 ಫಿ 10 ಅಡಿ ಅಳತೆಯ ಮಳಿಗೆಗಳನ್ನು ವಸ್ತು ಪ್ರದರ್ಶನಕ್ಕಾಗಿ ಮುಂಗಡವಾಗಿ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿದೆ.ಈ ನಿಟ್ಟನಲ್ಲಿ ಮಳಿಗೆಗಳನ್ನು ಕಾಯ್ದಿರಿಸಲು ಬಯಸುವವರು ಅರ್ಜಿಯೊಂದಿಗೆ ಅಧ್ಯಕ್ಷರು, ಹಂಪಿ ಉತ್ಸವ ಇವರ ಹೆಸರಿನಲ್ಲಿ ರೂ 5000/– ಮೊತ್ತದ ಡಿಡಿಯೊಂದಿಗೆ ಜನವರಿ 31 ರೊಳಗಾಗಿ ನಗರದ ಹರಿಹರ ರಸ್ತೆ, ಎನ್.ಸಿ.ಕಾಲೋನಿಯಲ್ಲಿನ ಸೆಂಟರ್ ಆಫ್ ಎಕ್ಸಲೆನ್ಸ್ ಕಟ್ಟಡ, ನ್ಯಾಷನಲ್ ಕಾಲೇಜ್ ಹಿಂಭಾಗ ಜಂಟಿ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಲು ತಿಳಿಸಿದೆ.

# ಭರತ್ ಹುಣ್ಣಿಮೆ ಪ್ರಯುಕ್ತ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ.ಎಸ್.ಭೇಟಿ



**• ಮಲ್ಲಮ್ಮ ನುಡಿ ವಾರ್ತೆ ಉಚ್ಚಂಗಿದುರ್ಗ:**

ತಾಲ್ಲೂಕಿನ ಉಚ್ಚಂಗಿದುರ್ಗದ ಉಚ್ಚಿಂಗೆಮ್ಮ ದೇವಿಯ ಭರತ್ ಹುಣ್ಣಿಮೆಯ ಪ್ರಯುಕ್ತ ಪೂರ್ವ ಸಿದ್ದತಾ ಪ್ರಯುಕ್ತ ಉಚ್ಚಂಗಿದುರ್ಗ ಗ್ರಾಮಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ.ಎಸ್. ಉಚ್ಚಂಗೆಮ್ಮ ದೇವಿಗೆ ಪೂಜೆ ಸಲ್ಲಿಸಿ, ಅಣಜಿಯಿಂದ ಬರುವ ವಾಹನಗಳಿಗೆ ಕೋಟೆ ಕ್ಯಾಂಪ್ ಹತ್ತಿರ ಪಾರ್ಕಿಂಗ್ ವ್ಯವಸ್ಥೆ, ಬಸ್ ನಿಲ್ದಾಣ, ಅರಸೀಕೆರೆಯಿಂದ ಬರುವ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಪಾರ್ಕಿಂಗ್ ವ್ಯವಸ್ಥೆ, ಬಸ್ ನಿಲ್ದಾಣ, ಬೇವಿನಹಳ್ಳಿಯಿಂದ ಬರುವ ವಾಹನಗಳಿಗೆ ಉಜ್ಜಿನಿ ಶಾಲೆ ಹತ್ತಿರ ಪಾರ್ಕಿಂಗ್ ವ್ಯವಸ್ಥೆ, ಅಣಜಿಗೆರೆಯಿಂದ ಬರುವ ವಾಹನಗಳಿಗೆ ಕೆ.ಇ.ಬಿ. ಎದುರುಗಡೆ ಪಾರ್ಕಿಂಗ್ ವ್ಯವಸ್ಥೆ, ನಾಲ್ಕು ಕಡೆ ಚೆಕ್ ಪೋಸ್ಟ್ ವ್ಯವಸ್ಥೆ, ಹಾಲಮ್ಮನ ತೋಪಿನಲ್ಲಿ ಕುಡಿಯುವ ನೀರಿನ ಹೊಂಡ, ಶೌಚಾಲಯ ವ್ಯವಸ್ಥೆ ವೀಕ್ಷಣೆ ಮಾಡಿದರು.

ಈ ಜಾತ್ರೆಗೆ ಒಂದು ಡಿವೈಎಸ್ಪಿ, ನಾಲ್ಕು ಸಿಪಿಐ, ಹನ್ನೊಂದು ಪಿ.ಎ, 250 ಹೆಚ್, ಸಿ, ಪಿ ಸಿ, 300 ಹೋಮ್ ಗಾರ್ಡ್, 2 ಕೆಎರ್ ಪಿ, 2 ಡಿ ಆರ್ ವಾಹನ ನಿಯೋಜನೆಗೊಳಿಸಲಾಗಿದೆ.

ಮೂರು ದಿನಗಳ ಕಾಲ ನಡೆಯುವ ಈ ಜಾತ್ರೆಗೆ ಬರುವಂತಹ ಭಕ್ತಾಧಿಗಳಿಗೆ ಯಾವುದೇ ಮೂಲಭೂತ ಸೌಕರ್ಯಗಳಿಗೆ ತೊಂದರೆಯಾಗದಂತೆ ಮುಂಜಾಗೃತ ಕ್ರಮ ವಹಿಸಬೇಕು, ಸೂಕ್ತ ಪೊಲೀಸ್ ಬಂದೋ ಬಸ್ತ್ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಡಿವೈಎಸ್ಪಿ ಸಂತೋಷ್ ಚೌಹಾಣ್, ಸಿಪಿಐ. ಮಹಾಂತೇಶ್ ಸಜ್ಜನ್, ಪಿ.ಎ. ವಿಜಯ್ ಕೃಷ್ಣ, ಎಸ್. ಪಿ. ಕಾನ್ಸ್‌ಬಲ್ ಕೂಲಹಳ್ಳಿ ಎಂ. ಕೊಟ್ರೇಶ್, ಧಾರ್ಮಿಕ ದತ್ತಿ ಇಲಾಖೆಯ ಗುಮಾಸ್ತ ಗಂಗಾಧರ್, ನಾಗರಾಜ್, ಪೊಲೀಸ್ ಸಿಬ್ಬಂದಿಗಳು ಹಾಗೂ ಪೂಜಾರಿಗಳು ಹಾಜರಿದ್ದರು.

# ಫಿಟ್ನೆಸ್ ಅಸೋಸಿಯೇಶನ್: ಕ.ಕ.ವಿಭಾಗ ಮಟ್ಟದ ದೇಹದಾಡ್ಯ, ಪವರ್ ಲಿಫ್ಟಿಂಗ್ ಸ್ಪರ್ಧೆ



ಜಿ.ಕೆ. ಕ್ಲಾಸಿಕ್ ಸೀಸನ್ –1, ಟೈಟಲ್ ವಿನ್ನರ್ ಶರಣಪ್ಪ ಕೊಪ್ಪಳ,

ಬಳ್ಳಾರಿ: ಜಿ.ಕೆ.ಫೌಂಡೇಶನ್ ಹಾಗೂ ಬಳ್ಳಾರಿ ಫಿಟ್ನೆಸ್ ಅಸೋಸಿಯೇಶನ್ ಆಶ್ರಯದಲ್ಲಿ ನಗರದ ಶ್ರೀ ವಾಲ್ಮೀಕಿ ಭವನದಲ್ಲಿ ಗುರುವಾರ ಸಂಜೆ ಹಮ್ಮಿಕೊಂಡಿದ್ದ ದೇಹದಾಡ್ಯ ಸ್ಪರ್ಧೆಯಲ್ಲಿ ಜಿ.ಕೆ.ಸೀಸನ್ –1 ಟೈಟಲ್ ವಿನ್ನರ್ ಶರಣಪ್ಪ ಕೊಪ್ಪಳ, ಜಿ.ಕೆ.ಮಸ್ಕೂಲರ್ ಬೆಸ್ಟ್ ಬಳ್ಳಾ–ರಿಯ ಅಬ್ದುಲ್ ರಹೀಂ ಹಾಗೂ ಜಿ.ಕೆ. ಬೆಸ್ಟ್ ಪೋಜರ್ ಆಗಿ ಕೊಪ್ಪಳದ ಗೋಣಿ ಸ್ವಾಮಿ ಹೋರ ಹೊಮ್ಮಿದರು. ಜಿ.ಕೆ.ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಜಿ.ಕೆ.ಸ್ವಾಮಿ (ವಿಜಯ್) ಅವರು, ಟೈಟಲ್ ವಿನ್ನರ್ ಶರಣಪ್ಪ ಕೊಪ್ಪಳ ಅವರಿಗೆ 51 ಸಾವಿರ ನಗದು, ಜಿ.ಕೆ.ಮಸ್ಕುಲರ್ ಬೆಸ್ಟ್ ಬಳ್ಳಾರಿಯ ಅಬ್ದುಲ್ ರಹೀಂ ಅವರಿಗೆ 15 ಸಾವಿರ ನಗದು ಹಾಗೂ

ಜಿ.ಕೆ.ಬೆಸ್ಟ್ ಪೋಜರ್ ಗೋಣಿ ಸ್ವಾಮಿ ಕೊಪ್ಪಳ ಅವರಿಗೆ 10 ಸಾವಿರ ನಗದು ಬಹುಮಾನ ವಿತರಿಸಿ ಗೌರವಿಸಿದರು. ನಂತರ ಎಲ್ಲ ವಿಜೇತರಿಗೆ ಸುಮಾರು 8 ಲಕ್ಷ ರೂ. ಬಹುಮಾನ ವಿತರಿಸಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿದರು.

**ದೇಹದಾಡ್ಯ ಸ್ಪರ್ಧೆ** (174 –183): ಮೊದಲ ಸ್ಥಾನ ಅರುಣ್ ಜಿ., ಎರಡನೇ ಸ್ಥಾನ ಮೋಹನ್, ಮೂರನೇ ಸ್ಥಾನವನ್ನು ಚಾಂದ್ ಭಾಷಾ ಅವರು ಪಡೆದು ಗಮನಸೆಳೆದರು.

**ಪುರುಷರ ವಿಭಾಗ** (165 – 173): ಮೊದಲನೇ ಸ್ಥಾನ ಕೊಪ್ಪಳದ ಶರಣಪ್ಪ, ಮೂರನೇ ಸ್ಥಾನ ಅಬ್ದುಲ್ ರಹೀಂ ಅವರು ಪಡೆದು ಗಮನಸೆಳೆದರು.

**ದೇಹದಾಡ್ಯ ಸ್ಪರ್ಧೆ** (65 –75): ಮೊದಲನೇ ಸ್ಥಾನ ಶರಣಪ್ಪ, ಎರಡನೇ ಸ್ಥಾನ ವಿ.ಪ್ರವೀಣ್, 3ನೇ ಸ್ಥಾನ ಬಿ.ಪ್ರದೀಪ್, 4ನೇ ಎಂ.ಡಿ.ಅಮ್ಜದ್, 5ನೇ ಸ್ಥಾನವನ್ನು ದೀಪಕ್ ಅವರು ಪಡೆದರು.

**ದೇಹದಾಡ್ಯ ಸ್ಪರ್ಧೆ** (55 –65): ಮೊದಲ ಸ್ಥಾನ ಅಬ್ದುಲ್ ರಹಿಮ್, ಎರಡನೇ ಸ್ಥಾನ ನವೀನ್, ಮೂರನೇ ಸ್ಥಾನ ರಿಜ್ವಾನ್, 5ನೇ ಸ್ಥಾನವನ್ನು ರಾಜೇಶ್ ಅವರು ಪಡೆದು ಗಮನಸೆಳೆದರು.

**ದೇಹ ನಿರ್ಮಾಣ** ( 4 ವಿಭಾಗ) 55 ಕೇಜಿಗಿಂತ ಕಡಿಮೆ: ಮೊದಲ ಸ್ಥಾನ ಗೋಣಿ ಸ್ವಾಮಿ, 2ನೇ ಸೋಹಿಲ್, 3ನೇ ರಾಘವೇಂದ್ರ, 4ನೇ ಟ್ಯಾಗೋರ್, 5ನೇ ಸ್ಥಾನವನ್ನು ಸೊಹೆಬ್ ಅವರು ಪಡೆದರು.

**ದೇಹದಾಡ್ಯ ಸ್ಪರ್ಧೆ** ( 75 ಕೆಜಿ) : ಮೊದಲನೇ ಸ್ಥಾನ ಅರುಣ್, ಎರಡನೇ ಸ್ಥಾನ ರೋಹಿತ್, 3ನೇ ಸ್ಥಾನ ಚಾಂದ್ ಭಾಷಾ, 4ನೇ ಸ್ಥಾನವನ್ನು ಸೈಯದ್ ಸುಲ್ತಾನ್ ಅವರು ಪಡೆದರು. ಎಲ್ಲ ಸ್ಪರ್ಧಾಳುಗಳಿಗೆ ಜಿ.ಕೆ.ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಜಿ.ಕೆ.ಸ್ವಾಮಿ ( ವಿಜಯ್) ಅವರು ಬಹುಮಾನ ವಿತರಿಸಿ ಎಲ್ಲ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ ಫಿಟ್ನೆಸ್ ಅಸೋಸಿಯೇಶನ್ ಕಾರ್ಯದರ್ಶಿ ಬಿ.ಎಸ್.ರಾಘವೇಂದ್ರ ಠಾಕೋರ್, ಕರಾಟೆ ತರಬೇತುದಾರ ಕಟ್ಟೆಸ್ವಾಮಿ, ಶಿವು ಸ್ವಾಮಿ, ರಾಜೇಶ್, ಹಂದ್ರಾಳ ಗೋವಿಂದ್, ಮಾನಪ್ಪ, ಮುಸ್ತು, ಪೀಠರ್, ದುರ್ಗಾ ಪ್ರಸಾದ್, ಹರೀಶ್, ಜಾವೇದ್, ರತ್ನಯ್ಯ ಸೇರಿದಂತೆ ಜಿ.ಕೆ.ಫೌಂಡೇಶನ್ ಹಾಗೂ ಬಳ್ಳಾರಿ ಜಿಲ್ಲಾ ಫಿಟ್ನೆಸ್ ಅಸೋಸಿಯೇಶನ್ ಸರ್ವ ಸದಸ್ಯರು ಇದ್ದರು. ಕಲಾವಿದರಾದ ವಿನೋದ್ ಹಾಗೂ ಶಿರೀಷಾ ಅವರು ಕಾರ್ಯಕ್ರಮ ನಿರ್ವಹಿಸಿದರು.

# ಹಳೆ ವಿಧ್ಯಾರ್ಥಿಗಳಿಂದ ಮೈತ್ರಿ ಸಮಾರಂಭ



**• ಮಲ್ಲಮ್ಮ ನುಡಿ ವಾರ್ತೆ ಮುದಗಲ್;**

ಸಮೀಪದ ಪಿ.ಎಂ ಶ್ರೀ ಜವಹಾರ ನವೋದಯದ 2000–2007ರ, 2ನೇ ಬ್ಯಾಚ್ ಹಳೆ ವಿದ್ಯಾರ್ಥಿಗಳಿಂದ ಜ. 24 ಹಾಗೂ 25ರಂದು ಸಮ್ಮಿಲನ ಮೈತ್ರಿ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ವಿದ್ಯಾರ್ಥಿ ಸಂಘಟನೆ ಮುಖಂಡ ಮಂಜುನಾಥ ಬಿರಾದರ ಹಾಗೂ ಸಂದೀಪ ಮುರಾರಿ ಗುರುವಾರ ತಿಳಿಸಿದರು.

ಪಟ್ಟಣದ ಪ್ರತಿಕಾ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕನ್ನಾಪುರ ಹಟ್ಟಿ ಜವಹಾರ ನವೋದಯ ವಿದ್ಯಾಲಯದಲ್ಲಿ ಹಳೇ ವಿಧ್ಯಾರ್ಥಿಗಳಿಂದ 2ನೇ ಬ್ಯಾಚ್ ಮೈತ್ರಿ ಸಮಾರಂಭ ಜ. 24ರಂದು ಆಚರಿಸಲಿದ್ದೇವೆ. ಹಳೆಯ ವಿದ್ಯಾರ್ಥಿಗಳಿಗೆ ಹಾಗೂ ವಿದ್ಯಾಲಯದಲ್ಲಿ ಪ್ರಸ್ತುತ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕ್ರೀಡಾಕೂಟವನ್ನು ಏರ್ಪಡಿಸಲಾಗಿದೆ. ಜ.25ರಂದು ಮೈತ್ರಿ ಸಮಾರಂಭಕ್ಕೆ ರಾಯಚೂರು ಜಿಲ್ಲಾಧಿಕಾರಿ ನಿತೀಶ್ ಕೆ. ಲಿಂಗಸಗೂರು ತಾಲೂಕ ಉಪ ವಿಭಾಗಧಿಕಾರಿ ಬಸವಣ್ಣಪ್ಪ ಕಲಶೆಟ್ಟಿ, ಶಿಕ್ಷಣ ಪ್ರೇಮಿ ಗಿರಿಧರ ಪೂಜಾರ ಮುಖ್ಯ ಅತಿಥಿಗಳಾಗಿ ಆಗಮಿಸುತ್ತಾರೆ. ಹಳೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಪ್ರಾಚಾರ್ಯರು ಹಾಗೂ ಸಿಬ್ಬಂದಿಗಳು, ಪಾಲಕರ ಸಮಿತಿ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘ, ಜ.ನ.ವಿ ಕನ್ನಾಪುರ ಹಟ್ಟಿಯ ಪರವಾಗಿ ಕೋರುತ್ತೇವೆ ಎಂದು ಹೇಳಿದರು.

# ವಿಪತ್ತು ಮುಂಜಾಗ್ರತಾ ಅರಿವು ಅಗತ್ಯ

**• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಯಾವುದೇ ವಿಪತ್ತುಗಳು ಸಂಭವಿಸಿದಾಗ ತತಕ್ಷಣ ಕೈಗೊಳ್ಳುವ ಮುಂಜಾಗ್ರತಾ ಕ್ರಮಗಳ ಅರಿವು ಹೊಂದಬೇಕು ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಇನ್ಸ್ ಪೆಕ್ಟರ್ ಅಜಯ್ ಕುಮಾರ್ ಅವರು ಹೇಳಿದರು.

ಸಿರುಗುಪ್ಪ ತಾಲ್ಲೂಕಿನ ದೇಶನೂರು ಗ್ರಾಮದ ಎನ್‌ಎಸ್‌ಎಲ್ ಸಕ್ಕ–ರೆ ಕಾರ್ಖಾನೆಯಲ್ಲಿ ಬುಧವಾರ ಆಯೋಜಿಸಿದ್ದ ಅಣಕು ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇಶದಲ್ಲಿ 16 ಎನ್‌ಡಿಆರ್‌ಎಫ್ ತಂಡಗಳಿದ್ದು, ವಿಪತ್ತು ಸನ್ನಿವೇಶ ಎದುರಾದಾಗ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡಗಳು ಸದಾ ಸಿದ್ಧರಿರುತ್ತಾರೆ. ಸಾರ್ವಜನಿಕರು ಸಹ ಅಗತ್ಯ ಸಹಕಾರ ನೀಡಬೇಕು ಎಂದರು. ಜಿಲ್ಲಾಧಿಕಾರಿ ಕಚೇರಿಯ ಪ್ರಕೃತಿ ವಿಕೋಪ ಪರಿಣಿತ ಪರಮೇಶ್ ಅವರು ಮಾತನಾಡಿ,

ಜಿಲ್ಲೆಯಲ್ಲಿ ಪ್ರವಾಹಕ್ಕೆ ತುತ್ತಾಗುವ ಗ್ರಾಮಗಳನ್ನು ಗುರುತಿಸಿದ್ದು, ಎನ್‌ಡಿಆರ್‌ಎಫ್ ತಂಡದ ಸದಸ್ಯರು ಪ್ರತಿ ವಿಪತ್ತುಗಳ ಕುರಿತು ಅರಿವು ಮೂಡಿಸುವರು. ವಿಪತ್ತುಗಳು ಸಂಭವಿಸಿದಾಗ ಸನ್ನದ್ಧಗೊಳಿಸಲು ಕೌಶಲ್ಯಗಳನ್ನು ಪ್ರಾತ್ಯಕ್ಷಿಕೆ ಮೂಲಕ ಅಭ್ಯಾಸ ಮಾಡಿಸುವರು ಹಾಗೂ ಪ್ರಥಮ ಚಿಕಿತ್ಸೆ, ಸಿಪಿಆರ್ ವಿಧಾನಗಳು ತಿಳಿಸುವರು.

ಇದರ ಸದುಪಯೋಗಪಡೆದುಕೊಳ್ಳಬೇಕು ಎಂದು ಹೇಳಿದರು.

ಎನ್‌ಡಿಆರ್‌ಎಫ್ ಸಿಬ್ಬಂದಿ ನಾಗರಾಜ್ ಮತ್ತು ತಂಡದ ಎಲ್ಲಾ ಸದಸ್ಯರು ಬೆಂಕಿ ಅವಘಡಗಳು, ಪ್ರವಾಹ, ಭೂಕಂಪ ಇತ್ಯಾದಿ ವಿಪತ್ತುಗಳ ಮುಂಜಾಗೃತೆ, ಸನ್ನದ್ಧತೆ ಬಗ್ಗೆ ತಿಳಿಸುತ್ತಾ ಕೆಲವು ಶಿಬಿರಾರ್ಥಿಗಳಿಂದ ಅಭ್ಯಾಸಿಸಿದರು.

ಈ ವೇಳೆ ಎನ್‌ಡಿಆರ್‌ಎಫ್ ಸಬ್ ಇನ್ಸ್ ಪೆಕ್ಟರ್ ಮುನ್ನಿಕೃಷ್ಣ, ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆಯ ಡಿಜಿಎಂ ರಾಜಬಾಬು,

ಸಿರುಗುಪ್ಪ ತಾಲ್ಲೂಕು ಕಂದಾಯ ನಿರೀಕ್ಷಕ ಮಂಜುನಾಥ ಸೇರಿದಂತೆ ಆಶಾ ಕಾರ್ಯಕರ್ತೆಯರು, ಆರೋಗ್ಯ ಸಹಾಯಕರು, ಅಂಗನವಾಡಿ ಕಾರ್ಯಕರ್ತೆ–ಯರು, ಕಾರ್ಮಿಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಇಂಟರ್ ನ್ಯಾಷನಲ್ ಸ್ಕೂಲ್ ಶಾಲಾ ವಾರ್ಷಿಕೋತ್ಸವ

**• ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ತಾಲೂಕಿನ ಕೊತ್ತೇಗಾಲ ಗೇಟ್ ಕಲ್ಲಹಳ್ಳಿ ರಸ್ತೆ ಜನವರಿ 25ರಂದು ಭಾನುವಾರ ಸಂಜೆ 6 ಗಂಟೆಗ ಸೇಂಟ್ ಅಂಥೋನಿಸ್ ಇಂಟರ್ ನ್ಯಾಷನಲ್ ಸ್ಕೂಲ್ ಶಾಲಾ ವಾರ್ಷಿಕೋತ್ಸವ ನಡೆಯಲಿದೆ ಎಂದು ಶಾಲೆ ಸಮಿತಿಯ ಅಧ್ಯಕ್ಷರಾದ ಕೆ ವೆಂಕಟೇಶ್ ತಿಳಿಸಿದ್ದಾರೆ

ನಂತರ ಪತ್ರಿಕಾ ಹೇಳಿಕೆ ನೀಡಿ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಚಿತ್ರನಟ ಡಾಲಿ ಧನಂಜಯ್ ಹಾಗೂ ಶಾಸಕ ಜಿಟಿ ಹರೀಶ್ ಗೌಡ ಶಾಸಕರಾದ ರವಿಶಂಕರ್ ಶಾಸಕರಾದ ಅನಿಲ್ ಚಿಕ್ಕಮಾದು ಶಾಸಕ ಎಂ ಗಣೇಶ್ ಪ್ರಸಾದ್ ಗ್ಯಾರೆಂಟಿ ಅನುಷ್ಠಾನದ ಸಮಿತಿಯ ಉಪಾಧ್ಯಕ್ಷರಾದ ಸೂರಜ್ ಹೆಗಡೆ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ವಸ್ತು ಪ್ರದರ್ಶನದ ಅಧ್ಯಕ್ಷರಾದ ಆಯುಬ್ ಖಾನ್ ಜಿಲ್ಲಾ ಸಹಕಾರಿ ಬ್ಯಾಂಕಿನ ಡಿಸಿಸಿ ನಿರ್ದೇಶಕರು ಜಿಎನ್ ಮಂಜುನಾಥ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ

# ಕಾಂಗ್ರೆಸ್ ಕಾರ್ಯಕರ್ತರಿಗೆ ಕಾರ್ಯಾಗಾರ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ನಿರ್ದೇಶನದಂತೆ ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ವತಿಯಿಂದ ನವನಗರದ ಮಹಾತ್ಮಗಾಂಧಿ ಭವನದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ದಿನವಿಡಿ ನಡೆದ ಕಾರ್ಯಾಗಾರದಲ್ಲಿ ಪಕ್ಷದ ಸಂಘಟನೆ, ಸಿದ್ಧಾಂತ, ಸಂವಿಧಾನ ಮತ್ತು ಸಮಕಾಲೀನ ರಾಜಕೀಯ ವಿಚಾರಗಳ ಕುರಿತು ಚರ್ಚೆ ನಡೆಯಿತು.

ಕಾರ್ಯಾಗಾರದ ಪ್ರಾಸ್ತಾವಿಕ ಭಾಷಣ ಮಾಡಿದ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ನಾಗರಾಜ ಹದ್ಲಿ , ಪಕ್ಷದ ಕಾರ್ಯಕರ್ತರು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಕಾಂಗ್ರೆಸ್ ಪಕ್ಷದ ತತ್ವಗಳನ್ನು ಮನೆಮನೆಗೆ ತಲುಪಿಸಬೇಕೆಂದು ಕರೆ ನೀಡಿದರು.

ಕಾರ್ಯಾಗಾರದಲ್ಲಿ ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ವಿನಯಕುಮಾರ ಸೊರಕೆ, ನರೇಗಾ ಯೋಜನೆ ರದ್ದತಿ ಹಾಗೂ ಅದರ ಪರಿಣಾಮಗಳು ಕುರಿತು ಮಾತನಾಡಿ, ನರೇಗಾ ಗ್ರಾಮೀಣ ಜನರ ಜೀವನಾಧಾರವಾಗಿದ್ದು, ಅದನ್ನು ದುರ್ಬಲಗೊಳಿಸುವ ಕ್ರಮಗಳನ್ನು ಕಾಂಗ್ರೆಸ್ ಪಕ್ಷ ವಿರೋಧಿಸಲಿದೆ ಎಂದು ಹೇಳಿದರು.

ಸಹ ಅಧ್ಯಕ್ಷ ಡಾ. ಎಲ್. ಹನುಮಂತಯ್ಯ ಅವರು ಕಾಂಗ್ರೆಸ್ ಪಕ್ಷದ ಸಿದ್ಧಾಂತ ಹಾಗೂ ಭಾರತೀಯ ಸಂವಿಧಾನ ಕುರಿತು ಮಾತನಾಡಿ, ಸಂವಿಧಾನಾತ್ಮಕ ಮೌಲ್ಯಗಳನ್ನು ರಕ್ಷಿಸುವ ಜವಾಬ್ದಾರಿ ಕಾರ್ಯಕರ್ತರ ಮೇಲಿದೆ ಎಂದು ತಿಳಿಸಿದರು.ಮುಖ್ಯ ಸಂಯೋಜಕ ಸುಧೀರಕುಮಾರ ಮುರೊಳ್ಳಿ ಮಾತನಾಡಿ, ಕೋಮುವಾದಿ ರಾಜಕಾರಣದಿಂದ ದೇಶದ ಏಕತೆ ಮತ್ತು ಸಹಬಾಳ್ವೆಗೆ ಅಪಾಯ ಉಂಟಾಗುತ್ತದೆ ಎಂದು ಎಚ್ಚರಿಸಿದರು.

ಉಪಾಧ್ಯಕ್ಷರಾದ ಅಬ್ದುಲ್ ಮುನೀರ್, ಎಸ್.ಐ.ಆರ್ ಮತ್ತು ಬಿಎಗಳ ಪಾತ್ರ ಕುರಿತು ವಿವರಿಸಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವತಂತ್ರ ಸಂಸ್ಥೆಗಳ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಕಾರ್ಯಕರ್ತರಿಗೆ ಅರಿವು ಮೂಡಿಸಿದರು.

ಕಾರ್ಯಾಗಾರದಲ್ಲಿ ಮುಖ್ಯ ಸಂಯೋಜ-ಕರಾದ ಶರಣಪ್ಪ ಕೊಟಗಿ, ಜಿ.ಪಂ. ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ದಯಾನಂದ ಪಾಟೀಲ ಹಾಗೂ ಮುಖಂಡ ಮಲ್ಲಿಕಾರ್ಜುನ ಹುಲ್ಲಪ್ಪ ಮೇಟಿ ಅವರು ಮಾತನಾಡಿ, ಪಕ್ಷದ ಸಂಘಟನೆ ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಉಮೇಶ ಮೇಟಿ, ಸಂಯೋಜಕ ಪಿ.ಕೆ. ನೀರಲಕಟ್ಟಿ ಉಪಸ್ಥಿತರಿದ್ದರು. ಸುನೀಲ ಬಾಲಗಾವಿ ಸ್ವಾಗತಿದರು. ಶ್ರೀಧರ ನೀಲನಾಯಕ ಕಾರ್ಯಕ್ರಮ ನಿರೂಪಿಸಿದರು.

ಜಿಲ್ಲೆಯ ವಿವಿಧ ಬ್ಲಾಕ್‌ಗಳ ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ರಾಷ್ಟ್ರೀಯ ಯುವ ದಿನಾಚರಣೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**




ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಸಾಮರ್ಥ್ಯ, ಜ್ಞಾನಸಂಪತ್ತು ಯುವಕರಿಗೆ ಆದರ್ಶವಾಗಿಲಿ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು, ಹಿರಿಯ ಸಿವಿಲ್ ನ್ಯಾಯಾಧೀಶರಾದ ಚಂದ್ರಶೇಖರ ದಿಡ್ಡಿ ಹೇಳಿದರು.

ನಗರದ ಬಿವಿವ ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು; ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬಾಗಲಕೋಟೆ; ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬಾಗಲಕೋಟೆ, ಹಾಗೂ ಅಸೋಸಿಯೇಷನ್, ಬಾಗಲಕೋಟೆ ಇವಗಳ ಸಂಯೋಗದಲ್ಲಿ ಬುಧವಾರ ಹಮ್ಮಿಕೊಂಡ ಸ್ವಾಮಿ ವಿವೇಕಾನಂದ ಜಯಂತಿ ರಾಷ್ಟ್ರೀಯ ಯುವ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಸ್ವಾಮಿ ವಿವೇಕಾನಂದರು ಸಾಮಾನ್ಯ ವ್ಯಕ್ತಿಗಿಂತ ಸಾವಿರಪಟ್ಟು ಹೆಚ್ಚಿನ ಬುದ್ಧಿಶಕ್ತಿ ಹೊಂದಿದ್ದ ಮಹಾನ್ ಚಿಂತಕರು, ಚಿಕಾಗೋ ವಿಶ್ವಧರ್ಮ ಸಮ್ಮೇಳದಲ್ಲಿ ಕೊನೆಯವರಾಗಿ ಭಾಷಣ ಮಾಡಿದರೂ ಜಗತ್ತನ್ನೇ ಆಕರ್ಷಿಸಿದ ಅವರ ಬೌದ್ಧಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯ ಯುವಕರಿಗೆ ಆದರ್ಶವಾಗಿದೆ, ಇಂದಿನ ವಿದ್ಯಾರ್ಥಿಗಳು ಮೊಬೈಲ್, ರೀಲ್ಸಗಳ ಹಿಂದೆ ಬೀಳದೆ, ಹೆಚ್ಚು ಪುಸ್ತಕ ಓದಿ ಜ್ಞಾನ ಸಂಪಾದಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಜಗನ್ನಾಥ ಚವ್ಹಾಣ ಅವರು ಏಳಿ ಎದ್ದೇಳಿ ಗುರಿ ಮುಟ್ಟುವತನಕ ನಿಲ್ಲದಿರಿ ಸದೃಢ ದೇಹದಲ್ಲಿ ಸದೃಢ ಮನಸು ಇರುತ್ತದೆ ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಇಂದಿನ ಯುಕರಿಗೆ ಮನದಟ್ಟು ಮಾಡಿಕೊಟ್ಟರು. ಯುವಕರು ಗುರಿ, ನಿಷ್ಠೆ ಮತ್ತು ಶಿಸ್ತುಬದ್ಧ ಜೀವನವನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ರಾಷ್ಟ್ರೀಯ ಯುವ ದಿನಾಚರಣೆಯ ಅಂಗವಾಗಿ ಭಾಷಣ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಲಾದ ಭಾಷಣ ಸ್ಪರ್ಧೆಯ ವಿಷಯಗಳು ಕನ್ನಡ ಶಕ್ತಿಶಾಲಿ ಹಾಗೂ ಸುಸ್ಥಿರ ಭಾರತದ ನಿರ್ಮಾಣಕ್ಕಾಗಿ ಯುವಶಕ್ತಿಯ ಸಬಲೀಕರಣ ಭಾಷಣ ಸ್ಪರ್ಧೆಯಲ್ಲಿ, ಪ್ರಥಮ ಸ್ಥಾನ ತೇಜಸ್ವಿನಿ ದೊಡ್ಡಮನಿ, ದ್ವಿತೀಯ ಸ್ಥಾನ ಮಾಯರಾಜ್, ತೃತೀಯ ಸ್ಥಾನ ಗುರುಪಾದಯ್ಯ ಇನ್ನು ಪ್ರಬಂಧ ಸ್ಪರ್ಧೆಯ ವಿಷಯಗಳಲ್ಲಿ ಕನ್ನಡ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಕುರಿತು ಸ್ವಾಮಿ ವಿವೇಕಾನಂದರ ದೃಷ್ಟಿಕೋನ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಯಜ್ಞಪತಿ ಪೂಜಾರಿ, ದ್ವಿತೀಯ ಸ್ಥಾನ ಪೂರ್ಣಿಮಾ ಬೋಕಿ, ತೃತೀಯ ಸ್ಥಾನ ಅಮೃತಾ ಪಂಡರಪುರ ಅವರುಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಕಾರ್ಯಕ್ರಮದ ವೇದಿಕೆಯಲ್ಲಿ ಐಕ್ಯೂಎಸಿ ಸಂಯೋಜಕಿ ಶ್ರೀಮತಿ ಗಿರಿಜಾ ಎಂ. ನಾವದಗಿ, ಸಿಬ್ಬಂದಿ ಕಾರ್ಯದರ್ಶಿ ಡಾ. ಎಂ. ನಂಜುಂಡಸ್ವಾಮಿ ಹಾಗೂ ಮಹಾವಿದ್ಯಾಲಯದ ಇತರ ಉಪನ್ಯಾಸಕರು ಉಪಸ್ಥಿತರಿದ್ದರು. ಶ್ರೀಮತಿ ನಂದಿನಿ ಎನ್. ದೊಡ್ಡಮನಿ ಅವರು ಸ್ವಾಗತ ಭಾಷಣ ಮಾಡಿದರು ಹಾಗೂ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀಮತಿ ಶೀತಲ್ ವಿ. ಬಾರ್ಷಿ ಅವರು ವಂದನಾರ್ಪಣೆ ಸಲ್ಲಿಸಿದರು.

ಪೋಟೋ01 ವಿವಿಧ ಸ್ಪರ್ದೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ವಿತರಿಸಿದರು.

# ವೇಮನ ಮನುಕುಲದ ಬೆಳಕು



• **ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ:**

ತತ್ವಜ್ಞಾನಿ ಮಹಾಯೋಗಿ ವೇಮನರ ತತ್ವ ಚಿಂತನೆಗಳು ಮನುಕುಲಕ್ಕೆ ಬೆಳಕಾಗಿವೆ ಎಂದು ಶಿರೂರ ಹೇಮರಡ್ಡಿ ಮಲ್ಲಮ್ಮ ವಿಕಾಸ ಸಮಿತಿ ಅಧ್ಯಕ್ಷ ಎಸ್.ಬಿ.ಮಾಚಾ ಹೇಳಿದರು. ತಾಲ್ಲೂಕಿನ ಶಿರೂರ ಪಟ್ಟಣದಲ್ಲಿ ನಡೆದ ಮಹಾಯೋಗಿ ವೇಮನರ 614ನೆಯ ಜಯಂತಿ ಕಾರ್ಯಕ್ರಮದಲ್ಲಿ ವೇಮನ ಹಾಗೂ ಹೇಮರಡಿ

ಮಲ್ಲಮ್ಮ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ, ಮನುಷ್ಯನ ಸರಳ ಹಾಗೂ ಸಾರ್ಥಕ ಬದುಕಿಗೆ ಮಹಾಯೋಗಿ ವೇಮನರು ತಮ್ಮ ಪದ್ಯಗಳ ಮೂಲಕ ಮಾರ್ಗ ತೋರಿದ್ದಾರೆ. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸುಂದರ ಬದುಕು ಕಟ್ಟಿಕೊಳ್ಳಬೇಕು ಎಂದರು. ಎಸ್.ಎಫ್.ಬಾರಡ್ಡಿ, ನೀಲಪ್ಪ ಕೋಟಿಕಲ್ಲ, ಬಿ.ಬಿ. ನಡುವಿನಮನಿ, ರವಿ ಗಿರಿಜಾ, ರಾಮಣ್ಣ ಬೆನ್ನೂರ, ಮುತ್ತು ಹಳದೂರ, ಜಗದೀಶ ದಾಸಪ್ಪನವರ, ರಾಮಣ್ಣ ಕೋಟಿಕಲ್ಲ, ಸಿಂಧೂರಪ್ಪ ಬಾರಡ್ಡಿ, ರಂಗಪ್ಪ ಮಳ್ಳಿ, ನಿಂಗಪ್ಪ ಕರಲಿಂಗನ್ನವರ ಸೇರಿದಂತೆ ರೆಡ್ಡಿ ಸಮಾಜದ ಹಿರಿಯರು, ಯುವಕರು ಹಾಗೂ ಮಹಿಳೆಯರು, ಹೇಮರಡ್ಡಿ ಮಲ್ಲಮ್ಮ ವಿಕಾಸ ಸಂಸ್ಥೆಯ ಪಧಾದಿಕಾರಿಗಳು ಇದ್ದರು.

**ರಾಜ್ಯಮಟ್ಟದ ಭಜನಾ ಸ್ಪರ್ಧೆ : ತೋಳಮಟ್ಟಿ ತಂಡಕ್ಕೆ ಪ್ರಶಸ್ತಿ**

# ಅಕಾಡೆಮಿ ಪ್ರಶಸ್ತಿಗೆ ಭಜನಾ ಕಲಾವಿದರನ್ನೂ ಪರಿಗಣಿಸಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**



ರಾಜ್ಯ ಸಂಗೀತ ನೃತ್ಯ ಅಕಾಡೆಮಿ ನೀಡುವ ಪ್ರಶಸ್ತಿಗಳಿಗೆ ಭಜನಾ ಕಲಾವಿದರನ್ನೂ ಪರಿಗಣಿಸಬೇಕು ಎಂದು ಖ್ಯಾತ ಹಿಂದೂಸ್ತಾನಿ ಗಾಯಕ, ನಿವೃತ್ತ ಪ್ರಾಚಾರ್ಯ ಪ್ರೊ.ಸಿದ್ಧರಾಮಯ್ಯ ಮಠಪತಿ(ಗೋರಟಾ) ಹೇಳಿದರು. ತಾಲ್ಲೂಕಿನ ಬೆನಕಟ್ಟಿ ಗ್ರಾಮದಲ್ಲಿ ಹೇಮರಡ್ಡಿ ಮಲ್ಲಮ್ಮ ಭಜನಾ ಮಂಡಳಿ ಗುರುವಾರ ಸಂಜೆ ಏರ್ಪಡಿಸಿದ್ದ ರಾಜ್ಯಮಟ್ಟದ ಭಜನಾ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು. ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಕಲಾವಿದರಿಗೆ ಪ್ರಶಸ್ತಿ ನೀಡುತ್ತಿದೆ. ಆದರೆ ಭಜನಾ ಕಲಾವಿದರನ್ನು ಪ್ರಶಸ್ತಿಗೆ ಪರಿಗಣಿಸುತ್ತಿಲ್ಲ. ಭಜನೆಯೂ ಒಂದು ಕಲೆಯಾಗಿರುವುದರಿಂದ ಪ್ರಶಸ್ತಿಗೆ ಅವರನ್ನೂ ಪರಿಗಣಿಸಿ ಭಜನಾ ಕಲೆ ಹಾಗೂ ಕಲಾವಿದರನ್ನು ಗೌರವಿಸುವ ಕೆಲಸವಾಗಬೇಕಿದೆ ಎಂದರು. ನಂತರ ನಡೆದ ಭಜನಾ ಸ್ಪರ್ಧೆಯಲ್ಲಿ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ತೋಳಮಟ್ಟಿಯ ಸದ್ಗುರು ರಾಮಾರೂಢ ಭಜನಾ ಮಂಡಳಿ ಪ್ರಥಮ ಸ್ಥಾನ ಪಡೆಯಿತು. ವಿವಿಧ ಜಿಲ್ಲೆಗಳ 21 ಭಜನಾ ತಂಡಗಳು ಭಾಗವಹಿಸಿದ್ದ ಸ್ಪರ್ಧೆಯಲ್ಲಿ ಮುಧೋಳ ತಾಲ್ಲೂಕಿನ ಮುಗಳಖೋಡದ ಚೌಡೇಶ್ವರಿ ಭಜನಾ ತಂಡ ದ್ವಿತೀಯ ಸ್ಥಾನ, ಮುಧೋಳ ತಾಲ್ಲೂಕಿನ ಕಿಲ್ಲಾ ಹೊಸಕೋಟೆಯ ದುರ್ಗಾದೇವಿ ಭಜನಾ ತಂಡ ತೃತೀಯ ಹಾಗೂ ಬಾದಾಮಿ ತಾಲ್ಲೂಕಿನ ಕಗಲಗೊಂಬದ ರಾಮಾನಂದ ಭಜನಾ ಮಂಡಳಿ ಚತುರ್ಥ ಸ್ಥಾನ ಪಡೆದವು. ಹಿರಿಯ ಕಲಾವಿದರಾದ ನಿಂಗಪ್ಪ ಅರ-ಕೇರಿ, ರಾಮನಗೌಡ ಓದುಗೌಡರ ನಿರ್ಣಾಯಕರಾಗಿದ್ದರು.

# ರಕ್ಷಣಾಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಾಯಚೂರು ಕಚೇರಿಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಅನಾಥ, ಪರಿತ್ಯಕ್ತ, ಒಪ್ಪಿಸಲ್ಪಟ್ಟ, ಪೋಷಕರ ಸಂಪರ್ಕದಲ್ಲಿಲ್ಲದ ಮಕ್ಕಳನ್ನು ಗುರುತಿಸಿ ದತ್ತು ಪ್ರಕ್ರಿಯೇಗೆ ಒಳಪಡಿಸುವ ಜವಾಬ್ದಾರಿ ಒಳಗೊಂಡ ರಕ್ಷಣಾಧಿಕಾರಿ (ಅಸಾಂಸ್ಥಿಕ) ಸೃಜಿಸಿದ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ಸಮಾಜ ವಿಜ್ಞಾನ/ಮಕ್ಕಳ ಅಭಿವೃದ್ಧಿ/ಮಾನವ ಹಕ್ಕುಗಳ ಸಾರ್ವಜನಿಕ ಆಡಳಿತ/ಮನೋವಿಜ್ಞಾನ/ಮನಃಶಾಸ್ತ್ರ/ಕಾನೂನು/ಸಾರ್ವಜನಿಕ ಆರೋಗ್ಯ/ಸಮೂದಾಯ ಸಂಪನ್ಮೂಲ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಹೊಂದಿರಬೇಕು. ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಲ್ಲಿ ಕನಿಷ್ಠ 2 ವರ್ಷ ಸೇವೆ ಸಲ್ಲಿಸಿದ ಬಗ್ಗೆ ಕೆಲಸದ ಅನುಭವ ಹೊಂದಿರಬೇಕು. ಕಂಪ್ಯೂಟರ್ ಬಳಕೆಯಲ್ಲಿ ಪರಿಣಿತಿ ಹೊಂದಿರಬೇಕು. ಅರ್ಜಿ ಸಲ್ಲಿಸಬಯಸುವ ಅರ್ಹ ಅಭ್ಯರ್ಥಿಗಳು ದಿನಾಂಕ: 04-02-2026ರೊಳಗೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಲಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾರ್ಯಲಯ ಮ.ನಂ. 1-9-138 ಮಾರೆಮ್ಮ ದೇವಸ್ಥಾನದ ಹತ್ತಿರ, ಆಜಾದ ನಗರ ರಾಯಚೂರು (ದೂ.ಸಂಖ್ಯೆ: 08532-226226) ಇಲ್ಲಿಗೆ ಸಲ್ಲಿಸಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶ್ರೀ ಅಮರೇಶ ಹಾವಿನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನವನಗರ ಸ.ಪ್ರ.ದ ಕಾಲೇಜಿನ ವಿದ್ಯಾರ್ಥಿಗಳು ವಿವಿ ಬ್ಲೂ ಆಗಿ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಪರಿಶ್ರಮ ಮತ್ತು ನಿರಂತರ ಅಭ್ಯಾಸದಿಂದ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಬಾಗಲಕೋಟೆ ವಿಶ್ವವಿದ್ಯಾಲಯದ ಹಾಕಿ ಮತ್ತು ಕ್ರಿಕೆಟ್ ತಂಡಕ್ಕೆ ತಲಾ ಇಬ್ಬರು ವಿಶ್ವವಿದ್ಯಾಲಯದ ಬ್ಲೂ ಆಗಿ ಆಯ್ಕೆಯಾಗಿದ್ದಾರೆ ಎಂದು ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಹೇಳಿದರು.

ಅವರು ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾ ವಿಭಾಗದ ಆಶ್ರಯದಲ್ಲಿ ಶುಕ್ರವಾರ ಕಾಲೇಜಿನ ಆವರಣದಲ್ಲಿ ಕಾಲೇಜಿನ ಕ್ರೀಡಾಪಟುಗಳಾದ ವಿಶಾಲ ಲಮಾಣಿ (ಹಾಕಿ), ಯಶವಂತ ನಾಯಕ (ಹಾಕಿ) ಮತ್ತು ಭೂಪತಿ ಲಮಾಣಿ (ಕ್ರಿಕೆಟ್), ನಾಗರಾಜ ಲಕ್ಕುಂಡಿ (ಕ್ರಿಕೆಟ್) ಇವರಿಗೆ ಸನ್ಮಾನಿಸಿ, ಅಭಿನಂದನೆ ಸಲ್ಲಿಸಿ ಮಾತನಾಡಿದರು. ಮಾತನಾಡಿದರು. ಬಾಗಲಕೋಟೆ ವಿಶ್ವವಿದ್ಯಾಲಯ ಮಟ್ಟದ ಕ್ರೀಡೆಯಲ್ಲಿ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವ ಮೂಲಕ ಕಾಲೇಜಿನ ಕೀರ್ತಿಯನ್ನು ಬೆಳಗಿಸಿದ್ದಾರೆ. ವಿದ್ಯಾರ್ಥಿಗಳು ಕ್ರೀಡಾ ಮನೋಭಾವದೊಂದಿಗೆ ಆದರ್ಶ ಬದುಕು ಕಟ್ಟಿಕೊಳ್ಳಬೇಕೆಂದು ಹೇಳಿದರು.

ಕ್ರೀಡಾ ವಿಭಾಗದ ನಿರ್ದೇಶಕರಾದ ನೀಲಪ್ಪ ಕುರಿ ಅವರು ಮಾತನಾಡಿ, ಪದವಿ ಕಲಿಯುವ ವಿದ್ಯಾರ್ಥಿಗಳು ಕ್ರೀಡಾ ಕ್ಷೇತ್ರದಲ್ಲಿರುವ ಸಾಕಷ್ಟು ಅವಕಾಶಗಳನ್ನು ಬಳಸಿಕೊಂಡು ಸಾಧಕರಾಗಬೇಕೆಂದು ಹೇಳಿದರು. ಪ್ರಸಕ್ತ ಸಾಲಿನಲ್ಲಿ ನಮ್ಮ ಕಾಲೇಜಿನ ಹಾಕಿ ಮತ್ತು ಕ್ರಿಕೆಟ್ ಕ್ರೀಡೆಗಳಲ್ಲಿ ಇಬ್ಬರು ವಿದ್ಯಾರ್ಥಿಗಳು ಜಮಖಂಡಿಯ ಬಾಗಲಕೋಟೆ ವಿಶ್ವವಿದ್ಯಾಲಯದ ಬ್ಲೂ ಆಗಿ ಆಯ್ಕೆಯಾಗಿದ್ದಾರೆ. ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ತಾಲೂಕಾ ಮಟ್ಟದ ಪ್ರಗತಿ ಪರಿಶೀಲನೆ



ಬಾಗಲಕೋಟೆ : ತಾಲೂಕಾ ಪಂಚಾಯತ ಸಭಾಭವನದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕಾ ಮಟ್ಟದ ಅಧ್ಯಕ್ಷರಾದ ಎಸ್.ಎನ್.ರಾಂಪೂರ ಅವರ ಅಧ್ಯಕ್ಷತೆಯಲ್ಲಿ ಶಕ್ತಿ ಯೋಜನೆ, ಅನ್ನಭಾಗ್ಯ, ಗೃಹಲಕ್ಷ್ಮೀ, ಗೃಹ ಜ್ಯೋತಿ ಹಾಗೂ ಯುವನಿಧಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಗುರುವಾರ ಜರುಗಿತು.

ಪಂಚ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಅನುಷ್ಠಾನ

ಇಲಾಖೆಯ ಅಧಿಕಾರಿಗಳು ತಮ್ಮ ತಮ್ಮ ಇಲಾಖೆಯ ಪ್ರಗತಿ ವರದಿಯನ್ನು ಸಭೆಗೆ ತಿಳಿಸಿದರು. ಗೃಹಲಕ್ಷ್ಮೀ ಯೋಜನೆಯಡಿ 60551 ಗುರಿ ಪೈಕಿ ನೋಂದಣಿಯಾದ 55036 ಫಲಾನುಭವಿಗಳು ಲಾಭ ಪಡೆಯುತ್ತಿರುವುದಾಗಿ ತಿಳಿಸಿದರು. ಅನ್ನಭಾಗ್ಯ ಯೋಜನೆಯಡಿ ಸಮರ್ಪಕವಾಗಿ ಆಹಾರಧಾನ್ಯ ವಿತರಿಸಲಾಗಿದೆ ಎಂದು ತಿಳಿಸಿದರು.

ಶಕ್ತಿಯೋಜನೆಯಡಿ ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು 3.88 ಕೋಟಿ ಮಹಿಳೆಯರು ಪ್ರಯಾಣಿಸಿದ್ದಾರೆ. ಯುವನಿಧಿ ಯೋಜನೆಯಡಿ ಸೆಪ್ಟೆಂಬರ-2025ರ ಮಾಹೆಯವರೆಗೆ ಒಟ್ಟು 5.29 ಕೋಟಿ ರೂ.ಗಳಷ್ಟು ಅರ್ಹ ಫಲಾನುಭವಿಗಳಿಗೆ ಜಮೆ ಮಾಡಲಾಗಿದೆ. ಗೃಹ ಜ್ಯೋತಿ ಯೋಜನೆಯಡಿ

ಡಿಸೆಂಬರ 2025ರ ವೆರೆಗೆ 9764.60 ಲಕ್ಷಗಳ ರಿಯಾಯಿತಿ ನೀಡಿರುವುದಾಗಿ ಹೆಸ್ಕಾಂ ಅಧಿಕಾರಿಗಳು ಸಭೆಗೆ ತಿಳಿಸಲಾಯಿತು.

ಸಭೆಯಲ್ಲಿ ತಾಲೂಕಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಕಾರ್ಯದರ್ಶಿ ಹಾಗೂ ತಾ.ಪಂ ಇಓ ಸುಭಾಷ ಸಂಪಗಾವಿ, ಸದಸ್ಯರಾದ ರೇಣುಕಾ ನ್ಯಾಮಗೌಡ, ಜಟ್ಟೆಪ್ಪ ಮಾದಾಪೂರ, ಶ್ರವಣಕುಮಾರ ಖಾತೇದಾರ, ಚನವೀರಪ್ಪ ಅಂಗಡಿ, ಎ.ಎಲ್.ಹವಾಲದಾರ, ಹನಮಂತ ಪೂಜಾರ, ಮಂಜುನಾಥ ಕಾಜೂರ, ರಂಗಪ್ಪ ಮಳ್ಳಿ, ಶಿವಪ್ಪ ರಾಠೋಡ, ರವೀಂದ್ರ ಅನವಾಲ ಸೇರಿದಂತೆ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಫೆಬ್ರವರಿ 07ರಂದು ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಗೃಹಜ್ಯೋತಿ, ಯುವ ನಿಧಿ, ಅನ್ನಭಾಗ್ಯ, ಗೃಹ ಲಕ್ಷ್ಮಿ ಹಾಗೂ ಶಕ್ತಿ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಜೈದ್ ಖಾನ್ ಕಲ್ಟ್ ಚಲನಚಿತ್ರ ಅದ್ದೂರಿ ಪ್ರಾರಂಭ




• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಇಲ್ಲಿನ ಶಾರದಾ ಚಿತ್ರಮಂದಿರದಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್ ಪುತ್ರ ಜೈದ್ ಖಾನ್ ನಟನೆಯ ಕಲ್ಟ್ ಚಿತ್ರವನ್ನು ಅವರ ಅಭಿಮಾನಿಗಳು ಪಟಾಕಿ ಸಿಡಿಸಿ ಜಾಂಜ್ ಮೇಳದೊಂದಿಗೆ ಆರಂಭ ಮಾಡಲಾಯಿತು. ಈ ಸಂದರ್ಭದಲ್ಲಿ ಉತ್ತರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಾರ್ಯದರ್ಶಿ ಮಂಜುನಾಥ ಜಿ. ಗೊಂಡಬಾಳ, ಚಿತ್ರ ಸಾಹಿತಿ ಮಹಾಂತೇಶ ಮಲ್ಲನಗೌಡರ, ಚಿತ್ರ ನಿರ್ದೇಶಕ ಬಸವರಾಜ ಕೊಪ್ಪಳ, ಮುಖಂಡರಾದ ನಾಗರಾಜ ಮೇಟಿ ಇತರರು ಇದ್ದರು. ನಂತರ ಮಾಜಿ ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಅವರ ನೇತೃತ್ವದಲ್ಲಿ ನೂರಾರು ಜನರು ಚಲನಚಿತ್ರ ವೀಕ್ಷಿಸಿದರು. ಕಲ್ಟ್ ಚಿತ್ರ ಯುವ ನಟ ಜೈದ್ ಖಾನ್ ಅವರ ಎರಡನೇ ಚಿತ್ರವಾಗಿದ್ದು ಚಿತ್ರದಲ್ಲಿ ಖ್ಯಾತ ನಟಿ ಡಿಂಪಲ್ ಕ್ವೀನ್ ರಚಿತಾ ರಾಮ್ ವಿಶೇಷ ಪಾತ್ರದಲ್ಲಿ ನಟಿಸಿದ್ದು, ಮಲೈಕಾ ನಾಯಕಿಯಾಗಿ ನಟಿಸಿದ್ದಾರೆ. ಜನೇವರಿ 23 ರಂದು ರಾಜ್ಯಾದ್ಯಂತ ಪ್ರದರ್ಶನ ಕಂಡಿತು.

# ರಾಯಚೂರು ಉತ್ಸವ: ಫೆ, 2, 3ರಂದು ಮಕ್ಕಳ ಹಬ್ಬ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಫೆಬ್ರವರಿ 02 ಹಾಗೂ 03ರಂದು ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಮಕ್ಕಳ ಹಬ್ಬ-2026ರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ. ಕಾರ್ಯಕ್ರಮದಲ್ಲಿ ಮೆಗಾ ಮ್ಯಾಜಿಕ್ ಸ್ಟಾರ್ ಕುದ್ರೋಳಿ ಗಣೇಶ್ ಬಳಗದ ದಿಂದ ವಿಸ್ಮಯ ಜಾದೂ, ಮಜಾ ಟಾಕೀಸ್ ಖ್ಯಾತಿಯ ಅಶೋಕ್ ಪೊಳಲಿಯವರಿಂದ ವಿಭಿನ್ನ ಶೈಲಿಯ ಬೃಹತ್ ಗಾತ್ರದ ಕೋಳಿ ನೃತ್ಯ ಹಾಗೂ ರೋಬೋಟಿಕ್ ಪ್ರಾಣೀಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಯಚೂರು ಜಿಲ್ಲಾ ಉತ್ಸವ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಂಗ್ರೆಸ್: ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದ್ದೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ರಾಜ್ಯಪಾಲರಿಗೆ ವಿಧಾನ ಮಂಡಲವನ್ನು ಉದ್ದೇಶಿಸಿ ಭಾಷಣ ಮಾಡುವ ಪರಮಾಧಿಕಾರವನ್ನು ಸಂವಿಧಾನ ನೀಡಿದೆ, ಆದರೆ, ರಾಜ್ಯ ಸರಕಾರ ನೀಡಿರುವ ಭಾಷಣವನ್ನು ವಿವೇಚನಾರಹಿತವಾಗಿ ಓದುವ ಯಾವ ಕಡ್ಡಾಯ ನಿಯಮವೂ ಇಲ್ಲ, ಯಾವ ಅಂಶಗಳನ್ನು ಉಲ್ಲೇಖಿಸಬೇಕು,

ಬೇಡ ಎನ್ನುವುದು ರಾಜ್ಯಪಾಲರಿಗೆ ಸಂವಿಧಾನ ದತ್ತವಾದ ಹಕ್ಕು, ಕಾಂಗ್ರೆಸ್ ಸರ್ಕಾರ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದ್ದೆ, ಅಧಿವೇಶನದಲ್ಲಿ ಕಾಂಗ್ರೆಸ್ ನಾಯಕರು ರಾಜ್ಯಪಾಲರಿಗೆ ಅಪಮಾನ ಮಾಡಿರುವುದು ಇಡೀ ಕರ್ನಾಟಕ ತಲೆ ತಗ್ಗಿಸುವಂತಹ ಸಂಗತಿಯಾಗಿದೆ.

ಜಿ. ರಾಮ್ ಜಿ ಯೋಜನೆ ಜನರ ದೃಷ್ಠಿಯಿಂದ ಉತ್ತಮವಾದ ಯೋಜನೆ, ಜನತೆಯ ಬದುಕನ್ನು ಬದಲಾಯಿಸುವಂತಹ ಯೋಜನೆ, ರಾಜಕೀಯ ವೇದಿಕೆಗಳಲ್ಲಿ ಯೋಜನೆಯನ್ನು ಟೀಕಿಸುವುದು ಬೇರೆ, ಆದರೆ ರಾಜ್ಯಪಾಲರ ಮೂಲಕ ಕೇಂದ್ರವನ್ನು ಟೀಕಿಸುವುದುದನ್ನು ಒಪ್ಪಲು ಸಾಧ್ಯವಿಲ್ಲ, ಇದು ಸಂವಿಧಾನದ ಹುದ್ದೆಯ ದುರ್ಬಳಕೆಯಾಗುತ್ತದೆ, ರಾಜ್ಯಪಾಲರು ಸಂವಿಧಾನಾತ್ಮಕ ಆಲೋಚಿಸಿಯೇ ನಿರ್ಧಾರ ಕೈಗೊಂಡಿದ್ದಾರೆ.

## 26ರಂದು ಗಣರಾಜ್ಯೋತ್ಸವ ಕಾರ್ಯಕ್ರಮ

**ಯಾದಗಿರಿ:** 2026ರ ಜನವರಿ 26ರಂದು ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಯಾದಗಿರಿ ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರು ತಿಳಿಸಿದ್ದಾರೆ.

ಗಣರಾಜ್ಯೋತ್ಸವ ದಿನಾಚರಣೆಯ ಕಾರ್ಯಕ್ರಮದ ಧ್ವಜಾರೋಹಣವನ್ನು ಅಂದು ಬೆಳಿಗ್ಗೆ 8 ಗಂಟೆಗೆ ಜಿಲ್ಲಾಡಳಿತ ಆವರಣದ ಮಧ್ಯಭಾಗದದಲ್ಲಿ ನೆರವೇರಿಸಲಾಗುತ್ತಿದ್ದು, ಈ ಕಾರ್ಯಕ್ರಮಕ್ಕೆ ಜಿಲ್ಲಾಡಳಿತ ಭವನದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಬೆಳಿಗ್ಗೆ 7.30 ಗಂಟೆಗೆ ಈ ಕಛೇರಿ ಆವರಣದಲ್ಲಿ ಹಾಜರಿರಲು ಹಾಗೂ ಧ್ವಜಾರೋಹಣ ಕಾರ್ಯಕ್ರಮವು ಮುಗಿದ ನಂತರ ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ ಗಣರಾಜ್ಯೋತ್ಸವ ದಿನಾಚರಣೆಯ ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಹಾಜರಿರಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಚನಗ್ರಂಥ ಹೊತ್ತ ಪ್ರಭುದೇವ ಸ್ವಾಮಿಜಿ



**ಬಸವಕಲ್ಯಾಣ :** ಪಟ್ಟಣಕ್ಕೆ ಪಂಚರಾತ್ರಿ ಹಳ್ಳಿಗಳಿಗೆ ಏಕರಾತ್ರಿ ಎನ್ನುವ ಮಾತು ಮೊದಲಿನಿಂದಲೂ ನಾವೆಲ್ಲ ಕೇಳುತ್ತಾ ಬಂದಿದ್ದೇವೆ. ಆದರೆ ಪ್ರಭುದೇವ ಮಹಾಸ್ವಾಮೀಜಿಯವರು ಹಳ್ಳಿಗಳಿಗೆ ಪಂಚರಾತ್ರಿಯಂತೆ ಪ್ರವಚನಗಳು ಮಾಡುತ್ತ ಇಷ್ಟಲಿಂಗ ದೀಕ್ಷ ನೀಡುತ್ತ ತಲೆಮೇಲೆ ವಚನಗ್ರಂಥ ಹೊತ್ತು ವಚನಗಳು ಮೆರೆಸುತ್ತ ವಚನ ವಿಜಯೋತ್ಸವ ಆಚರಿಸುತ್ತ ಸದೃಢ ಸಮಾಜ ಕಟ್ಟಲು 770 ಪ್ರವಚನಗಳ ಸಂಕಲ್ಪ ಹೊತ್ತು ರಾಜ್ಯಕ್ಕೆ ಮಾದರಿಯಾಗಿದ್ದಾರೆ ಎಂದು ಸಾಹಿತಿ ರಮೇಶ ಮಠಪತಿ ತಿಳಿಸಿದರು.

ತಾಲೂಕಿನ ಮುಸ್ತಾಪುರ ಗ್ರಾಮ ಅತ್ಯಂತ ಕುಗ್ರಾಮ. ಕೇವಲ 60 ಮನೆಗಳು ಹೊಂದಿರುವ ಇಂಥ ಅತಿ ಚಿಕ್ಕ ಗ್ರಾಮದಲ್ಲಿಯೂ ಐದು ದಿನಗಳ ಕಾಲ ವಚನ ಜೀವನ ಪ್ರವಚನ ನಿಡಿ. ಜಾತಿ-- ಮತ -ಪಂಥ ನೋಡದೆ, ಬಡವ- ಬಲ್ಲಿದ ಎನ್ನದೆ, ದೊಡ್ಡಊರು- ಚಿಕ್ಕಊರು ಎಂಬ ಭೇದ ಮಾಡದೆ, ಪ್ರತಿಯೊಬ್ಬರ ಮನದಾಳದಲ್ಲಿ ವಚನಗಳು ಬಿತ್ತುವ ಕಾರ್ಯ ಮಾಡಿರುವುದು ಅತ್ಯಂತ ಮಾದರಿ ಕಾರ್ಯ ಎಂದು ತಿಳಿಸಿದ್ದರು. ಮುಖ್ಯ ಅತಿಥಿಗಳಾಗಿ ಗೊರಟಾ ಗ್ರಾಮದ ನೀಲಮ್ಮನ ಬಳಗದ ಅಧ್ಯಕ್ಷರಾದ ವಿಜಯಲಕ್ಷ್ಮಿ ರಾಜೋಳೆ. ಧನೂರ ಕೆ ಗ್ರಾಮದ ನೀಲಮ್ಮನ ಬಳಗದ ಅಧ್ಯಕ್ಷರಾದ ಸಂಗೀತಾ ಬಿರಾದಾರ. ಲಿಂಗಾಯತ ಸೇವಾದಳದ ಅಧ್ಯಕ್ಷರಾದ ಸುಪ್ರೀತ ಪತಂಗೆ ಹಾಗೂ ಶರಣೆ ಗೋದಾವರಿ ತಾಯಿಯವರು ಗ್ರಾಮದ ಹಿರಿಯರಾದ ದಯಾನಂದ ಪಾಟೀಲ, ಮಾರುತಿ ಪಾಟೀಲ, ರೇವಣಪ್ಪ ಪಾಟೀಲ, ಪ್ರಕಾಶ ಪಾಟೀಲ, ಬಾಲಾಜಿ ಪಾಟೀಲ ಸೇರಿದಂತೆ ಅನೇಕರು ಭಾಗವಹಿಸಿದರು.ಪ್ರಜ್ವಲ ಪತಂಗೆ ನಿರೂಪಿಸಿದರು. ಗ್ರಾಮದ ಹಿರಿಯರು ಮಕ್ಕಳು, ತಾಯಂದಿರು ತಲೆಮೇಲೆ ವಚನ ಗ್ರಂಥ ಹೊತ್ತು ಆನಂದದಿಂದ ಹೆಜ್ಜೆ ಹಾಕಿದರು.

## ಬ್ರಿಟಿಷ್ ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದ ಬೋಸ್: ಖಂಡಾಳೆ



**ಭಾಲ್ಕಿ:** ನಮ್ಮ ದೇಶವನ್ನು ಬ್ರಿಟಿಷರ ದಾಸ್ಯದ ಸಂಕೋಲೆಯಿಂದ ಬಿಡಿಸಲೇಬೇಕೆಂದು ಪಣ ತೊಟ್ಟಿದ್ದ ನೇತಾಜಿ ಅವರು ಬ್ರಿಟಿಷ್ ಸರ್ಕಾರಕ್ಕೆ ತಮ್ಮ ಪ್ರಖರ ನಿಲುವುಗಳಿಂದಲೇ ಬಿಸಿ ಮುಟ್ಟಿಸಿದ್ದರು ಎಂದು ಎಸ್ಸೆಸ್ಸೆಲ್ಸಿ ಸಂಯೋಜಕ ಪ್ರವೀಣ ಖಂಡಾಳೆ ಹೇಳಿದರು.

ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಸುಭಾಷ ಚಂದ್ರ ಬೋಸ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಬೋಸರು ಆಜಾದ್ ಹಿಂದ್ ಪೌಜ್ ಎಂಬ ಸೇನೆಯನ್ನು ಕಟ್ಟಿದ್ದರು. ಶ್ರೇಷ್ಠ ದೇಶಭಕ್ತರಾಗಿದ್ದ ಅವರು ವಿದೇಶದಲ್ಲೂ ಸ್ವಾತಂತ್ರ್ಯ ಹೋರಾಟವನ್ನು ಸಂಘಟಿಸಿದ್ದರು ಎಂದರು. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ದೇಶ, ವಿದೇಶದಲ್ಲಿ ಸುತ್ತಾಡಿದ ಅವರು ಬ್ರಿಟಿಷರಿಗೇ ಸಿಂಹಸ್ವಪ್ನವಾಗಿ ಕಾಡಿದ್ದರು. ತಮ್ಮ ಪ್ರಖರ ಚಿಂತನೆಯ ಮೂಲಕವೇ ಎಲ್ಲರ ಮನಸ್ಸು ಗೆದ್ದಿದ್ದ ನೇತಾಜಿ, ದೇಶ ಪ್ರೇಮದ ಕಿಚ್ಚಿನಿಂದಲೇ ಆಗಸದೆತ್ತಕ್ಕೆ ಬೆಳೆದಿದ್ದರು ಎಂದು ತಿಳಿಸಿದರು. ಮುಖ್ಯಶಿಕ್ಷಕರಾದ ಮಹೇಶ ಮಹಾರಾಜ್, ಮಹೇಶ ಕುಲಕರ್ಣಿ, ಶ್ರೀದೇವಿ ಕುಲಕರ್ಣಿ, ಗೋದಾವರಿ ಚಿದ್ರೆ ಸೇರಿದಂತೆ ಇತರರು ಇದ್ದರು.

## ಕಲಾವಿದರಿಗೆ ಸನ್ಮಾನ

**ಕಲಬುರಗಿ:** ಕರ್ನಾಟಕ ದಲಿತ ಸರ್ವೋದಯ ಸಮಿತಿ(ರಿ )ಹಾಗೂ ಜೈ ಶಾರದಾಂಬೆ ವಿವಿದ್ದೋಶ ಕಲಾವಿದರ ಸಂಘ(ರಿ ) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಕಲಾವಿದರಿಗೆ ಸನ್ಮಾನ ಕಾರ್ಯಕ್ರಮ ಗಾನ ಕೋಗಿಲೆ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಇದೇ ದಿನಾಂಕ 23.1.2026ರಂದು ನಗರದ ಕನ್ನಡ ಭವನದಲ್ಲಿ ಬೆಳಗ್ಗೆ 11:00ಗೆ ಏರ್ಪಡಿಸಲಾಗಿತ್ತು.



ಕಾರ್ಯಕ್ರಮದ ಉದ್ಘಾಟಕರಾಗಿ ದಕ್ಷಿಣ ಮತಕ್ಷೇತ್ರದ ಮಾಜಿ ಶಾಸಕರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲ್ಬುರ್ಗಿಯ ಮಾಜಿ ಅಧ್ಯಕ್ಷರಾದ ಸನ್ಮಾನ ಶ್ರೀ ದತ್ತಾತ್ರೇಯ ರೆವುರ್ ಪಾಟೀಲ್ ಆಗಮಿಸಿ ಕಾರ್ಯಕ್ರಮದ ಆಯೋಜ-ಕರಿಂದ ಆಯ್ಕೆ ಮಾಡಲಾದ ಕಲಾವಿದರಿಗೆ ಗಾನ ಕೋಗಿಲೆ ಪ್ರಶಸ್ತಿಯನ್ನು ವಿತರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಡಾಕ್ಟರ್ ಜಿ ಎಸ್ ನಿಂಗರಾಜ್ ಅರಸ್ ಸಹಾಯಕ ನಿರ್ದೇಶಕರು ಗ್ರೇಡ್ 1 ಸಮಾಜ ಕಲ್ಯಾಣ ಇಲಾಖೆ ಹುಮ್ನಾಬಾದ್ ಇವರು ಸಂಗೀತ ಕ್ಷೇತ್ರದಲ್ಲಿ ಸಾಧಿಸಿದ ಗಣನೀಯ ಸೇವೆಯನ್ನು ಪರಿಗಣಿಸಿ ಇವರಿಗೂ ಸಹ ಗಾನ ಕೋಗಿಲೆ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

## ಶರಣರ ನುಡಿಗಳಿಂದ ಜೀವನ ಪಾವನ

• ಪರಶುರಾಮ ಕರಣಂ, ಭಾಲ್ಕಿ

ಶರಣರನುಡಿಗಳಿಂದಜೀವನಪಾವನಗೊಳ್ಳುತ್ತದೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು ನುಡಿದರು. ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಗುರುವಾರ ಆಯೋಜಿಸಿದ್ದ 319 ನೆಯ ಮಾಸಿಕ ಶರಣ ಸಂಗಮ ಮತ್ತು ಹಾನಗಲ್ ಕುಮಾರೇಶ್ವರ ಪ್ರಸಾದ ನಿಲಯದ 90ನೆಯ ವರ್ಷಿಕೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಡಾ.ಚನ್ನಬಸವಪಟ್ಟದ್ದೇವರು ಶಿವಯೋಗ ಮಂದಿರದಲ್ಲಿ ಅಧ್ಯಯನಗೈದು ಹಾನಗಲ್ಲ ಕುಮಾರೇಶ್ವರ ಮಹಾಶಿವಯೋಗಿಗಳ ದಿವ್ಯಸನ್ನಿಧಾನದಲ್ಲಿ 1924 ರಲ್ಲಿ ಭಾಲ್ಕಿ ಹಿರೇಮಠ ಸಂಸ್ಥಾನದ ಪಟ್ಟಾಧಿಕಾರ ವಹಿಸಿಕೊಂಡರು. ಪೂಜ್ಯರು ಶಿವಯೋಗ ಮಂದಿರದಿಂದ ಬರುವಾಗ ಮಠದ ಗುಲಾಮನಾಗಬೇಡ ನಿಜಾಮ ಪ್ರಾಂತದಲ್ಲಿ ಕನ್ನಡ ಪ್ರಸಾರ ಮಾಡು ಎಂದು ಹಾನಗಲ್ಲ ಶ್ರೀಗಳು ಅಪ್ಪಣೆ ಮಾಡಿದರು.

ಪೂಜ್ಯರು ಅದರಂತೆ, 1936ರಲ್ಲಿ ಮರ್ಗಿಯಲ್ಲಿ (ತೆಲಂಗಾಣಕ್ಕೆ ಸೇರಿದೆ) ಶಾಂತಿರ್ಧಕ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಶಾಂತಿ-ರ್ಧಕ ಕನ್ನಡ ಪಾಠಶಾಲೆ ಜೊತೆಗೆ ಶ್ರೀ ಹಾನಗಲ್ಲ ಕುಮಾರೇಶ್ವರ ಪ್ರಸಾದ ನಿಲಯ





ಆರಂಭಿಸಿದರು. ಮುಷ್ಠಿಫಂಡದ ಮೂಲಕ ಧಾನ್ಯ ಸಂಗ್ರಹಿಸಿ ಪ್ರಸಾದ ನಿಲಯದಲ್ಲಿ ಮಕ್ಕಳಿಗೆ ಪ್ರಸಾದ ವ್ಯವಸ್ಥೆ ಮಾಡಿದರು.

ಈ ಪ್ರಸಾದ ನಿಲಯದಲ್ಲಿ ಕಲಿತ ವಿದ್ಯರ್ಥಿಗಳು ಇಂದು ಶಿಕ್ಷಣ ಜೊತೆಗೆ ಸಂಸ್ಕಾರ ಕಲಿತು ದೊಡ್ಡದೊಡ್ಡ ಹುದ್ದೆಯಲ್ಲಿ ಕರ್ಯನರ್ವಹಿಸುತ್ತಾ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ.

ಶರಣರು ಸಂತರು, ಮಹಾತ್ಮರು ಹಾಗೂ ಮಹಾಪುರುಷರು, ಆಡಿದ ನುಡಿಗಳು ಪರುಷ ಸಮಾನ. ಅವುಗಳಿಗೆ ಸರಿದೊರೆಯಾದ ವಸ್ತು ಈ ಜಗತ್ತಿನಲ್ಲಿ ಮತ್ತೊಂದಿಲ್ಲ. ಅಂತಹ ಶರಣರ ನುಡಿಗಳನ್ನು ದಿನನಿತ್ಯ ಹೇಳುತ್ತ ಶಿಕ್ಷಣ ಜೊತೆಗೆ ಸಂಸ್ಕಾರ ಪಡೆದುಕೊಳ್ಳುತ್ತಾ ಸುಮಾರು 400 ವಿದ್ಯರ್ಥಿಗಳು ಈ ಪ್ರಸಾದ ನಿಲಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಭಾಲ್ಕಿ ಹಿರೇಮಠದ ಹಳೆ ವಿದ್ಯರ್ಥಿಗಳ ಸಂಘದ ಅಧ್ಯಕ್ಷ ನಾಗಯ್ಯಸ್ವಾಮಿ ಸ್ವಾಗತಿಸಿದರು. ದೀಪಕ ಠಮಕೆ ನಿರೂಪಿಸಿದರು. ಬಾಬು ಬೆಲ್ದಾಳ ಪ್ರಸಾದ ನಿಲಯದ ವರದಿ ವಾಚನ ಮಾಡಿದರು. ಬಸವರಾಜ ಮಾಳಗೆ ಶರಣು ಸರ್ಪಣೆ ಮಾಡಿದರು. ವೈಜಿನಾಥ ಹಣಮಂತ ಜರ್ಗೆ ಇಸ್ಲಾಂಪೂರ ಅವರಿಂದ ಭಕ್ತಿದಾಸೋಹ ನಡೆಯಿತು. ಹಾನಗಲ್ ಕುಮಾರೇಶ್ವರ ಪ್ರಸಾದ ನಿಲಯದ ಮಕ್ಕಳಿಂದ ನಡೆದ ಸಾಂಸ್ಕೃತಿಕ ಕರ್ಯಕ್ರಮಗಳು ನೋಡುಗರ ಮನ ರಂಜಿಸಿತು.

**ಸನ್ಮಾನ:** ತೆಲಂಗಾಣ ರಾಜ್ಯದಲ್ಲಿ ಸಾಮಾಜಿಕ ಹಾಗೂ ರಾಜಕೀಯ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ, ರವಿಕುಮಾರ ಹಣಮಂತರಾವ ಪಾಟೀಲ ಶಿವಶರಣಪ್ಪ ಮಾಧವರಾವ ಮಾಳಗೆ, ಸಂಗಮ್ಮ ಸಂಗಶೆಟ್ಟಿ ಪಾಟೀಲ, ಅನೀಲಕುಮಾರ ಪಾಟೀಲ, ಅಂಬರೀಶ ಸಂಗಶೆಟ್ಟಿ, ಸಂತೋಷ ಶಂಕರೆಪ್ಪ ಅಂಬಾಜಿ ಇನ್ನಿತರರನ್ನು ಸನ್ಮಾನಿಸಲಾಯಿತು.

## ಪುತ್ಥಳಿಯ ಗುದ್ದಲಿ ಪೂಜೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತೆಂಕಲಕೊಪ್ಪಲು ಗ್ರಾಮದಲ್ಲಿ ಇಂದು ಡಾಕ್ಟರ್ ಶಿವಕುಮಾರ ಸ್ವಾಮೀಜಿ ಅವರ ಪುಣ್ಯ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಹುಣಸೂರು ತಾಲೂಕಿನ ಶಾಸಕರಾದ ಜಿ.ಡಿ ಹರೀಶ್‌ಗೌಡರು ಅವರ ಪುತ್ತಳಿಯ ಗುದ್ದಲಿ ಪೂಜೆಗೆ ಗ್ರಾಮಸ್ಥರ ಸಹಕಾರೊಂದಿಗೆ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಉದ್ಯಮಿ ಶ್ರೀಧರ್, ಜೆಡಿಎಸ್ ಮುಖಂಡರಾದ ಕಿರಂಗೂರು ಬಸವರಾಜು, ಪ್ಯಾಕ್ಸ್ ನಿರ್ದೇಶಕ ಗೋವಿಂದೇಗೌಡ, ಜಿ.ಮಂಜುನಾಥ್ ನಿವೃತ್ತ ಐಟಿಸಿ ಸಿಇಒ, ಕೂಸಪ್ಪ ಹಾಗೂ ಗ್ರಾಮಸ್ಥರು, ಯಜಮಾನರು ಹಾಜರಿದ್ದು. ಕಾರ್ಯಕ್ರಮದಲ್ಲಿ ನಿವೃತ್ತಿಯಾದ ಶಿಕ್ಷಕರಿಗೆ ಸನ್ಮಾನ ಹಾಗೂ ಡಾ. ಬಿಆರ್ ಅಂಬೇಡ್ಕರ್ ಯುವ ಸೇನಾ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ರಂಜಿತಾ ಮಹಿಳಾ ಜೆಡಿಎಸ್ ಮುಖಂಡರು ಭಾಗವಹಿಸಿದ್ದರು.



## ಪುಸ್ತಕ ಸಂತೆ, ಜ್ಞಾನಭಂಡಾರ ಹೆಚ್ಚಿಸಿ: ಮಹೇಶ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ನಗರದ ಸಾಯಿ ಸ್ಕೂಲ್ ಆವರಣದಲ್ಲಿ ದಿನಾಂಕ 24,25 ಮತ್ತು 26 ಜನವರಿ 2026 ರಂದು ವೀರಕಪುತ್ರ ಶ್ರೀನಿವಾಸ, ಭಾಲ್ಕಿ ಹಿರೇಮಠ ಸಂಸ್ಥಾನ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಆಯೋಜಿಸಲಾಗಿರುವ ವೀರಲೋಕ ಪುಸ್ತಕ ಸಂತೆಯ ಸದುಪಯೋಗವನ್ನು ಜಿಲ್ಲೆಯ ಸಮಸ್ತ ನಾಗರಿಕರು ಪಡೆದುಕೊಳ್ಳಬೇಕೆಂದು ಬುದ್ಧ ಬಸವ ಅಂಬೇಡ್ಕರ್ ಯುವ ಸಂಘಟನೆ ಹಾಗೂ ಬುದ್ಧ ಬೆಳಕು ಟ್ರಸ್ಟ್ ಅಧ್ಯಕ್ಷ ಮಹೇಶ ಗೋರನಾಳಕರ್ ಅವರು ಪತ್ರಿಕಾ ಪ್ರಕಟಣೆಯ ಮೂಲಕ ಮನವಿ ಮಾಡಿದ್ದಾರೆ.

ವೀರಲೋಕ ಪುಸ್ತಕ ಸಂತೆಯಲ್ಲಿ ಸಾಹಿತಿಗಳು, ಕವಿಗಳು, ಬರಹಗಾರರು, ಓದುಗರು, ಹೋರಾಟಗಾರರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಮಕ್ಕಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಶಾಲಾ ಮತ್ತು ಕಾಲೇಜುಗಳ ಮುಖ್ಯಸ್ಥರು ಸೇರಿದಂತೆ ಎಲ್ಲಾ ವರ್ಗದ ಸಾರ್ವಜನಿಕರು ಕುಟುಂಬ ಸಮೇತವಾಗಿ



ಭಾಗವಹಿಸಬೇಕು ಎಂದು ಅವರು ತಿಳಿಸಿದ್ದಾರೆ. ಪ್ರತಿಯೊಬ್ಬ ನಾಗರಿಕರೂ ಕನಿಷ್ಠ ಒಂದು ಪುಸ್ತಕವನ್ನು ಖರೀದಿಸುವ ಮೂಲಕ ಓದುವ ಸಂಸ್ಕೃತಿಯನ್ನು ಬೆಳೆಸಬೇಕು ಹಾಗೂ ತಮ್ಮ ಜ್ಞಾನಭಂಡಾರವನ್ನು ವಿಸ್ತರಿಸಿಕೊಳ್ಳಬೇಕು ಎಂದು ಅವರು ಕೋರಿದ್ದಾರೆ. ಇಂದಿನ ಸಂದರ್ಭದಲ್ಲಿ ಪುಸ್ತಕ ವಾಚನದ ಅಭಿರುಚಿ ಕುಸಿಯುತ್ತಿರುವುದು ಸಮಾಜದ ದೃಷ್ಟಿಯಿಂದ ಆತಂಕಕಾರಿ ವಿಷಯವಾಗಿದೆ. ಈ ಹಿನ್ನಲೆಯಲ್ಲಿ ವೀರಲೋಕ ಪುಸ್ತಕ ಸಂತೆ ಸಾರ್ವಜನಿಕರಿಗೆ ಲಭಿಸಿರುವ ಮಹತ್ವದ ಅವಕಾಶವಾಗಿದ್ದು, ಯಾವುದೇ ಕಾರಣ-ಕ್ಕೂ ಈ ಅವಕಾಶವನ್ನು ಕೈಮೀರಿ ಹೋಗದಂತೆ ಜಿಲ್ಲೆಯ ಜನತೆ ಜಾಗರೂಕತೆ ವಹಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಕಾಮಗಾರಿಗಳ ತನಿಖೆ ನಡೆಸಲು ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಹುಮನಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಕೆಲ ವರ್ಷಗಳಲ್ಲಿ ನಡೆದಿರುವ ಸರ್ಕಾರಿ ಕಾಮಗಾರಿಗಳಲ್ಲಿ ಭಾರೀ ಅಕ್ರಮಗಳು, ಗುಣಮಟ್ಟದ ಕೊರತೆ ಹಾಗೂ ಹಣದ ದುರುಪಯೋಗ ನಡೆದಿದೆ ಎಂಬ ಆರೋಪಗಳು ವ್ಯಾಪಕವಾಗಿದ್ದು, ಈ ಹಿನ್ನೆಲೆಯಲ್ಲಿ ಕ್ಷೇತ್ರದ ಎಲ್ಲಾ ಕಾಮಗಾರಿಗಳ ಮೇಲೆ ಸಮಗ್ರ ತನಿಖೆ ನಡೆಸಬೇಕು ಎಂದು ಸಾರ್ವಜನಿಕರು ಗಟ್ಟಿಯಾಗಿ ಒತ್ತಾಯಿಸಿದ್ದಾರೆ.

ರಸ್ತೆ ನಿರ್ಮಾಣ, ಕುಡಿಯುವ ನೀರು ಯೋಜನೆ, ಒಳಚರಂಡಿ, ಶಾಲಾ ಕಟ್ಟಡಗಳು, ಅಂಗನವಾಡಿ, ಆಸ್ಪತ್ರೆಗಳ ಅಭಿವೃದ್ಧಿ ಸೇರಿದಂತೆ ಹಲವು ಕಾಮಗಾರಿಗಳು ಕಾಗದದ ಮೇಲೆ ಪೂರ್ಣಗೊಂಡಂತೆ ತೋರಿಸಲಾಗಿದ್ದರೂ, ಸ್ಥಳೀಯವಾಗಿ ಅವುಗಳ ಸ್ಥಿತಿ ಅತೀವ ದಯನೀಯವಾಗಿದೆ ಎಂದು ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೆಲವು ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು, ಕೆಲವು ಕಾಮಗಾರಿಗಳು ಆರಂಭವಾದ ಕೆಲವೇ ತಿಂಗಳಲ್ಲಿ ಹಾಳಾಗಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಸಾರ್ವಜನಿಕ ಹಣ ದುರುಪಯೋಗವಾಗುತ್ತಿರುವ ಬಗ್ಗೆ ಅನೇಕ ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಿರುವ ಸ್ಥಳೀಯರು, ಸ್ವತಂತ್ರ ತನಿಖಾ ತಂಡ ರಚಿಸಿ, ಎಲ್ಲ ಕಾಮಗಾರಿಗಳ ಲೆಕ್ಕಪತ್ರ ಮತ್ತು ಗುಣಮಟ್ಟ ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಇದಕ್ಕೂ ಮೊದಲು ನಡೆದ ಕಾಮಗಾರಿಗಳಲ್ಲಿ ತಪ್ಪಿತಸ್ಥರಾದ ಗುತ್ತಿಗೆದಾರರು, ಅಧಿಕಾರಿಗಳು ಹಾಗೂ ರಾಜಕೀಯ ಪ್ರಭಾವ ಬಳಸಿ ಅಕ್ರಮ ನಡೆಸಿದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಹಾಗೂ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

## ಸಮಾನತೆ ಸಾರುವದರ ಜೊತೆಗೆ ಮೌಲ್ಯ ಕಾಪಾಡಬೇಕು

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಶಿಕ್ಷಣವನ್ನು ನೀಡುತ್ತಿರುವ ಸಂಸ್ಥೆಯು ಸಾಮಾಜಿಕ ಮೌಲ್ಯ ಕಾಪಾಡುವಲ್ಲಿ ಸಮಾನತೆಯನ್ನು ತೋರಿದೆ ಎಂದು ಕೊಪ್ಪಳ ವಿಶ್ವ ವಿದ್ಯಾಲಯದ ಉಪಕುಲಪತಿ ಡಾ.ಎಸ್.ವಿ.ಡಾಣಿ ಹೇಳಿದರು.

ಪಟ್ಟಣದ ಜ್ಞಾನ ಸಾಗರ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಜ್ಞಾನವಾಹಿನಿ ಪ್ರೌಢ ಶಾಲೆಯ "ರಜತ ಮಹೋತ್ಸವ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಶಿಕ್ಷಣದಿಂದ ಮಾತ್ರ ಏನೆಲ್ಲಾ ಸಾಧಿಸಬಹುದು ಆ ಕಾರಣಕ್ಕಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಮಹತ್ವ ನೀಡುತ್ತಿರುವುದು ಸ್ವಾಗತಾರ್ಹವಾಗಿವೆ . ಅಭ್ಯಾಸ ಬಲದಿಂದ ಒಳ್ಳೆ ಹವ್ಯಾಸವನ್ನು ರೂಢಿಸಿಕೊಂಡು ಶ್ರೇಷ್ಠವಾದ ವಿದ್ಯೆಯನ್ನು ಪಸರಿಸುವ ಕೆಲಸವನ್ನು ಮಾಡುವ ಜ್ಞಾನ ಸಾಗರದ ಶಾಲೆಯು ಅಮೂಲ್ಯವಾದ ಅಕ್ಷರ ಹಾಗೂ ಜ್ಞಾನ ದಾಸೋಹ ನೀಡುವಲ್ಲಿ ಕೊಡುಗೆಯನ್ನು ನೀಡಿದೆ ಎಂದರು ವಿದ್ಯೆಯಿಂದ ವಿನಯ ಬರಬೇಕು ಅಹಂಕಾರವನ್ನು ಹೊಂದಿದ ವ್ಯಕ್ತಿ ಎಷ್ಟೇ ಜ್ಞಾನವನ್ನು ಪಡೆದರು ವ್ಯರ್ಥ ಎಂದರು. ಇಪ್ಪತ್ತುಐದು ವರುಷಗಳವರೆಗೆ ನಿರಂತರವಾಗಿ ಗುಣಮಟ್ಟದ ಜ್ಞಾನ ದಾಸೋಹ



ನೀಡಿದ ಜ್ಞಾನ ಸಾಗರ ಸಂಸ್ಥೆ ಉತ್ತರೋತ್ತರವಾಗಿ ಬೆಳೆದು ಜಿಲ್ಲೆಯಲ್ಲಿಯೇ ಹೆಸರು ಗಳಿಸಲಿ ಎಂದು ಶುಭಕೋರಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ.ಹುಲಿಕಲ್ ನಟರಾಜರವರ ವಿಜ್ಞಾನ ಪವಾಡ ರಹಸ್ಯ ಬಯಲು ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು ಅಜ್ಞಾನದಿಂದ ಸುಜ್ಞಾನದಡೆಗೆ ಕರೆದುಕೊಂಡು ಹೋಯಿತು. ಅನೇಕ ಪವಾಡಗಳು ನಿಜಎಂದು ಬಿಂಬಿಸುವ ಜನರನ್ನು ನಂಬಬೇಡಿ ಎಲ್ಲಾ ಪವಾಡಗಳ ಹಿಂದೆ ವೈಜ್ಞಾನಿಕ ಕಾರಣಗಳು ಇರುವವು ಅವುಗಳನ್ನು ರಹಸ್ಯವಾಗಿ ಇಟ್ಟು ಅಮಾಯಕ ಜನರನ್ನು ವಂಚಿಸುವ ಜಾಲದ ಬಗ್ಗೆ ಎಚ್ಚರದಿಂದ ಇರಬೇಕು ಎಂದರು. ಹಲವಾರು ಪವಾಡಗಳನ್ನು ಮಾಡುವಾಗ ಜನರು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದಾಗ ಮಂತ್ರಮುಗ್ಧರನ್ನಾಗಿ ಮಾಡಿದರೂ ಅದರ ಹಿಂದಿನ ವೈಜ್ಞಾನಿಕ ಕಾರಣಗಳನ್ನು ಬಿಚ್ಚಿಟ್ಟು ಜಾಗ್ರತೆ ಮೂಡಿಸಿದರು. ಅಸತ್ಯವನ್ನು ಸತ್ಯವೆಂದು ಬಿಂಬಿಸುವ ಜನರು ಹೆಚ್ಚಾಗಿದ್ದಾರೆ ಅದರ ಬಗ್ಗೆ ಎಚ್ಚರವಿರಿ ಎಂದು ಕಿವಿಮಾತು ಹೇಳಿದರು.

ನರೇಗಲ್ಲಿನ ಎಸ್.ಎ.ಕಾಲೇಜಿನ ನಿ.ಪ್ರಾಚಾರ್ಯರಾದ ಪ್ರೊ.ಅರವಿಂದ ಸಜ್ಜನರವರ "ಸಮ್ಮೋಹನ" ಕಾರ್ಯಕ್ರಮವು ಗಮನ ಸೆಳೆಯಿತು. ಹಲವಾರು ವಿದ್ಯಾರ್ಥಿಗಳ ಮೇಲೆ ಸಮ್ಮೋಹನ ಮಾಡಿದರು. ಸುಶಿಕ್ಷಿತರ ಹಾಗೂ ಸಮಾರಾಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಹಾಗೂ ಜಿ.ಪಂ.ಮಾಜಿ ಸದಸ್ಯರಾದ ಸಿ.ಎಚ್.ಪೋ.ಪಾಟೀಲ ವಹಿಸಿದ್ದರು.

ಶ್ರೀಕಾಂತ ಸಜ್ಜನರವರು ಪಂಚಶೀಲಗಳ ಮಹತ್ವವನ್ನು ವಿವರಿಸಿದರು. ಹಿಂದೂ ಜಾಗರಣ ಸಮಿತಿಯ ಜಿಲ್ಲಾಧ್ಯಕ್ಷರಾದರವರು ಮಾತನಾಡಿದರು.

ಜಿ.ಪಂ.ಮಾಜಿ ಉಪಾಧ್ಯಕ್ಷರಾದ ವೆಂಕಣ್ಣಯರಾಶಿ, ಆರ್.ಡಿ.ಸಿ.ಸಿ ಬ್ಯಾಂಕ ನಿರ್ದೇಶಕರಾದ ಶೇಖರಗೌಡ ಉಳ್ಳಾಗಡ್ಡಿ, ಡಾ. ಶರಣಪ್ಪ ಕೊಪ್ಪಳ, ಶಿಕ್ಷಣಾಧಿಕಾರಿಗಳ ಸಂಘದ ತಾಲೂಕಾಧ್ಯಕ್ಷ ಬಸವರಾಜ ಮಾಸ್ತಿ, ವೀರಣ್ಣ ಹುಬ್ಬಳ್ಳಿ, ತಾಲೂಕಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಎಸ್.ವಿ.ಧರಣಾ, ವೀರಣ್ಣ ನಿಂಗೋಜಿ . ಜಸ್ವಂತರಾಜ ಜೈನ್ ಸಂಸ್ಥೆಯ ಕಾರ್ಯದರ್ಶಿ ನಾಗರಾಜ ಕೊಪ್ಪಳ, ಶಿವಕುಮಾರ ಕಳ್ಳಿಮಠ, ವಿನಯ ಹಿರೇಮಠ, ಮಹಾಂತೇಶ ಗೌಡ್ರ, ಪುಷ್ಪಾ, ಸವಿತಾ ಇನ್ನಿತರರು ವೇದಿಕೆ ಮೇಲೆ ಉಪಸ್ಥಿತರಿದ್ದರು.

## ಬೌದ್ಧಿಕ ವಿಕಾಸಕ್ಕೆ ವಸ್ತು ಪ್ರದರ್ಶನ ಪ್ರೇರಣೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಬೌದ್ಧಿಕ ವಿಕಾಸಕ್ಕೆ ವಸ್ತು ಪ್ರದರ್ಶನಗಳು ಪ್ರೇರಣೆಯಾಗಲಿದೆ ಎಂದು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಸದಾನಂದ ಪೆರ್ಲ ಹೇಳಿದರು.

ಕಲಬುರಗಿ ಆಳಂದ ರಸ್ತೆಯಲ್ಲಿರುವ ಶ್ರೀ ಸಂಗಪ್ಪ ಶೆಟ್ಟಿ ಸ್ಮಾರಕ ಶಾಲೆಯಲ್ಲಿ ಜ.22ರಂದು ವಿದ್ಯಾರ್ಥಿಗಳ "ಭಾರತೀಯ ಜ್ಞಾನ ವಿಕಾಸ ಮಹೋತ್ಸವ " ವಸ್ತು ಪ್ರದರ್ಶನ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿ ವಿದ್ಯಾರ್ಥಿಗಳನ್ನು ಕೇವಲ ಅಂಕ ಸೃಷ್ಟಿಯ ಯಂತ್ರಗಳನ್ನಾಗಿಸದೆ ಸೃಜನಶೀಲತೆ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸುವ ಚಟುವಟಿಕೆಗಳಲ್ಲಿ ಪಠ್ಯಕ್ಕೆ ಪೂರಕವಾಗುವ ವಸ್ತುಪ್ರದರ್ಶನ ಏರ್ಪಡಿಸುವುದು ಸೂಕ್ತ ಪ್ರತಿಭೆಗಳನ್ನು ಮತ್ತು ಸೃಜನಶೀಲತೆಯನ್ನು ಹೆಚ್ಚಿಸುವ ಪ್ರಯತ್ನವಾಗಿದೆ. ಕೇವಲ ಸರ್ಟಿಫಿಕೇಟ್ ಪಡೆಯುವ ವಿದ್ಯಾರ್ಥಿಗಳನ್ನಾಗಿಸದೆ ಪಾಲಕರು ತಮ್ಮ ಮಕ್ಕಳನ್ನು ಬಹುಮುಖ ಆಯಾಮಗಳಲ್ಲಿ ಬೆಳೆಸಿ ಉತ್ತಮ ರಾಷ್ಟ್ರ ಪ್ರಜೆಯಾಗುವ ಇಂತಹ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು ಇಂದಿನ



ಅಗತ್ಯವಾಗಿದೆ ಎಂದು ಡಾ.ಪೆರ್ಲ ಹೇಳಿದರು.

ಜ.19 ರಿಂದ ಪ್ರಾರಂಭಗೊಂಡ ವಿದ್ಯಾರ್ಥಿಗಳ ವಿಶೇಷ ಪ್ರತಿಭಾ ಸಾಮರ್ಥ್ಯವನ್ನು ಬೆಳಕಿಗೆ ತರುವ "ಭಾರತೀಯ ಜ್ಞಾನ ವಿಕಾಸ ಮಹೋತ್ಸವ" ವಸ್ತು ಪ್ರದರ್ಶನಗಳು ನೋಡುಗರಲ್ಲಿ ಕುತೂಹಲ ಸೃಷ್ಟಿಸಿದೆ. ಸುಮಾರು 50ಕ್ಕೂ ಹೆಚ್ಚು ಪ್ರಾತ್ಯಕ್ಷಿಕೆಗಳು ಕನ್ನಡ ಸಾಹಿತ್ಯ ವೈಜ್ಞಾನಿಕ ಕ್ಷೇತ್ರದ ವಿಸ್ಮಯ, ಗಣಿತ ಕ್ಷೇತ್ರದ ಕೌತುಕ ,ಪರಿಸರ ಸಂರಕ್ಷಣೆ,ಆರೋಗ್ಯ ಸಂರಕ್ಷಣೆ,ರೊಬೋಟಿಕ್ ತಂತ್ರಜ್ಞಾನ, ನೀರಿನ ಸದ್ಬಳಕೆ, ವಿರಾಸತ್ ಕಲಬುರಗಿಯಿಂದ ವಿಕಾಸ ಕಲಬುರಗಿ ನಡೆ, ಮಂಗನಿಂದ ಮಾನವ ಆವಿಷ್ಕಾರ, ಪರಿಸರದ ಬದುಕು, ಪಾರಂಪರಿಕ ಬದುಕು ಮುಂತಾದ ಪ್ರಾತ್ಯಕ್ಷಿಕೆಗಳನ್ನು ಒಂದನೇ ತರಗತಿಯಿಂದ ಹತ್ತನೇ ತರಗತಿಯ ವರೆಗಿನ ಸುಮಾರು 900 ವಿದ್ಯಾರ್ಥಿಗಳನ್ನು ಹೊಂದಿದ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ್ದರು. ಮಾತ್ರವಲ್ಲದೆ ಪ್ರಾತ್ಯಕ್ಷಿಕೆಗಳ ಬಗ್ಗೆ ಸಾರ್ವಜನಿಕರಿಗೆ ವಿವರಣೆ ನೀಡಿ ಜಾಗೃತಿ ಮೂಡಿಸಿದರು. ಕಲಬುರಗಿ ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಪ್ರೊ.ಚಂದ್ರಕಾಂತ ಕೆಳಮನಿಯವರು ವಸ್ತು ಪ್ರದರ್ಶನವನ್ನು ಉದ್ಘಾಟಿಸಿದ್ದರು. ಶ್ರೀ ಸಂಗಪ್ಪ ಶೆಟ್ಟಿ ಸ್ಮಾರಕ ಶಾಲೆಯ ಅಧ್ಯಕ್ಷರಾದ ನ್ಯಾಯವಾದಿ ಗಿರಿಜಾಶಂಕರ್ ಶೆಟ್ಟಿ ಹಾಗೂ ಕೋಶಾಧಿಕಾರಿ ಸುಜಾತಾ ಶೆಟ್ಟಿ ಅಮೂಲ್ಯ ಸಂಗಪ್ಪ ಶೆಟ್ಟಿ, ಸವಿತಾ ಗುತ್ತೇದಾರ್ ಮುಂತಾದವರು ವಿದ್ಯಾರ್ಥಿ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿ ವಿಶೇಷವಾಗಿ ವಸ್ತು ಪ್ರದರ್ಶನವನ್ನು ಆಯೋಜಿಸಿದ್ದರು.

ಶಾಲೆಯ ನಿರ್ದೇಶಕ ಹಾಗೂ ಉದ್ಯಮಿಗಳಾದ ಸಂಗಪ್ಪ ಶೆಟ್ಟಿ ಸ್ವಾಗತಿಸಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶಿವಾನಂದ ದೋಶೆಟ್ಟಿ ಹಾಗೂ ಸಂಯೋಜಕರಾದ ಶ್ರೀಮತಿ ಪದ್ಮಿನಿ ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)